ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ನವೆಂಬರ್ 14, 2020

ಸಂಪುಟ : 47 ಸಂಚಿಕೆ : 195 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 8 ರೂ : 3.00 www.janathavani.com janathavani@mac.com

## ಪಾಕ್‌ಗೆ ತಿರುಗೇಟು : 8 ಸೈನಿಕರು ಹತ

**ಗಡಿಯಲ್ಲಿ ಪಾಕ್‌ನ ಅಪ್ರಚೋದಿತ ದಾಳಿಗೆ ಐವರು ಸೈನಿಕರೂ ಸೇರಿದಂತೆ ಹನ್ನೊಂದು ಜನರ ಸಾವು**

ನವದೆಹಲಿ, ನ. 13 – ಪಾಕಿಸ್ತಾನ ನಿಯಂತ್ರಣ ರೇಖೆಯಲ್ಲಿ ಹಲವೆಡೆ ಕದನ ವಿರಾಮ ಉಲ್ಲಂಘಿಸಿದ್ದಕ್ಕೆ ಭಾರತೀಯ ಪಡೆಗಳು ತಿರುಗೇಟು ನೀಡಿದಾಗ ಪಾಕಿಸ್ತಾನದ ಕನಿಷ್ಠ ಎಂಟು ಸೈನಿಕರು ಹತರಾಗಿದ್ದಾರೆ ಎಂದು ಸೈನ್ಯದ ಮೂಲಗಳು ತಿಳಿಸಿವೆ.

ಪಾಕಿಸ್ತಾನದ 2-3 ಕಮಾಂಡೋಗಳೂ ಸಹ ಹತರಾದವರಲ್ಲಿ ಸೇರಿರುವುದಾಗಿ ಭಾರತೀಯ ಸೈನ್ಯದ ಮೂಲಗಳು ತಿಳಿಸಿವೆ.

ಭಾರತೀಯ ಸೈನಿಕ ಪಡೆಗಳು ಶೆಲ್ ದಾಳಿ ನಡೆಸಿದಾಗ ಪಾಕಿಸ್ತಾನಕ್ಕೆ ಭಾರೀ ನಷ್ಟವಾಗಿದೆ ಎಂದು ರಕ್ಷಣಾ ಪಡೆಗಳ ವಕ್ತಾರರು ಹೇಳಿದ್ದಾರೆ.

ಪಾಕಿಸ್ತಾನ ಅಪ್ರಚೋದಿತವಾಗಿ ಗುಂಡಿನ ದಾಳಿ ನಡೆಸಿತ್ತು. ಮಾರ್ಟರ್ ಹಾಗೂ ಇತರೆ ಶಸ್ತ್ರಗಳನ್ನು ಬಳಸಿ ನಿಯಂತ್ರಣ ರೇಖೆಯುದ್ದಕ್ಕೂ ಹಲವು ವಲಯಗಳಲ್ಲಿ ದಾಳಿ ನಡೆಸಿತ್ತು. ದವರ್, ಕೇರನ್, ಉರಿ ಹಾಗೂ ನೌಗಾಮ್ ಸೇರಿದಂತೆ ಹಲವು ಕಡೆಗಳಲ್ಲಿ ನಾಗರಿಕ ಪ್ರದೇಶಗಳ ಮೇಲೆ ದಾಳಿ ನಡೆಸಿತ್ತು.

ಇದಕ್ಕೆ ಪ್ರತಿಯಾಗಿ ಭಾರತೀಯ ಸೈನ್ಯ ನಡೆಸಿದ ದಾಳಿಯಲ್ಲಿ ಪಾಕಿಸ್ತಾನ ಸೈನ್ಯದ ಮೂಲಭೂತ ಸೌಲಭ್ಯಗಳಿಗೆ ತೀವ್ರ ಹಾನಿಯಾಗಿದೆ ಹಾಗೂ ನಿಯಂತ್ರಣ ರೇಖೆಯ ಆಚೆ ಕಡೆ ಸಾವುಗಳು ಸಂಭವಿಸಿವೆ ಎಂದು ಭಾರತೀಯ ಸೈನ್ಯ ತಿಳಿಸಿದೆ.

ಉಗ್ರರು ಭಾರತಕ್ಕೆ ನುಸುಳಲು ಬಳಸುತ್ತಿದ್ದ ತಾಣಗಳಿಗೆ, ಶಸ್ತ್ರಾಸ್ತ್ರ ಸಂಗ್ರಹ ಕೇಂದ್ರಗಳಿಗೆ ಹಾನಿಯಾಗಿದೆ ಎಂದು ಸೈನ್ಯದ ವಕ್ತಾರರು ಹೇಳಿದ್ದಾರೆ.

ಇದಕ್ಕೂ ಮುಂಚೆ ಪಾಕಿಸ್ತಾನದ ಪಡೆಗಳು ನಡೆಸಿದ ದಾಳಿಯಲ್ಲಿ ಭಾರತೀಯ ಭದ್ರತಾ ಪಡೆಯ ನಾಲ್ವರು ಸಿಬ್ಬಂದಿ ಸೇರಿದಂತೆ ಹತ್ತು ಜನರು ಸಾವನ್ನಪ್ಪಿದ್ದರು. ದಾಳಿಗೆ ಸಿಲುಕಿ 12 ಜನ ಗಾಯಗೊಂಡಿದ್ದಾರೆ.

ಪಾಕಿಸ್ತಾನದ ದಾಳಿಯಲ್ಲಿ ನಾಲ್ವರು ಸೈನಿಕ ಸಿಬ್ಬಂದಿ ಹಾಗೂ ಬಿ.ಎಸ್.ಎಫ್.ನ ಸಬ್ ಇನ್ಸ್‌ಪೆಕ್ಟರ್ ಹಾಗೂ ಆರು ಜನ ನಾಗರಿಕರು ಮೃತಪಟ್ಟಿದ್ದರು.

ಶುಕ್ರವಾರ ಮಧ್ಯಾಹ್ನ 1.45ರಿಂದ 2.45ರ ನಡುವೆ ಪಾಕಿಸ್ತಾನದ ಸೈನ್ಯ ಅಪ್ರಚೋದಿತ ಗುಂಡಿನ ದಾಳಿ ನಡೆಸಿತ್ತು. ನಂತರ ಭಾರತೀಯ ಸೈನ್ಯ ತಕ್ಕ ಉತ್ತರ ನೀಡಿದೆ. ಕದನ ವಿರಾಮ ಉಲ್ಲಂಘಿಸಿದ ಪಾಕಿಸ್ತಾನ, (6ನೇ ಪುಟಕ್ಕೆ)

## ಗ್ರಾ.ಪಂ. ಚುನಾವಣೆಗೆ ಅಸ್ತು

### ಮೂರು ವಾರಗಳಲ್ಲಿ ವೇಳಾಪಟ್ಟಿ ಪ್ರಕಟಿಸಲು ಆಯೋಗಕ್ಕೆ ಹೈ ಕೋರ್ಟ್ ಆದೇಶ



**ನ್ಯಾಯಾಲಯದ ಆದೇಶದಿಂದ ಆಯೋಗ ಡಿಸೆಂಬರ್ ಅಂತ್ಯದ ವೇಳೆಗೆ 1500 ಕ್ಕೂ ಹೆಚ್ಚು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಪಂಚಾಯಿತಿಗಳಿಗೆ ಚುನಾವಣೆ ನಡೆಸಬೇಕಾಗಿದೆ.**

ಬೆಂಗಳೂರು, ನ. 13 - ಗ್ರಾಮ ಪಂಚಾಯಿತಿ ಚುನಾವಣೆಗೆ ಅಸ್ತು ಎಂದಿರುವ ಹೈಕೋರ್ಟ್, ಮೂರು ವಾರಗಳಲ್ಲಿ ವೇಳಾಪಟ್ಟಿ ಪ್ರಕಟಿಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಆದೇಶ ನೀಡಿದೆ.

ವಿಧಾನ ಪರಿಷತ್ ಸದಸ್ಯ ಕಾಂಗ್ರೆಸ್‌ನ ಕೆ.ಸಿ. ಕೊಂಡಯ್ಯ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡ ನ್ಯಾಯಾಲಯ ಚುನಾವಣಾ ಪ್ರಕ್ರಿಯೆಯಲ್ಲಿ ಸರ್ಕಾರದ ಪಾತ್ರವಿಲ್ಲ ಎಂದು ಸ್ಪಷ್ಟವಾಗಿ ಹೇಳಿದೆ.

ಚುನಾವಣಾ ಕಾರ್ಯಕ್ಕೆ ಸಿಬ್ಬಂದಿ ಅವಶ್ಯಕತೆ ಇದ್ದರೆ, ರಾಜ್ಯಪಾಲರಿಗೆ ಮನವಿ ಸಲ್ಲಿಸುವಂತೆ ಆಯೋಗಕ್ಕೆ ಸ್ಪಷ್ಟ ಸೂಚನೆ ನೀಡಿದೆ.

ಕೊರೊನಾ ಸಾಂಕ್ರಾಮಿಕ ರೋಗ ಸೇರಿದಂತೆ ಸಂಕಷ್ಟ ಪರಿಸ್ಥಿತಿಗಳಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ಆಯೋಗ ತೀರ್ಮಾನ ಕೈಗೊಳ್ಳಬೇಕೆ ಹೊರತು ಸರ್ಕಾರವಲ್ಲ ಎಂದಿದೆ.

ಚುನಾವಣಾ ಆಯೋಗ ಒಂದು ಸ್ವಾಯತ್ತ ಸಂಸ್ಥೆ. ನಿಮಗೆ ಅಧಿಕಾರ ನೀಡಿರುವುದೇ ಕಾಲಾನು ಕಾಲಕ್ಕೆ ಚುನಾವಣೆ ನಡೆಸುವುದು. ಇದರಲ್ಲಿ ಯಾರ ಹಸ್ತಕ್ಷೇಪವೂ ಇರಕೂಡದು ಎಂದು ತಿಳಿಸಿದೆ.

ಚುನಾವಣೆ ನಡೆಸಲು ರಾಜ್ಯ ಸರ್ಕಾರ ಅಚಾತುರ್ಯ ತೋರಿದರೆ, ರಾಜ್ಯಪಾಲರಿಗೆ ಮನವಿ ಸಲ್ಲಿಸಿ, ಅಗತ್ಯ ಸಿಬ್ಬಂದಿ ಯನ್ನು ನಿಯೋಜಿಸಿಕೊಂಡು, ಚುನಾವಣೆ ನಡೆಸಿ ಎಂದು ಹೇಳಿದೆ. (4ನೇ ಪುಟಕ್ಕೆ)

## ಮೆಕ್ಕೆಜೋಳ ಖರೀದಿಗಾಗಿ ಸಿಎಂಗೆ ಒತ್ತಾಯ: ಭೈರತಿ

### ಜಿಲ್ಲೆಗೆ ಸಚಿವ ಸ್ಥಾನಕ್ಕಾಗಿ ಭೈರತಿ ಮನವಿ



ಚನ್ನಗಿರಿ, ನ. 13 - ಮೆಕ್ಕೆಜೋಳವನ್ನು ಬೆಂಬಲ ಬೆಲೆಯಲ್ಲಿ ಖರೀದಿ ಸುವಂತೆ ಮುಖ್ಯ ಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರಿಗೆ ಒತ್ತಾಯಿ ಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ತಿಳಿಸಿದ್ದಾರೆ.

ಇಲ್ಲಿನ ಸರ್ಕಾರಿ ತಾಲ್ಲೂಕು ಕ್ರೀಡಾಂಗಣದಲ್ಲಿ ತಾಲ್ಲೂಕು ಪಂಚಾಯ್ತಿ ಹಾಗೂ ವಿವಿಧ ಇಲಾಖೆಗಳ ವತಿಯಿಂದ ಆಯೋಜಿಸಲಾಗಿದ್ದ ಜನಸ್ಪಂದನ ಹಾಗೂ ವಿವಿದ ಕಾಮಗಾರಿಗಳ ಶಂಕುಸ್ಥಾಪನಾ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಭತ್ತ ಹಾಗೂ ಮೆಕ್ಕೆಜೋಳವನ್ನು ಬೆಂಬಲ ಬೆಲೆಯಲ್ಲಿ ಖರೀದಿಸುವಂತೆ ಸಭೆಯಲ್ಲಿದ್ದವರಿಂದ ಆಗ್ರಹ ಕೇಳಿ ಬಂತು. ಆಗ ಮಾತನಾಡಿದ ಸಚಿವ ಬಸವರಾಜ್, ಭತ್ತದ ಖರೀದಿ ಕೇಂದ್ರ ತೆರೆಯಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಮೆಕ್ಕೆಜೋಳ ಖರೀದಿಗಾಗಿ ಮುಖ್ಯಮಂತ್ರಿ ಬಳಿ ಮನವಿ ಸಲ್ಲಿಸಲಾಗಿದೆ ಎಂದರು.

ದಾವಣಗೆರೆ ಭಾಗದಲ್ಲಿ ಹೆಚ್ಚಾಗಿ ಮೆಕ್ಕೆಜೋಳ (4ನೇ ಪುಟಕ್ಕೆ)

## ನರಸಿಂಹ ನರಹರಿ ಭಟ್ ನಿಧನ



ಜನನ: 01.07.1930

ಮರಣ: 12.11.2020

ದಾವಣಗೆರೆ ವಸಂತ ಟಾಕೀಸ್ ರಸ್ತೆ, ಶ್ರೀ ಸಿದ್ದಿ ವಿನಾಯಕ ಪ್ರಾವಿಜನ್ ಸ್ಟೋರ್ಸ್‌ಮಾಲೀಕರಾದ

**ಶ್ರೀ ನರಸಿಂಹ ನರಹರಿ ಭಟ್ (90)**

ಇವರು ದಿನಾಂಕ 12.11.2020 ರ ಗುರುವಾರ ಬೆಳಿಗ್ಗೆ 8 ಗಂಟೆಗೆ ಹೃದಯಾಘಾತದಿಂದ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ, ಇಬ್ಬರು ಪುತ್ರಿಯರು, ಇಬ್ಬರು ಪುತ್ರರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 12.11.2020 ರಂದು ಗುರುವಾರ ಪಿ.ಬಿ. ವೈಕುಂಠಧಾಮದಲ್ಲಿ ನೆರವೇರಿತು.

ದುಃಖತಪ್ತ ಕುಟುಂಬ ವರ್ಗ
ಭಟ್ ವಂಶಸ್ಥರು, ದಾವಣಗೆರೆ
ಮೊ: 94485 88788, 72595 95996

**ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**
ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ.ರಸ್ತೆ, ದಾವಣಗೆರೆ - 577002.

**ಗ್ರಾಹಕರಿಗೂ, ಸದಸ್ಯರಿಗೂ ಹಾಗೂ ಬ್ಯಾಂಕಿನ ಹಿತೈಷಿಗಳಿಗೂ ದೀಪಾವಳಿ ಹಬ್ಬದ ಶುಭಾಶಯಗಳು**

**ಬ್ಯಾಂಕಿನ ಷೇರುದಾರರ ಗಮನಕ್ಕೆ**

ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕೋವಿಡ್-19 ಸಾಂಕ್ರಾಮಿಕ ರೋಗದ ಪ್ರಯುಕ್ತ ಸಹಕಾರ ಬ್ಯಾಂಕುಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ವಿಡಿಯೋ ಕಾನ್ಫರೆನ್ಸ್/ವರ್ಚುವಲ್ ಮೀಟಿಂಗ್ ಮುಖಾಂತರ ಜರುಗಿಸುವಂತೆ ಸರ್ಕಾರವು ಮಾರ್ಗಸೂಚಿಯನ್ನು ನೀಡಿರುತ್ತದೆ. ಈ ಮಾರ್ಗಸೂಚಿಯನ್ವಯ ಬ್ಯಾಂಕಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ : 12.12.2020 ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲು ತೀರ್ಮಾನಿಸಲಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ವಾರ್ಷಿಕ ಮಹಾಸಭೆಯ ವರ್ಚುವಲ್ ಮೀಟಿಂಗನ್ನು ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್ ಮೂಲಕ ಪಾಲ್ಗೊಳ್ಳಲು ತಮ್ಮ ಷೇರು ಖಾತೆ ನಂಬರ್ ಹಾಗೂ ಮೊಬೈಲ್ ಸಂಖ್ಯೆಯನ್ನು ಕೂಡಲೇ ನಮ್ಮ ಬ್ಯಾಂಕಿನ ಶಾಖೆಗಳಲ್ಲಿ ನೀಡಲು ಈ ಮೂಲಕ ಕೋರಿದೆ.

ಕೋಗುಂಡಿ ಬಕ್ಕೇಶಪ್ಪ, ಅಧ್ಯಕ್ಷರು
ಅಂದನೂರು ಮುಪ್ಪಣ್ಣ, ಉಪಾಧ್ಯಕ್ಷರು
ಡಿ.ವಿ. ಆರಾಧ್ಯಮಠ್, ಪ್ರಧಾನ ವ್ಯವಸ್ಥಾಪಕರು

## ಡಿ.1ರಿಂದ ವೈದ್ಯಕೀಯ ಕಾಲೇಜುಗಳ ಆರಂಭ

### ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್ ಪ್ರಾರಂಭಕ್ಕೆ ಕ್ರಮ

ಬೆಂಗಳೂರು, ನ. 13 - ವೈದ್ಯಕೀಯ, ಅರೆ ವೈದ್ಯಕೀಯ ಹಾಗೂ ನರ್ಸಿಂಗ್ ಕಾಲೇಜುಗಳು ಡಿಸೆಂಬರ್ 1 ರಿಂದ ಆರಂಭ ವಾಗಲಿವೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಪ್ರಕಟಿಸಿದ್ದಾರೆ. ಟ್ವೀಟ್ ಮೂಲಕ (4ನೇ ಪುಟಕ್ಕೆ)

## ರವಿ ಬೆಳಗೆರೆ ಇನ್ನಿಲ್ಲ



ಬೆಂಗಳೂರು, ನ.13- ಪತ್ರಕರ್ತ, ಬರಹಗಾರ ರವಿ ಬೆಳಗೆರೆ ಗುರುವಾರ ತಡರಾತ್ರಿ ಹೃದಯಾ ಘಾತ ದಿಂದ ನಿಧನರಾಗಿದ್ದಾರೆ. 62 ವರ್ಷ ವಯಸ್ಸಿನ ರವಿ ಅವರಿಗೆ, ಪದ್ಮನಾಭ ನಗರದ ತಮ್ಮ ಕಚೇರಿಯಲ್ಲಿ ಅಕ್ಷರದಕೆಲಸನಿರ್ವಹಿಸುತ್ತಿದ್ದಾಗಲೇ ಹೃದಯಾಘಾತ (4ನೇ ಪುಟಕ್ಕೆ)

ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು



ತಾಲ್ಲೂಕಿನ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು. ದೀಪದ ಹಬ್ಬ ದೀಪಾವಳಿ ಎಲ್ಲರ ಬಾಳಿನಲ್ಲಿ ಸಂತಸ ಸಮೃದ್ಧಿಯನ್ನು ತರಲಿ.



ಶ್ರೀ ಅರುಣಕುಮಾರ ಪೂಜಾರ
ಶಾಸಕರು, ರಾಣೇಬೆನ್ನೂರು ವಿಧಾನಸಭಾ ಕ್ಷೇತ್ರ



ಶ್ರೀಮತಿ ಮಂಗಳಗೌರಿ ಅರುಣಕುಮಾರ ಪೂಜಾರ
ಜಿ.ಪಂ. ಸದಸ್ಯರು, ಕರೂರು ಕ್ಷೇತ್ರ ತಾ|| ರಾಣೇಬೆನ್ನೂರು.



ರಾಣೇಬೆನ್ನೂರ ನಗರದ ಸಮಸ್ತ ಜನತೆಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.
ಬೆಳಕಿನ ಹಬ್ಬ ದೀಪಾವಳಿ ಎಲ್ಲರ ಬಾಳಿನಲ್ಲಿ ಹೊಸ ಚೈತನ್ಯ ಮೂಡಿಸಲಿ





ಶ್ರೀಮತಿ ರೂಪಾ ರಾಘವೇಂದ್ರ ಚಿನ್ನಿಕಟ್ಟಿ
ಅಧ್ಯಕ್ಷರು, ನಗರಸಭೆ, ರಾಣೇಬೆನ್ನೂರು



ಶ್ರೀಮತಿ ಕಸ್ತೂರಿ ಸಿದ್ಧಣ್ಣ ಚಿಕ್ಕಬಿದರಿ
ಉಪಾಧ್ಯಕ್ಷರು, ನಗರಸಭೆ, ರಾಣೇಬೆನ್ನೂರು

ನಿಮ್ಮ ಪ್ರೀತಿ ಮತ್ತು ನಿರಂತರ ಬೆಂಬಲಕ್ಕಾಗಿ ಧನ್ಯವಾದಗಳು
ತಮಗೂ ಮತ್ತು ತಮ್ಮ ಕುಟುಂಬಕ್ಕೂ ದೀಪಾವಳಿ ಹಬ್ಬದ ಶುಭಾಶಯಗಳು.
CIVIL 360

## ಡಾ|| ಕೆ. ಸಿದ್ದೇಶ್‌ಗೌಡ ನಿಧನ



ಉಚ್ಚಂಗಿದುರ್ಗದ ನಿವಾಸಿಗಳಾದ ಊರಿನ ಗೌಡರಾದ ಚನ್ನಬಸವನಗೌಡ, ನಾಗಮ್ಮ ದಂಪತಿಗಳ ಆದರ್ಶ ಮನೆತನದಲ್ಲಿ

**ಡಾ|| ಕೆ.ಸಿದ್ದೇಶ್‌ಗೌಡರು**

ದಿನಾಂಕ 01.07.1947 ರಲ್ಲಿ 5ನೇ ಮಗನಾಗಿ ಜನಿಸಿದರು. ನಂತರ ಪ್ರಾಥಮಿಕ, ಮಾಧ್ಯಮಿಕ , ಪ್ರೌಢಶಾಲೆ, ಪಿ.ಯು.ಸಿ. ವಿದ್ಯಾಭ್ಯಾಸವನ್ನು ಹರಪನಹಳ್ಳಿಯ ಸರ್ಕಾರಿ ಶಾಲೆಗಳಲ್ಲೇ ಓದಿ ಪಿ.ಯು.ಸಿ. ಯಲ್ಲಿ ಉತ್ತಮ ಅಂಕಗಳಸಿದ್ದರ ಫಲವಾಗಿ ಬಳ್ಳಾರಿಯ ಸರ್ಕಾರಿ ವೈದ್ಯಕೀಯ ಕಾಲೇಜು ಸೇರಿ ಉತ್ತಮ ಸಾಧನೆ ಮಾಡಿ ಎಂ.ಬಿ.ಬಿ.ಎಸ್. ಪದವಿ ಪಡೆದರು. 1970 ರಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಕ್ಕೆ ಪ್ರಯಾಣ ಬೆಳೆಸಿದರು ಅಲ್ಲಿಯೇ ಹೃದಯತಜ್ಞತೆಯ ಸರ್ಜರಿಯಲ್ಲಿ ಎಂ.ಡಿ., ಎಫ್.ಎ.ಸಿ.ಸಿ, ಮತ್ತು ಎಫ್.ಎ.ಹೆಚ್.ಎ. ಪದವಿಯನ್ನು ಪೂರ್ಣ ಗೊಳಿಸಿದರು. ನಂತರ ಅಮೆರಿಕಾದಲ್ಲಿಯೇ ಮಿಸೌರಿ ರಾಜ್ಯದ ಸೆಂಟ್ ಲೂಯಿಸ್ ಪಟ್ಟಣದ, ಸೆಂಟ್‌ಲೂಕ್ಸ್ ಆಸ್ಪತ್ರೆಯಲ್ಲಿ ತಮ್ಮ 50 ವರ್ಷದ ಸುದೀರ್ಘ ಸೇವೆಯನ್ನು ಸಲ್ಲಿಸಿದರು.

ಡಾ|| ಕೆ ಸಿದ್ದೇಶ್‌ಗೌಡರು ಅಮೆರಿಕದಲ್ಲಿ ದುರಾದೃಷ್ಟವಶಾತ್ ದಿನಾಂಕ 13.11.2020 ರಂದು ಬೆಳಿಗ್ಗೆ 5:45ಕ್ಕೆ ಶಿವೈಕ್ಯರಾದರು. ಅವರ ಅಂತ್ಯಸಂಸ್ಕಾರವನ್ನು ವೀರಶೈವ ವಿಧಿ-ವಿಧಾನದಂತೆ ಸೆಂಟ್ ಲೂಯಿಸ್ ಪಟ್ಟಣದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಶ್ರೀಮತಿ ಗೌರಮ್ಮ ಗೌಡ
ಕೆಂಚನಗೌಡ್ರು ಸಹೋದರರು ಮತ್ತು ಸಹೋದರಿಯರು, ಉಚ್ಚಂಗಿದುರ್ಗ. ಹರಪನಹಳ್ಳಿ (ತಾ)
ದಿ.ಶಾರದಮ್ಮ ಮತ್ತು ಪಾಟೀಲ್ ದಿ.ಬಸವನಗೌಡ್ರು ಮಕ್ಕಳು, ಪುಣಭಘಟ್ಟ, ಹರಪನಹಳ್ಳಿ (ತಾ)
ಅಪಾರ ಬಂಧು-ಬಾಂಧವರು, ಹಿತೈಷಿಗಳು, ಉಚ್ಚಂಗಿದುರ್ಗದ ಗ್ರಾಮಸ್ಥರು.

ನಮ್ಮೆಲ್ಲಾ ಗ್ರಾಹಕರಿಗೆ ಹಾಗೂ ಅಭಿಮಾನಿಗಳಿಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು


ಬಿ. ಮುರಿಗೆಪ್ಪ ಸಿದ್ದರಾಮಪ್ಪ
ಬಣ್ಣದ ಅಂಗಡಿ

B. MURIGEPPA SIDDARAMAPPA
Mandipet, Davangere -577001
Ph.: 08192-232437 Mob.: 9844097097, 9448132437

asianpaints colourideas



# ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಪ್ರೇಮಕುಮಾರ್, ಉಪಾಧ್ಯಕ್ಷರಾಗಿ ಮಂಜಪ್ಪ



## ಹರಪನಹಳ್ಳಿ : ಕಾಂಗ್ರೆಸ್‌ನಲ್ಲಿ ಶಮನಗೊಳ್ಳದ ಭಿನ್ನಮತ

ಹರಪನಹಳ್ಳಿ, ನ.13- ತಾಲ್ಲೂಕಿನಲ್ಲಿ ಕಾಂಗ್ರೆಸ್ ಭಿನ್ನಮತ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಬಣ ರಾಜಕೀಯ ಶುರುವಾಗಿದೆ. ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ಸೇರಿದಂತೆ ಪ್ರತಿ ಚುನಾವಣೆಯಲ್ಲೂ ಅವರವರ ಮಧ್ಯೆಯೇ ಸ್ಪರ್ಧೆ ಏರ್ಪಡುವುದು ಸಾಮಾನ್ಯವಾಗಿದೆ.

ಇದಕ್ಕೆ ತಾಜಾ ಉದಾಹರಣೆಯೆಂದರೆ ಇಲ್ಲಿನ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ (ಟಿಎಪಿಸಿಎಂಎಸ್) ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಾಗಿದೆ.

ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದಿಂದಲೇ ಪಿ. ಪ್ರೇಮಕುಮಾರ್ ಹಾಗೂ ಬಿ.ಕೆ. ಪ್ರಕಾಶ್ ಅವರು ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ತಳವಾರ ಮಂಜಪ್ಪ ಹಾಗೂ ಯು. ಹನುಮಂತಪ್ಪ ನಾಮಪತ್ರ ಸಲ್ಲಿಸಿದ್ದರು. ಚುನಾವಣೆ ಯಲ್ಲಿ ತಲಾ 9 ಮತಗಳನ್ನು ಪಡೆದು ಅಧ್ಯಕ್ಷರಾಗಿ ಪಿ.ಪ್ರೇಮಕುಮಾರ್ ಹಾಗೂ ಉಪಾಧ್ಯಕ್ಷರಾಗಿ ತಳವಾರ ಮಂಜಪ್ಪ ಚುನಾಯಿತರಾದರು.

ಒಟ್ಟು 15 ಸದಸ್ಯರಲ್ಲಿ ನಾಮನಿರ್ದೇಶಕರಾದ ಹಳ್ಳಿಕೇರಿ ಬಸವರಾಜಪ್ಪ ಹೊರತುಪಡಿಸಿ ಉಳಿದ 14 ನಿರ್ದೇಶಕರು ಕಾಂಗ್ರೆಸ್ ಪಕ್ಷದವರೇ ಆಗಿದ್ದು, ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಇಬ್ಬರೂ ಕಾಂಗ್ರೆಸ್ ಪಕ್ಷದವರೇ ಸ್ಪರ್ಧಿಸಿದ್ದರು. ಅದರಲ್ಲಿ ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಕೆ. ಪ್ರಕಾಶ್ ಪರಾಭವ ಗೊಂಡಿದ್ದು, ಅಧ್ಯಕ್ಷರಾಗಿ ಆಯ್ಕೆಯಾಗಿರುವ ಪಿ. ಪ್ರೇಮಕುಮಾರ್ ಸಹ ಕಾಂಗ್ರೆಸ್ ಪಕ್ಷದವರು. ಆದರೂ ಚುನಾವಣೆ ಜರುಗಿದ್ದು, ಕಾಂಗ್ರೆಸ್‌ನವರ ಸಂಘರ್ಷಗಳು ನಿಲ್ಲುವ ಲಕ್ಷಣಗಳು ಕಾಣುತ್ತಿಲ್ಲ ಎಂದು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಮಾತನಾಡಿಕೊಳ್ಳುತ್ತಿದ್ದಾರೆ.

# 'ಕಾವ್ಯ ಮೀಮಾಂಸೆ' ಯು ನಮ್ಮ ಭಾರತೀಯ ಕಾವ್ಯ ಪರಂಪರೆಗೆ ಸಿಕ್ಕ ಅಮೂಲ್ಯ ಕೊಡುಗೆ

## ತಾಲ್ಲೂಕು ಕಸಾಪದ ಅಂತರ್ಜಾಲ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ. ಆನಂದ ಋಗ್ವೇದಿ

ದಾವಣಗೆರೆ, ನ.13- 'ಕಾವ್ಯ ಮೀಮಾಂಸೆ' ಯು ನಮ್ಮ ಭಾರತೀಯ ಕಾವ್ಯ ಪರಂಪರೆಗೆ ಸಿಕ್ಕ ಒಂದು ಅಮೂಲ್ಯ ಕೊಡುಗೆ ಎಂದು ಹಿರಿಯ ಸಾಹಿತಿ ಡಾ.ಆನಂದ ಋಗ್ವೇದಿ ಹೇಳಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 65 ನೇ ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಅಂತರ್ಜಾಲದ ಮೂಲಕ ಆಯೋಜಿಸಲಾಗಿರುವ ಕನ್ನಡ ನುಡಿ ಹಬ್ಬದ 7 ನೇ ದಿನದ ಕಾರ್ಯಕ್ರಮದಲ್ಲಿ ಅವರು 'ಸಮಕಾಲೀನ ಕಾವ್ಯದ ಸವಾಲುಗಳು - ಬಿಕ್ಕಟ್ಟುಗಳು' ಕುರಿತು ಉಪನ್ಯಾಸ ನೀಡಿದರು.

ಕಾವ್ಯ ಮೀಮಾಂಸೆ ಕುರಿತಾಗಿ ಎರಡು ವಿಷಯಗಳನ್ನು ಬಹು ಮುಖ್ಯವಾಗಿ ಗ್ರಹಿಸಬೇಕಾಗಿದೆ. ಅದರಲ್ಲಿ ಒಂದು ವಿವೇಕ ಮತ್ತು ಇನ್ನೊಂದು ಔಚಿತ್ಯ. ಈ ವಿವೇಕ ಮತ್ತು ಔಚಿತ್ಯ ಇಲ್ಲದೇನೇ ಕಾವ್ಯ ಇಲ್ಲ ಅಥವಾ ಇವುಗಳ ಹೊರತಾಗಿ ನಮ್ಮ ಕಾವ್ಯ ಸಂಪೂರ್ಣವಾಗಲು ಸಾಧ್ಯವೇ ಇಲ್ಲ.



ಕವಿತೆಯನ್ನು ತಾನು ಏಕೆ ಬರೆಯುತ್ತಿದ್ದೇನೆ, ವರ್ತಮಾನಕ್ಕೆ ಇದರ ಅಗತ್ಯತೆ ಇದೆಯೇ? ಇದರ ತಾತ್ವಿಕತೆ ಯೇನು? ಕವಿತೆ ಕುರಿ ತಾಗಿ ತನ್ನ ಯೋಚನೆ, ಭಾವನೆಗಳೇನು? ಎಂಬುದು ವಿವೇಕ.

ಕವಿತೆ ಸಾರ್ವಕಾಲಿಕವಾಗ ಬೇಕಾದರೆ ವಿವೇಕ ಅತ್ಯಗತ್ಯ. ತನ್ನ ಕವಿತೆ ಮತ್ತೊಬ್ಬರಿಗೆ ಮುಜುಗರವನ್ನು ತರಬಾರದೆಂಬುದು ಸಹ ವಿವೇಕ. ಈ ವಿವೇಕ ಸರಿಯೇ.. ತಪ್ಪೇ.. ಇದು ಸಾಮಾಜಿಕ ಜೀವನಕ್ಕೆ ಸಮರ್ಪಕವಾಗುವಂತದ್ದೇ ಅಲ್ಲವೇ.. ಇವೆಲ್ಲವೂ ಯೋಚನೆ ಮಾಡುವುದೇ ಔಚಿತ್ಯ ಪ್ರಜ್ಞೆಯಾಗಿದೆ ಎಂದರು.

ಕಾವ್ಯ ಕೃಷಿಗೆ ಬಹಳ ಮುಖ್ಯವಾಗಿ ಬೇಕಾಗಿರುವುದು ಭಾಷೆ. ಸುಂದರವಾದ ಕನ್ನಡ ಭಾಷೆ ನಮಗೆ ದೊರೆತಿರುವುದು ಒಂದು ದೊಡ್ಡ ಉಡುಗೊರೆಯಾಗಿದೆ. ಏಕೆಂದರೆ ನಮ್ಮ ಪೂರ್ವ ಪರಂಪರೆಯ 2500 ವರ್ಷಗಳ ಹಿಂದಿನಿಂದ ಹಾದು ಬಂದಿರುವ ಒಂದು ವಿಶೇಷವಾದ, ಅದ್ಭುತವಾದ ಭಾಷೆಯನ್ನು ನಾವು ಬಳಸುತ್ತಾ ಬಂದಿದ್ದೇವೆ ಎಂದರು.

ವರ್ತಮಾನದ ಕಾವ್ಯವು ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕವಾದ ಆಯಾಮಗಳನ್ನು ಪ್ರತಿಬಿಂಬಿಸುತ್ತದೆ. ಕಾವ್ಯದ ಧರ್ಮವು ಎಲ್ಲ ಧರ್ಮಗಳನ್ನು ನನ್ನ ಧರ್ಮದ ಹಾಗೆ ಎಂದು ಪರಿಭಾವಿಸಬೇಕು ಅಥವಾ ಸ್ವೀಕರಿಸುವಂತದ್ದಾಗಿದೆ. ಹಾಗೆ ಸ್ವೀಕರಿಸಿದಾಗ ಮಾತ್ರ ಕಾವ್ಯ ತನ್ನ ಧರ್ಮವನ್ನು ಎತ್ತಿ ಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಇದೇ ಮಾನವೀಯ ಧರ್ಮ ಎಂಬುದಾಗಿ ಡಾ. ಆನಂದ ಋಗ್ವೇದಿ ಹೇಳಿದರು.

ಅಧ್ಯಕ್ಷೀಯ ನುಡಿಗಳನ್ನಾಡಿದ ದಾವಣಗೆರೆ ತಾಲ್ಲೂಕು ಕ. ಸಾ. ಪ. ಅಧ್ಯಕ್ಷ ಬಿ. ವಾಮದೇವಪ್ಪ, ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಕಾವ್ಯಗಳಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಉತ್ಕೃಷ್ಟ ಕವಿತೆಗಳು ಸಮಾಜದ ಹಲವಾರು ಸಮಸ್ಯೆಗಳನ್ನು ಪ್ರತಿಬಿಂಬಿಸುವುದಲ್ಲದೇ ಪರಿಹಾರವನ್ನೂ ಸೂಚಿಸುವಂತಿರುತ್ತದೆ. ಇಂತಹ ಕವಿತೆಗಳು ಸಾರ್ವಕಾಲಿಕವಾಗಿ ಜನ ಮಾನಸದಲ್ಲಿ ಉಳಿಯಬಲ್ಲವು ಎಂದು ಹೇಳಿದರು.

ಜಿಲ್ಲಾ ಕ.ಸಾ.ಪ. ಕಛೇರಿ ಕಾರ್ಯದರ್ಶಿ ಜಿ. ಆರ್. ಷಣ್ಮುಖಪ್ಪ ಸ್ವಾಗತಿಸಿದರು. ವಿನಾಯಕ ಬಡಾವಣೆ ವಿನೂತನ ಮಹಿಳಾ ಸಮಾಜದ ತಂಡದವರಾದ ಮಮತಾ ಶ್ರೀಧರ್, ರೇಖಾ ಓಂಕಾರಪ್ಪ, ಶೈಲಜಾ ತಿಮ್ಮೇಶ್ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

# ಜಗಳೂರು ತಾಲ್ಲೂಕಿನಲ್ಲಿ ಧರ್ಮಸ್ಥಳ ಸಂಘದ ಶೈಕ್ಷಣಿಕ ಕಾಳಜಿ ಶ್ಲಾಘನೀಯ



ಜಗಳೂರು, ನ.13- ಸಾಮಾಜಿಕ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಧರ್ಮಸ್ಥಳ ಸಂಘ ಹೆಚ್ಚಿನ ಒತ್ತು ನೀಡುತ್ತಿದೆ. ಇದೀಗ ಶಿಕ್ಷಣಕ್ಕೆ ವಿಶೇಷ ಕಾಳಜಿ ವಹಿಸುವ ಮೂಲಕ ಸಂಘದ ಸದಸ್ಯರುಗಳ ಮಕ್ಕಳಿಗೆ ಟ್ಯಾಬ್ ಮತ್ತು ಲ್ಯಾಪ್‌ಟ್ಯಾಪ್ ವಿತರಣೆ ಮಾಡಿ ಉತ್ತೇಜನ ನೀಡಲು ಮುಂದಾಗಿರುವುದು ಶ್ಲಾಘನೀಯ ಎಂದು ಶಾಸಕ ಹಾಗೂ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ವಿ. ರಾಮಚಂದ್ರ ಹೇಳಿದರು.

ಪಟ್ಟಣದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯಲ್ಲಿ ಇಂದು ನಡೆದ ಸ್ವಸಹಾಯ ಸಂಘದ ಸದಸ್ಯರ ಮಕ್ಕಳಿಗೆ ರಿಯಾಯ್ತಿ ದರದಲ್ಲಿ ಟ್ಯಾಬ್ ಹಾಗೂ ಲ್ಯಾಪ್‌ಟ್ಯಾಪ್ ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿಯಲ್ಲಿ ಸ್ವ-ಸಂಘಗಳನ್ನು ತೆರೆದು ಸದಸ್ಯರುಗಳಿಗೆ ಕೃಷಿ ಚಟುವಟಿಕೆಗೆ ಉತ್ತೇಜನ, ಧನಸಹಾಯ ಹಾಗೂ ಸಾಲ ವಿತರಣೆಯಂತಹ ಮಹತ್ವದ ಕಾರ್ಯಕ್ರಮಗಳಿಂದಾಗಿ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಸಹಕಾರಿಯಾಗಿದೆ ಎಂದು ಶಾಸಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ನಿರ್ದೇಶಕ ಜನಾರ್ದನ್ ಮಾತನಾಡಿ, ತಾಲ್ಲೂಕಿನಲ್ಲಿ ಆನ್‌ಲೈನ್ ಶಿಕ್ಷಣ ಸದುಪಯೋಗ ಪಡೆಯಲು ಧರ್ಮಸ್ಥಳ ಸಂಘದ ವತಿಯಿಂದ 100 ವಿದ್ಯಾರ್ಥಿಗಳಿಗೆ ಟ್ಯಾಬ್ ಮತ್ತು 50 ವಿದ್ಯಾರ್ಥಿಗಳಿಗೆ ಲ್ಯಾಪ್‌ಟ್ಯಾಪ್ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ. ಅಲ್ಲದೇ ಮೆಮೋರಿ ಕಾರ್ಡ್, ಐಟಿ ವ್ಯವಸ್ಥಾಪಕರ ಮೂಲಕ ತರಬೇತಿ ಆಯೋಜನೆ ಸೇರಿದಂತೆ ನಿರ್ವಹಣೆಯನ್ನು ಜ್ಞಾನದೀಪ ಶಿಕ್ಷಕರ ಮೂಲಕ ಒದಗಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಬಿಇಓ ಸಿ.ಎಸ್. ವೆಂಕಟೇಶ್, ಯೋಜನಾಧಿಕಾರಿ ಗುಣಕರ್, ಜಿಲ್ಲಾ ಜಾಗೃತಿ ವೇದಿಕೆಯ ಪಿ.ಎಸ್.ಅರವಿಂದನ್, ಮಮತಾ, ಬಿ. ತಿಪ್ಪೇಸ್ವಾಮಿ, ಹಫೀಜ್ ಮತ್ತಿತರರು ಭಾಗವಹಿಸಿದ್ದರು.

# ದೇಶದ ಭೂಪಟದಲ್ಲಿ ತನ್ನದೇ ಛಾಪು ಮೂಡಿಸಿದ್ದ ಟಿಪ್ಪು



ಹರಪನಹಳ್ಳಿ

ಹರಪನಹಳ್ಳಿ, ನ.13- ದೇಶದಲ್ಲಿ ಮೊದಲ ಬಾರಿಗೆ ದಲಿತರಿಗೆ ಭೂಮಿ ವಿತರಿಸಿದ ರಾಜ, ಕನ್ನಂಬಾಡಿ ಯೋಜನೆಗೆ ನೀಲಿ ನಕ್ಷೆ ತಯಾರಿಸಿದ ಹರಿಕಾರ, ರಾಕೆಟ್‌ಗಳ ಜನಕ ಹಜರತ್ ಟಿಪ್ಪುಸುಲ್ತಾನ್ ಎಂದು ಅಲ್ಪಸಂಖ್ಯಾತರ ತಾಲ್ಲೂಕು ಘಟಕದ ಅಧ್ಯಕ್ಷ ಎ. ಮೂಸಾಸಾಬ್ ಹೇಳಿದರು.

ಪಟ್ಟಣದ 20 ನೇ ವಾರ್ಡ್‌ನಲ್ಲಿ ಸರಳವಾಗಿ ನಿನ್ನೆ ಜರುಗಿದ ಟಿಪ್ಪು ಸುಲ್ತಾನ್‌ರ 271 ನೇ ಜಯಂತೋತ್ಸವ ಆಚರಣೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಪ್ರಪ್ರಥಮವಾಗಿ ರೇಷ್ಮೆ ಬೆಳೆಯನ್ನು ಪರಿಚಯಿಸಿ ರೈತರ ಆರ್ಥಿಕ ಮಟ್ಟದಲ್ಲಿ ಸುಧಾರಣೆ ತರಲು ನಿರ್ಧರಿಸಿದ ರಾಜ ಟಿಪ್ಪು, ಸರ್ವ ಧರ್ಮದ ಸಹಿಷ್ಣು ಹಾಗೂ ಪ್ರಜೆಗಳಿಗೆ ಉದಾರತೆ ತೋರಿದ ಭಾರತ ದೇಶದ ಭೂಪಟದಲ್ಲಿ ತನ್ನದೇ ಛಾಪು ಮೂಡಿಸಿದ ಪ್ರಭಾವ ಶಕ್ತಿಶಾಲಿ ವ್ಯಕ್ತಿಯಾಗಿದ್ದ. ಅವರ ಚಿಂತನೆ, ವಿಚಾರಗಳು ಪ್ರತಿಯೊಬ್ಬರಿಗೂ ಮಾದರಿಯಾಗಲಿ ಎಂದರು. ಷೇಶ್‌ಶಾವಲಿ, ಮೌಲಾನ ಅಜಾದ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಕದಳಿ ಮಹಿಳಾ ವೇದಿಕೆಯ ಸದಸ್ಯೆಯರ ಮಕ್ಕಳ ಪುರಸ್ಕಾರಕ್ಕೆ ಅರ್ಜಿ

ದಾವಣಗೆರೆ, ನ.13- ಕದಳಿ ಮಹಿಳಾ ವೇದಿಕೆ ವತಿಯಿಂದ ವೇದಿಕೆಯ ಸದಸ್ಯನಿಯರ ಪ್ರತಿಭಾವಂತ ಮಕ್ಕಳನ್ನು ಗೌರವಿಸಲಾಗುವುದು ಎಂದು ಕಾರ್ಯದರ್ಶಿ ಶ್ರೀಮತಿ ಮಮತಾ ನಾಗರಾಜ್ ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ. 90ಕ್ಕೂ ಹೆಚ್ಚು ಅಂಕಗಳನ್ನು ಪಡೆದವರಿಗೆ, ಸಿಜಿಪಿಎ 9 ಪಾಯಿಂಟ್‌ಗಳಿಗೂ ಹೆಚ್ಚು ಪಡೆದವರಿಗೆ, ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ಶೇ. 70 ಕ್ಕೂ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಅರ್ಹ ವಿದ್ಯಾರ್ಥಿಗಳು ಇದೇ ದಿನಾಂಕ 30ರೊಳಗೆ ಶ್ರೀಮತಿ ಪೂರ್ಣಿಮಾ ಬಿ.ಪಿ. ಪ್ರಸನ್ನಕುಮಾರ್, 'ಬಸವ ಕೃಪ', ಮನೆ ಸಂಖ್ಯೆ 2044, 2ನೇ ಮುಖ್ಯ ರಸ್ತೆ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ (ಮೊ. 8618546784, 9986915292) ಅವರನ್ನು ಸಂಪರ್ಕಿಸಿ ಹೆಸರು ನೋಂದಾಯಿಸಬಹುದು.

# ಸಲಗನಹಳ್ಳಿಯಲ್ಲಿ ನೋಟ್ ಬುಕ್, ಪೆನ್ನು ವಿತರಣೆ



ಹರಿಹರ, ನ.13- ನಗರದ ಹೈಸ್ಕೂಲ್ ಬಡಾವಣೆಯ ಶ್ರೀ ರಾಮಕೃಷ್ಣ ಆಶ್ರಮದ ವತಿಯಿಂದ ಶ್ರೀ ಶಾರದೇಶಾನಂದ ಸ್ವಾಮಿಗಳು ದೀಪಾವಳಿ ಹಬ್ಬದ ಆಚರಣೆಯ ಸವಿನೆನಪಿಗಾಗಿ ಹರಿಹರ ತಾಲ್ಲೂಕಿನ ಸಲಗನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಒಟ್ಟು 92 ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ, ಪೆನ್ ಸೇರಿದಂತೆ ಹಲವಾರು ವಸ್ತುಗಳನ್ನು ನೀಡಿ ಪ್ರೋತ್ಸಾಹಿಸಲಾಯಿತು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜಪ್ಪ, ಮಲ್ಲಿಕಾರ್ಜುನ ಅಂಗಡಿ, ಬಸವರಾಜ್ ಯಲಿಗಾರ, ವಿಜಯ, ಮಂಜಣ್ಣ, ಶಿಕ್ಷಕರು, ವಿದ್ಯಾರ್ಥಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

## ಮಾನಿನಿ



ಅಳೆದು ಸುರಿದೂ ಯೋಚಿಸಿ
ಯೋಚಿಸಿ ಚಿಂತಿಸಿ ಮಂಥಿಸಿ.

ಭವದ ಬವಣೆ ಮುಡಿಗೇರಿಸಿ
ಒಡಲಲ್ಲಿ ನೋವನ್ನೆಲ್ಲಾ
ಹುದುಗಿಸಿ.

ನಗೆಯ ಮುಖವಾಡ ಧರಿಸಿ
ನೋವೇ ಆಗಿಲ್ಲವೆಂಬಂತೆ
ನಟಿಸಿ.

ಹೆಜ್ಜೆಹೆಜ್ಜೆಗೂ ತೊಡರ
ಪರಿಹರಿಸಿ
ನಲ್ಮೆಯ ನಗುವ ಪಸರಿಸಿ
ಮನೆ ಮನದ ದೀಪ ಬೆಳಗಿಸಿ
ಬದುಕಲಿ ಭರವಸೆಯ ತುಂಬಿಸಿ.

ನಲ್ಮೆಯಲಿ ಮನಗಳ ಒಲಿಸಿ
ಜತನದಿ ಬೇಗುದಿಗಳ ಮರೆಸಿ.

ತುಸು ನೆಮ್ಮದಿಯ ಅನುಸರಿಸಿ
ನಗೆಯ ಬೆಳಕ ಸುತ್ತಲೂ ಪಸರಿಸಿ.

ಕಂಗಳ ಬೆಳಕ ಬೆಳದಿಂಗಳಾಗಿಸಿ
ಮನೆಮನಕೆ ತಂಪ ಹರಸಿ.

ಬಿಸಿಲ ಬೆಳದಿಂಗಳಾಗಿಸಿ
ಎಲ್ಲರ ಮನಗಳ ಒಲಿಸಿ.

ಹೊತ್ತು ಹೊತ್ತಿಗೆ ತುತ್ತನುಣಿಸಿ
ಮನ ಮನೆಗಳ ಸ್ವಚ್ಛವಾಗಿರಿಸಿ.

ಅಂಗಳವ ಗುಡಿಸಿ ಸಾರಿಸಿ
ನಗೆಯ ಬೆಳಕಿನ ರಂಗೋಲಿ ಹಾಕಿ.

ಮನೆಯ ಕಾಯುವ ಪರಿಚಾರಕಿ
ಇವಳೇ ಮನಮನೆಯ ಒಡತಿ
ಮಾನಿನಿ.

**- ಸುಕನ್ಯ ತ್ಯಾವಣಿಗೆ, ದಾವಣಗೆರೆ.**


## ಶ್ರೀಮತಿ ಶಿವಮ್ಮ ನಿಧನ



ದಾವಣಗೆರೆ ವಿದ್ಯಾನಗರ ವಾಸಿ ದಿ.ಯಲವಟ್ಟಿ ಹನುಮಂತಪ್ಪನವರ ಧರ್ಮಪತ್ನಿ

**ಶ್ರೀಮತಿ ಶಿವಮ್ಮ** (91)

ಅವರು, ದಿನಾಂಕ 13.11.2020 ರಂದು ಶುಕ್ರವಾರ ಮಧ್ಯಾಹ್ನ 3.15ಕ್ಕೆ ದೈವಾಧೀನರಾದರು. ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 14.11.2020 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗದವರು**



## ಭಾವಪೂರ್ಣ ಶ್ರದ್ಧಾಂಜಲಿ

ಹಿರಿಯ ಪತ್ರಕರ್ತ, ನೇರ, ನಿಷ್ಠೂರ, ಆಕರ್ಷಕ ಮಾತುಗಾರ, ಸಮಾಜದ ಅಂಕು-ಡೊಂಕುಗಳನ್ನು ತಿದ್ದಿ, ತೀಡಿ, ಸಮಾಜದ ಏಳಿಗೆಗೆ ಅಕ್ಷರ ಲೋಕದ ಮುಖಾಂತರ ಪರಿವರ್ತಿಸಲು ಶ್ರಮಿಸಿದ ನಿಪುಣ. ಪತ್ರಿಕಾ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿ ಮರೆಯಲಾಗದ ಇತಿಹಾಸ ನಿರ್ಮಿಸಿದ, ಬಹುಮುಖ ವ್ಯಕ್ತಿತ್ವದ ಅಪರೂಪದ ವ್ಯಕ್ತಿ, ಓದುಗಾರರ ಮನಸ್ಸು ಗೆದ್ದು ಅಪಾರ ಅಭಿಮಾನಿಗಳ ಹೃದಯದಲ್ಲಿ ಮನೆ ಮಾಡಿ, ಬದುಕಿನಲ್ಲಿ ಅದ್ಭುತ ಸಾಧನೆ ಮಾಡಿರುವ



**ಶ್ರೀಯುತ ರವಿ ಬೆಳಗೆರೆ**

ಅವರ ದಿವ್ಯ ಆತ್ಮಕ್ಕೆ ದೇವರು ಚಿರಶಾಂತಿ ದಯಪಾಲಿಸಲಿ.

- ಅಭಿಮಾನಿ

ಹೆಚ್.ವಿ. ಮಂಜುನಾಥಸ್ವಾಮಿ, ಮೊ. : 98448 82366


# ಹರಿದು ಬಿದ್ದ ವಿದ್ಯುತ್ ತಂತಿ: ಎತ್ತು ಸಾವು

ದಾವಣಗೆರೆ, ನ.13- ಹೊಲದಲ್ಲಿ ಮೇಯುತ್ತಿದ್ದ ಎತ್ತಿಗೆ ಆಕಸ್ಮಿಕವಾಗಿ ವಿದ್ಯುತ್ ಸ್ಪರ್ಶಿಸಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲ್ಲೂಕಿನ ಐಗೂರು ಗ್ರಾಮದಲ್ಲಿ ಇಂದು ಮಧ್ಯಾಹ್ನ ಸಂಭವಿಸಿದೆ.

ಕೃಷಿಕ ನಾಗರಾಜಪ್ಪ ಎಂಬಾತ ಕೃಷಿ ಚಟುವಟಿಕೆಗೆ ಬಳಸುತ್ತಿದ್ದ ತನ್ನ ಎರಡು ಎತ್ತುಗಳನ್ನು ಮೆಕ್ಕೆಜೋಳ ತೆನೆ ಕಟಾವು ಆಗಿದ್ದ ಜಮೀನಿನಲ್ಲಿ ಆಡಲು ಬಿಟ್ಟಿದ್ದ. ಈ ವೇಳೆ ಮೇಯುತ್ತಿದ್ದ ಸುಮಾರು 65 ಸಾವಿರ ಮೌಲ್ಯದ ಒಂದು ಎತ್ತಿನ ಮೇಲೆ ವಿದ್ಯುತ್ ತಂತಿ ಏಕಾಏಕಿ ಹರಿದು ಬಿದ್ದಿದ್ದು, ವಿದ್ಯುತ್ ಸ್ಪರ್ಶವಾಗಿ ಸಾವನ್ನಪ್ಪಿದೆ.

ಜೀವ ಉಳಿಸಲು ಪ್ರಯತ್ನಿಸಿದರೂ ಸಹ ಕಣ್ಣೆದುರೇ ಎತ್ತಿನ ಸಾವನ್ನು ಕಂಡ ನಾಗರಾಜಪ್ಪ ದುಃಖಿತನಾಗಿ ದಿಕ್ಕು ತೋಚದಂತಾಗಿದ್ದು, ಸರ್ಕಾರದಿಂದ ಪರಿಹಾರ ಸಿಕ್ಕರೆ ಅನುಕೂಲವಾಗುವುದೆಂದು ನಿರೀಕ್ಷಿಸಲಾಗಿದೆ.



ಘಟನಾ ಸ್ಥಳಕ್ಕಾಗಮಿಸಿದ್ದ ಕೆಇಬಿ ಅಧಿಕಾರಿಗಳು ಸ್ಥಳ ಪರಿಶೀಲಿಸಿ ಮುಂದಿನ ಕ್ರಮಕೈಗೊಂಡಿದ್ದು, ಪರಿಹಾರ ದೊರಕಿಸುವ ಭರವಸೆ ನೀಡಿದ್ದಾರೆನ್ನಲಾಗಿದೆ.

## ನಾಲ್ವರಿಗೆ ಕಚ್ಚಿದ ನಾಯಿ

ದಾವಣಗೆರೆ, ನ.13- ರಸ್ತೆಯಲ್ಲಿ ಸಾಗುತ್ತಿದ್ದವರಿಗೆ ಬೀದಿ ನಾಯಿಗಳು ಕಚ್ಚಿ ಗಾಯಗೊಳಿಸಿರುವ ಘಟನೆ ನಗರದ ಕೆ.ಬಿ. ಬಡಾವಣೆಯಲ್ಲಿ ಇಂದು ನಡೆದಿದೆ.

ಬೆಳಗ್ಗೆ ಬಡಾವಣೆಯ ರಸ್ತೆಯಲ್ಲಿ ಸಾಗುತ್ತಿದ್ದಾಗ ಏಕಾಏಕಿ ಬೀದಿ ನಾಯಿಗಳು ದಾಳಿ ಮಾಡಿದ್ದು, ಬಾಲಕ ಸೇರಿ ನಾಲ್ವರಿಗೆ ಕಚ್ಚಿ ಗಾಯಗೊಳಿಸಿವೆ. ಇದರಿಂದ ಆತಂಕಗೊಂಡ ಸಾರ್ವಜನಿಕರು ರಸ್ತೆಯಲ್ಲಿ ಭಯದಿಂದ ಸಂಚರಿಸಿದ್ದಾರೆ. ನಾಯಿಗಳ ಹಾವಳಿ ಇದ್ದರೂ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಸಾರ್ವಜನಿಕರು, ಈ ಬಗ್ಗೆ ಕ್ರಮಕ್ಕೆ ನಗರ ಪಾಲಿಕೆಗೆ ಮನವಿ ಮಾಡಿದ್ದಾರೆ.

## ಗ್ರಾಸಿಂನಲ್ಲಿ ಕೃತಕ ಕಾಲು ಜೋಡಣೆ

ರಾಣೇಬೆನ್ನೂರು, ನ.13- ಕುಮಾರಪಟ್ಟಣಂನ ಗ್ರಾಸಿಂ ಜನಸೇವಾ ಟ್ರಸ್ಟ್ ವತಿಯಿಂದ ದಿ. ಆದಿತ್ಯ ವಿಕ್ರಂ ಬಿರ್ಲಾ ಅವರ ಜನ್ಮದಿನ ನವಂಬರ್ 19 ರಂದು ಉಚಿತವಾಗಿ ಕೃತಕ ಕಾಲು ಜೋಡಣೆ ಶಿಬಿರ ನಡೆಯಲಿದೆ. ಮಾಹಿತಿಗೆ ರೇಣುಕ ನಾಗನೂರ (99643 48288), ಮಂಜುನಾಥ (87224 29612) ಅವರನ್ನು ಸಂಪರ್ಕಿಸಬಹುದು.

# ವಿಶ್ವಬಂಧು ಸೌಹಾರ್ದ ಸಹಕಾರಿ ಸಭೆ




ಹರಪನಹಳ್ಳಿ

ಹರಪನಹಳ್ಳಿ, ನ.13- ವಿಶ್ವಬಂಧು ಸೌಹಾರ್ದ ಸಹಕಾರಿಯ ವಾರ್ಷಿಕ ಮಹಾಸಭೆ ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಜರುಗಿತು. ಸಂಘದ ಅಧ್ಯಕ್ಷ ಬಂದೋಳ್ ಮಂಜುನಾಥ್ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ನಿರ್ದೇಶಕರುಗಳಾದ ಕೆ. ರವೀಂದ್ರನಾಥ್, ಕೆ. ಬಸವರಾಜ್, ಪಿ. ಕೆಂಚನಗೌಡ, ಎಂ. ಪ್ರಕಾಶ್, ಬಿ.ವಿ. ಬಸವನಗೌಡ, ಕುಸುಮಾ ಜಗದೀಶ್, ಹೆಚ್.ಎಂ. ಶೈಲಜಾ ದೇವರಾಜ್, ಸಿಬ್ಬಂದಿಗಳಾದ ಪ್ರಶಾಂತ ಹೊಳಿಯಪ್ಪರ, ಸಿದ್ದೇಶ್.ಪಿ, ಅರುಣ ಕಂಠಿ, ಓ. ನಾಗರಾಜ್, ರಾಜಶೇಖರ ಗೌಡ, ಡಿ. ಅಶೋಕ, ಇನ್ನಿತರರು ಭಾಗವಹಿಸಿದ್ದರು.

## ಸೋಮಲಾಪುರ ಸಂತಾಪ

ದಾವಣಗೆರೆ,ನ.13- ಡಿ.ಎಸ್.ಎಸ್. ಹಿರಿಯ ಮುಖಂಡ ಎಂ. ಜಯಣ್ಣ ಅವರ ನಿಧನಕ್ಕೆ ಗಾಂಧೀಜಿ ಹರಿಜನ ಯುವಕರ ಸಂಘದ ಪ್ರಧಾನ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ ಸಂತಾಪ ವ್ಯಕ್ತಪಡಿಸಿದ್ದಾರೆ.


# ಜಿ.ಬಿ. ಹನುಮಂತ ರೆಡ್ಡಿ ನಿಧನ



ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು ಕಮಂಡಲಗೊಂದಿ ಗ್ರಾಮದ ವಾಸಿ


**ಶ್ರೀ ಜಿ.ಬಿ. ಹನುಮಂತರೆಡ್ಡಿ**

ಅವರು, ದಿನಾಂಕ 13.11.2020ರ ಶುಕ್ರವಾರ ರಾತ್ರಿ 8.10 ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 75 ವರ್ಷ ವಯಸ್ಸಾಗಿತ್ತು.
ನಾಲ್ವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.11.2020 ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಕಮಂಡಲಗೊಂದಿ ಗ್ರಾಮದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.

– ದುಃಖತಪ್ತ ಕುಟುಂಬ ವರ್ಗ, ಮೊ. : 94491 28959



## ಸ್ಮರಣೆ



**ಕೊಂಡಜ್ಜಿ ಬಸಪ್ಪ**

ಲಿಂಗೈಕ್ಯ: 14-11-1982

ಮಾಜಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಚಿವರು ಹಾಗೂ
ಮಾಜಿ ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

"ನಿಮ್ಮ ಚಿಂತನೆ ಆದರ್ಶಗಳು ನಮಗೆ ದಾರಿದೀಪ"

ಕೊಂಡಜ್ಜಿ ಬ. ಷಣ್ಮುಖಪ್ಪ, ಡಾ: ಕೆ. ಬಿ. ಗುರುಮೂರ್ತಿ, ಕೆ. ಬಿ. ವಿಜಯಕುಮಾರ್
ಕೆ. ಬಿ. ರವೀಂದ್ರನಾಥ್, ಮೋಹನ್ ಕೊಂಡಜ್ಜಿ, ವಿಧಾನ ಪರಿಷತ್ ಸದಸ್ಯರು
ಎಸ್. ವಿ. ಮಂಜುಳ – ಡಾ: ಎಸ್. ಬಿ. ವಸಂತಕುಮಾರ್
ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಕೊಂಡಜ್ಜಿ ಬಳಗ.

ಕೊಂಡಜ್ಜಿ ಬಸಪ್ಪ ಸರ್ವಮಂಗಳಮ್ಮ ಮೆಮೋರಿಯಲ್ ಟ್ರಸ್ಟ್, ಬೆಂಗಳೂರು.


# ಭೂಗತ ಕೇಬಲ್ ಮಾರ್ಗದಲ್ಲಿ ರಸ್ತೆ ಅಗೆಯದಂತೆ, ಅಡಚಣೆ ಮಾಡದಂತೆ ಎಚ್ಚರಿಕೆ

ದಾವಣಗೆರೆ, ನ.13- ದಾವಣಗೆರೆ ನಗರ ಉಪವಿಭಾಗ-2, ಘಟಕ-2 ರ ವ್ಯಾಪ್ತಿಯಲ್ಲಿ ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಮಂಡಿಪೇಟೆ, ಎಂ.ಜಿ.ರಸ್ತೆ, ಚೌಕಿಪೇಟೆ, ಚಾಮರಾಜ ಪೇಟೆಯಲ್ಲಿನ ರಸ್ತೆಗಳನ್ನು ಸ್ಮಾರ್ಟ್ ರಸ್ತೆಗಳನ್ನಾಗಿ ಪರಿವರ್ತಿಸಲು ಬೆಸ್ಕಾಂ ರಸ್ತೆಯ ಮೇಲ್ಮಾರ್ಗಗಳನ್ನು ಕಳಚಲು ಭೂಗತ ಕೇಬಲ್, ಆರ್.ಎಂ.ಯು ಪರಿವರ್ತಕ ಕೇಂದ್ರ, ಫೀಡರ್ ಪಿಲ್ಲರ್ ಇತ್ಯಾದಿ ವಿದ್ಯುತ್ ಉಪಕರಣಗಳನ್ನು ಅಳವಡಿಸಿ ಚಾಲನೆಗೊಳಿಸಿರುತ್ತಾರೆ.

ಈ ಉಪಕರಣಗಳ ಹತ್ತಿರ ಸಾರ್ವಜನಿಕರು ಹೋಗದಂತೆ, ಕಸಕಡ್ಡಿ ತ್ಯಾಜ್ಯ ವಸ್ತುಗಳನ್ನು ಹಾಕದಂತೆ, ಉಪಕರಣಗಳ ಪಕ್ಕದಲ್ಲಿ ವಾಹನಗಳನ್ನು ನಿಲ್ಲಿಸುವುದು, ಮುಟ್ಟುವುದು, ಉಪಕರಣಗಳ ಮೇಲೆ ಇತರೆ ಸಾಮಗ್ರಿಗಳನ್ನು ವರ್ತಕರು ಇಡದಂತೆ ಮತ್ತು ಭೂಗತ ಕೇಬಲ್ ಮಾರ್ಗದ ಮೇಲೆ ರಸ್ತೆ ಅಗೆಯದಂತೆ ಎಚ್ಚರ ವಹಿಸಬೇಕು.

ಈ ಕುರಿತು ವಿವರಕ್ಕೆ ಪ್ರಶಾಂತ್, ದಾವಣಗೆರೆ ಸ್ಮಾರ್ಟ್ ಸಿಟಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಮೊಬೈಲ್ 9480725720, ರವಿಕುಮಾರ್, ಬೆವಿಕಂ ಸಹಾಯಕ ಇಂಜಿನಿಯರ್ (ವಿ) ಮೊ. 8970563001, ವಿಶ್ವನಾಥ್ ಕಿರಿಯ ಇಂಜಿನಿಯರ್ (ವಿ)/ಬೆ.ವಿ.ಕಂ ಮೊ. 994577455 ನ್ನು ಸಂಪರ್ಕಿಸಬಹುದು.

## ಅರಳಿದ ಮೊಗ್ಗು

ಆಕಾಶದಲಿ ಮೂಡಿದ
ಚಂದ್ರಮನ ಸುತ್ತಲಿನಲಿ
ಮೋಡ ಕವಿದಿರಲು
ಧರೆಗೆ ಹನಿಯಾಗಿ.

ನವಮಾಸಲಿ ಆಕಾರ
ಪಡೆಯುತ್ತ ಚಕ್ಕರಗುಳ್ಳಿ
ಇಡುತ್ತ ಆನಂದವ
ಹರಿಸಿರುವೆಮ್ಮಗೆ.

ಹಾಡಗಲಲಿ ಮೊಗ್ಗಾಗಿ
ಇರುಳಲಿ ಸಂಸ್ಕಾರ ನೀಡಿ
ಹಿರಿ ಹಿರಿ ಹಿಗ್ಗುವ
ಮೊಗ್ಗಿನ ಹೂ ಆದೇ ನೀ.

ಬಂಜೆಯೆನ್ನುವ
ಸಂಕೋಲೆ ತುಂಡರಿಸಿದ
ವೀರಭಿಮನ್ಯು
ಬೆಳಕಾಗಿ ಬಂದವ
ತೊಟ್ಟಿಲು ತೂಗಿಸಿದೆ.

ಎಲ್ಲರ ನಗು ನೀನಾಗಿರ
ಚಂದಕೆ ಸಾಟಿಯೇ ಇಲ್ಲ.
ಮುದ್ದು ಮುಖದಲಿ
ಬೆಳಕು ಧರೆ ಪೂರಾ.

**- ರೇವಣ್ಣ ಬಳ್ಳಾರಿ,
ನ್ಯಾಯವಾದಿ, ದಾವಣಗೆರೆ.**

# ಅಯೋಧ್ಯೆಯಲ್ಲಿ 6 ಲಕ್ಷ ಹಣತೆಗಳಿಂದ ದೀಪೋತ್ಸವ

**ಗಿನ್ನಿಸ್ ದಾಖಲೆಗೆ ಸೇರ್ಪಡೆ**

ಅಯೋಧ್ಯೆ, ನ. 13 – ಶ್ರೀರಾಮ ಅಯೋಧ್ಯೆಗೆ ಮರಳಿದ ಸಂಕೇತವಾಗಿ ಆಚರಿಸಲಾಗುವ ಧಾರ್ಮಿಕ ಸಮಾರಂಭವನ್ನು ವಿಜೃಂಭಣೆಯಿಂದ ಆಚರಿಸಿರುವ ಉತ್ತರ ಪ್ರದೇಶ, ಸರಯೂ ನದಿಯ ದಂಡೆಯನ್ನು ಲಕ್ಷಾಂತರ ದೀಪಗಳಿಂದ ಅಲಂಕರಿಸಿದೆ.

ರಾಮ ಹಾಗೂ ಸೀತೆ ಪುಷ್ಪಕ ವಿಮಾನದಲ್ಲಿ ಮರಳಿದ್ದನ್ನು ಲೇಸರ್ ಹಾಗೂ ಧ್ವನಿ ಪ್ರದರ್ಶನದ ಮೂಲಕ ಬಿಂಬಿಸಲಾಯಿತು. ದಾಖಲೆಯ 6 ಲಕ್ಷ ಹಣತೆಗಳನ್ನು ನದಿ ದಂಡೆಯಲ್ಲಿ ಬೆಳಗಲಾಯಿತು ಎಂದು ರಾಜ್ಯ ಸರ್ಕಾರ ತಿಳಿಸಿದೆ. ರಾಮಾಯಣ ಕಾಲದ ಘಟನೆಗಳನ್ನು ಬಿಂಬಿಸುವಂತೆ ಹಣತೆಗಳನ್ನು ಜೋಡಿಸಲಾಗಿತ್ತು.

ಈ ಸಮಾರಂಭ ಗಿನ್ನೀಸ್ ದಾಖಲೆಗೆ ಸೇರಲಿದೆಯೇ ಎಂಬುದನ್ನು ಪರಿಗಣಿಸಲು ತಂಡವೊಂದು ಆಗಮಿಸಿತ್ತು. ಈ ಸಂದರ್ಭದಲ್ಲಿ 6,06,569 ದೀಪಗಳನ್ನು ಹಚ್ಚಲಾಗಿದೆ, ಇದು ವಿಶ್ವದಲ್ಲೇ ಅತಿ ದೊಡ್ಡ ದೀಪೋತ್ಸವ ಎಂದು ತಂಡದ ನೇತೃತ್ವದ ವಹಿಸಿದ್ದ ನಿಶ್ಚಲ್ ಬರೋಟ್ ಹೇಳಿದ್ದಾರೆ.

ರಾಮ ದೇವಾಲಯ ಸ್ಥಾಪನೆಗಾಗಿ ಭೂಮಿ ಪೂಜೆ ನೆರವೇರಿಸಿದ ನಂತರ ನಡೆದ ಮೊದಲ ಭವ್ಯ ಸಮಾರಂಭ ಇದಾಗಿದೆ. ಅಯೋಧ್ಯೆಯಲ್ಲಿ ಇದುವರೆಗೂ ಒಟ್ಟು ನಾಲ್ಕು ದೀಪೋತ್ಸವಗಳನ್ನು ಆಚರಿಸಲಾಗಿದೆ. ದೀಪೋತ್ಸವದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹಾಗೂ ರಾಜ್ಯಪಾಲೆ ಆನಂದಿಬೆನ್ ಪಟೇಲ್ ಅವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಅಯೋಧ್ಯೆಗೆ ಸಂಬಂಧಿಸಿದ ಹಲವು ಹೊಸ ಯೋಜನೆಗಳಿಗೂ ಚಾಲನೆ ನೀಡಲಾಯಿತು.

## ಎಲ್‌ಇಡಿ ವಾಹನ ಮೂಲಕ ಕೋವಿಡ್ ಜಾಗೃತಿ ಆಂದೋಲನ

ಚನ್ನಗಿರಿ, ನ. 13 - ಕೊರೊನಾ ಸೋಂಕು ನಿಯಂತ್ರಿಸಲು ಸಾರ್ವಜನಿಕರು ಅನುಸರಿಸಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಜನರಲ್ಲಿ ಅರಿವು ಮೂಡಿಸುವ ಸಲುವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಜಿಲ್ಲೆಯಲ್ಲಿ ಎಲ್‌ಇಡಿ ಬೃಹತ್ ಪರದೆ ಹೊಂದಿರುವ ವಿಶೇಷ ವಾಹನದ ಮೂಲಕ ಹಮ್ಮಿಕೊಂಡಿರುವ ಕೊರೊನಾ ಜಾಗೃತಿ ಆಂದೋಲನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ ಅವರು ಚನ್ನಗಿರಿಯ ತಾಲ್ಲೂಕು ಕ್ರೀಡಾಂಗಣದಲ್ಲಿ ಹಸಿರು ನಿಶಾನೆ ತೋರಿದರು. ವಿಶೇಷ ವಾಹನದ ಮೂಲಕ ಜಾಗೃತಿ ಆಂದೋಲನವನ್ನು ಜಿಲ್ಲೆಯ ಎಲ್ಲ ತಾಲ್ಲೂಕಿನ ಆಯ್ದ 180 ಗ್ರಾಮಗಳಲ್ಲಿ 10 ದಿನಗಳ ಕಾಲ ಹಮ್ಮಿಕೊಂಡಿದೆ. ಜಿಲ್ಲೆಗೆ ಇಂತಹ ಎರಡು ಎಲ್‌ಇಡಿ ವಾಹನಗಳನ್ನು ಇಲಾಖೆ ವತಿಯಿಂದ ವ್ಯವಸ್ಥೆಗೊಳಿಸಲಾಗಿದೆ.

# ದೀಪಾವಳಿ ಸಂಭ್ರಮಿಸಲು ಸಿದ್ಧತೆ : ಮಾರುಕಟ್ಟೆಯತ್ತ ಜನ

**ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ**



ದಾವಣಗೆರೆಯ ವಿಜಯಲಕ್ಷ್ಮಿ ರಸ್ತೆಯಲ್ಲಿ ಗುರುವಾರ ಕಂಡ ಜನಸ್ತೋಮ

ದಾವಣಗೆರೆ, ನ.13- ಬೆಳಕಿನ ಹಬ್ಬ ದೀಪಾವಳಿ ಆಚರಣೆಗೆ ಕೆಲವೇ ದಿನಗಳು ಬಾಕಿ ಇವೆ. ಇತ್ತ ಕೊರೊನಾ ಸೋಂಕು ಇಳಿಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜನತೆ ಹಬ್ಬವನ್ನು ಸಂಭ್ರಮದಿಂದಲೇ ಆಚರಿಸಲು ಸಿದ್ಧತೆ ನಡೆಸಿದ್ದಾರೆ.

ಕಳೆದ ಮಾರ್ಚ್‌ನಿಂದ ಕೆಲವು ಹಬ್ಬಗಳನ್ನು ಕೊರೊನಾ ಭಯದಲ್ಲಿಯೇ ಸರಳವಾಗಿ ಆಚರಿ ಸುವಂತಾಗಿತ್ತು. ಹಿಂದೂಗಳ ದೊಡ್ಡ ಹಬ್ಬ ಎನಿಸಿಕೊಂಡಿದ್ದ ಗಣೇಶ ಚತುರ್ಥಿ, ದಸರಾ ಹಬ್ಬಗಳೂ ಕಳೆಗುಂದಿದ್ದವು. ಇದಕ್ಕೆ ಲಾಕ್‌ಡೌನ್‌ನಿಂದಾಗಿ ಕೆಲಸಗಳು, ವ್ಯವಹಾರಗಳಿಲ್ಲದೆ ಜನರ ಕೈಯಲ್ಲಿ ಹಣದ ಹರಿವು ಕಡಿಮೆಯಾಗಿದ್ದೂ ಕಾರಣವಾಗಿತ್ತು.

ಕಳೆದ ಒಂದೆರಡು ತಿಂಗಳಿನಿಂದ ವ್ಯವಹಾರಗಳು ಕೈ ಹಿಡಿದಿವೆ. ಖಾಸಗಿ ಸಂಸ್ಥೆಗಳು ಎಂದಿನಂತೆ ಉದ್ಯೋಗ, ವೇತನ ನೀಡಲು ಆರಂಭಿಸಿವೆ. ಇದರಿಂದಾಗಿ ಜನತೆ ತುಸು ನಿಟ್ಟುಸಿರು ಬಿಡುತ್ತಿದ್ದಾರೆ. ಎಲ್ಲದಕ್ಕಿಂತ ಹೆಚ್ಚಾಗಿ ಕೊರೊನಾ ಸೋಂಕಿತರ ಸಂಖ್ಯೆ ಕಡಿಮೆ ಯಾಗುತ್ತಲೇ ಇದೆ.

ಈ ಎಲ್ಲಾ ಹಿನ್ನೆಲೆಯಲ್ಲಿ ಈ ಬಾರಿಯ ದೀಪಾವಳಿ ಕಳೆಕಟ್ಟುವುದರಲ್ಲಿ ಅನುಮಾನವೇ ಇಲ್ಲ. ಇದಕ್ಕೆ ಪುಷ್ಟಿ ನೀಡುವಂತೆ ಹಬ್ಬ ನಾಲ್ಕೈದು ದಿನಗಳು ಬಾಕಿ ಇರುವಂತೆಯೇ ನಗರದಲ್ಲಿನ ಪ್ರಮುಖ ಬಟ್ಟೆ ಅಂಗಡಿಗಳಲ್ಲಿ ಖರೀದಿ ಭರಾಟೆ ಭರ್ಜರಿಯಾಗಿಯೇ ನಡೆಯುತ್ತಿದೆ.

ನಗರದ ಪ್ರಮುಖ ಬಟ್ಟೆ ಅಂಗಡಿಗಳಲ್ಲಿ ಜನತೆ ಕುಟುಂಬ ಸಮೇತರಾಗಿ ಬಟ್ಟೆ ಖರೀದಿಸಲು ಮುಗಿ ಬಿದ್ದಿದ್ದಾರೆ. ಮಂಡಿಪೇಟೆ, ಗಡಿಯಾರ ಕಂಬದ ಬಳಿ, ಚಾಮರಾಜೇಂದ್ರ ವೃತ್ತ, ಕಾಯಿಪೇಟೆ ಹೀಗೆ ಮಾರುಕಟ್ಟೆ ಪ್ರದೇಶ ಗಳತ್ತ ಜನರ ಹರಿವೂ ಹೆಚ್ಚಾಗತೊಡಗಿದೆ.

**ದರ ಏರಿಕೆ ಬಿಸಿ:** ಹಬ್ಬಗಳ ವೇಳೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಸಹಜ. ಆದರೆ ಈ ಬಾರಿಯ ದೀಪಾವಳಿ ಹಬ್ಬ ಲಾಕ್‌ಡೌನ್ ದಾಟಿ ಕೊಂಡು ಬಂದಿರುವುದರಿಂದ ಸಹಜವಾಗಿಯೇ ಅಗತ್ಯ ವಸ್ತುಗಳ ಬೆಲೆ ಎಂದಿಗಿಂತ ಹೆಚ್ಚಾಗಿದೆ.

ಈಗಾಗಲೇ ಎಣ್ಣೆ, ಬೆಲ್ಲ ತೀವ್ರ ಏರಿಕೆ ಕಂಡಿದೆ. ಇದರೊಟ್ಟಿಗೆ ಬೇಳೆಯ ಬೆಲೆಯೂ ಹೆಚ್ಚಾಗಿದೆ. ಲಾಕ್‌ಡೌನ್ ಮೊದಲು 80 ರೂ. ಆಸುಪಾಸು ಇದ್ದ ತೊಗರಿ ಬೇಳೆಯ ಬೆಲೆ ಲಾಕ್‌ಡೌನ್ ವೇಳೆ 100ರ ಸನಿಹವಿತ್ತು. ಆದರೆ ಇದೀಗ 125-130ರಷ್ಟಿದೆ.

ಕಳೆದ ದಸರಾ ಹಬ್ಬದ ದಿನ ಹೂವಿನ ಬೆಲೆ ದಿಢೀರ್ ಏರಿಕೆ ಕಂಡಿತ್ತು. ಅದೇ ರೀತಿ ದೀಪಾವಳಿ ದಿನವೂ ಏರಿಕೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಅಂಗಡಿಗಳಲ್ಲಿ, ಮನೆಗಳಲ್ಲಿ ಲಕ್ಷ್ಮಿ ಪೂಜೆ, ಹಿರಿಯರ ಪೂಜೆ ಮುಂತಾದ ಪೂಜಾ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಹೂವಿಗೆ ಬೇಡಿಕೆ ಹೆಚ್ಚಾಗುತ್ತದೆ. ಕಾರಣ ಬೆಲೆಯೂ ಅನಿವಾರ್ಯವಾಗಿ ಏರಿಕೆಯಾಗಲಿದೆ.

ಕಳೆದ ಹಲವು ತಿಂಗಳಿನಿಂದ ನಗರದತ್ತ ಮುಖ ಮಾಡದ ಗ್ರಾಮೀಣ ಪ್ರದೇಶದ ಜನತೆ, ಹಬ್ಬದ ಅಂಗವಾಗಿ ನಗರಕ್ಕಾಗಮಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಕೇವಲ ಬಟ್ಟೆಗಳಷ್ಟೇ ಅಲ್ಲದೆ ಗೃಹೋಪಯೋಗಿ ವಸ್ತುಗಳ ಖರೀದಿಯು ಮಾರುಕಟ್ಟೆಯಲ್ಲಿ ಏರಿಕೆ ಕಂಡಿದೆ. ಇದು ವ್ಯಾಪಾರಸ್ಥರಿಗೆ ತುಸು ನೆಮ್ಮದಿ ತಂದಿದೆ.

### ಖರೀದಿ ಉತ್ಸಾಹದಲ್ಲಿ ಕೊರೊನಾ ನಿರ್ಲಕ್ಷ್ಯ

**ಜಿಲ್ಲೆಯಲ್ಲಿ ಕೊರೊನಾ ಸೋಂಕು ಇಳಿಕೆ ಕಂಡಿದೆ. ದಿನವೊಂದರಲ್ಲಿ 450 ಜನರು ಸೋಂಕಿಗೆ ಒಳಗಾಗುತ್ತಿದ್ದ ಸಂಖ್ಯೆ ಇದೀಗ ಪ್ರತಿ ದಿನ 30 ರಿಂದ 40ಕ್ಕೆ ಇಳಿದಿದೆ. ಶೀತ, ಕೆಮ್ಮು, ಜ್ವರ ಪೀಡಿತರ ಸಂಖ್ಯೆಯೂ ಗಣನೀಯವಾಗಿ ಕಡಿಮೆ ಯಾಗಿದೆ. ಜನ ಖರೀದಿ ಭರಾಟೆಯಲ್ಲಿ ಕೊರೊನಾ ಮರೆತು, ಸಾಮಾಜಿಕ ಅಂತರ ಕಾಪಾಡುವಲ್ಲಿ, ಮಾಸ್ಕ್ ಧರಿಸುವಲ್ಲಿ ನಿರ್ಲಕ್ಷ್ಯ ವಹಿಸುತ್ತಿರುವುದು ಕಂಡುಬಂತು.**

### ಪಟಾಕಿ ಸುಡುವ ಆಸಕ್ತಿ ಕ್ಷೀಣ

**ಕಳೆದ ಕೆಲ ವರ್ಷಗಳಿಂದ ಪಟಾಕಿ ಬಳಕೆಯಿಂದಾಗುವ ಹಾನಿಗಳ ಬಗ್ಗೆ ಮಾಧ್ಯಮಗಳು, ಸಾಮಾಜಿಕ ಜಾಲ ತಾಣಗಳಲ್ಲಿ ಹೆಚ್ಚಿನ ಪ್ರಚಾರವಾಗುವ ಹಿನ್ನೆಲೆಯಲ್ಲಿ ಪಟಾಕಿ ಬಳಕೆ ವರ್ಷದಿಂದ ವರ್ಷಕ್ಕೆ ಇಳಿಕೆಯಾಗುತ್ತಲೇ ಸಾಗಿತ್ತು.**

**ಈ ಬಾರಿ ಕೊರೊನಾ ಸಂಕಷ್ಟವು ಪಟಾಕಿ ಸುಟ್ಟು ಹಣ ಹಾಳು ಮಾಡಿಕೊಳ್ಳಲು ಮಧ್ಯಮ ವರ್ಗದ ಜನತೆ ಚಿಂತಿಸುವಂತೆ ಮಾಡಿದೆ. ಇದರಿಂದಾಗಿ ಪಟಾಕಿ ವ್ಯಾಪಾರ ಬಹುತೇಕ ಕುಂಠಿತವಾಗುವ ಎಲ್ಲಾ ಸಾಧ್ಯತೆಗಳೂ ಇವೆ.**

**ಇನ್ನು ಪಟಾಕಿ ನಿಷೇಧದ ಮಾತು. ಹಸಿರು ಪಟಾಕಿಯಷ್ಟನ್ನೇ ಬಳಸುವಂತೆ ಸೂಚನೆ. ಇವು ಗೊಂದಲಕ್ಕೀಡು ಮಾಡಿದೆ. ಸ್ವತಃ ಪಟಾಕಿ ವ್ಯಾಪಾರಸ್ಥರೇ ಈ ಬಾರಿ ಪಟಾಕಿ ವ್ಯಾಪಾರ ನೆಲಕಚ್ಚುವ ಸಾಧ್ಯತೆ ಬಗ್ಗೆ ಮಾತನಾಡಿಕೊಳ್ಳುತ್ತಿದ್ದಾರೆ.**

### ಬಟ್ಟೆ ಅಂಗಡಿ ರಶ್

**ಹೊಸ ಬಟ್ಟೆ ಖರೀದಿಸಿ ಉಡದಿದ್ದರೆ ದೀಪಾವಳಿ ಹಬ್ಬ ಸಂಭ್ರಮ ಎನಿಸದು. ಈ ಹಿನ್ನೆಲೆಯಲ್ಲಿ ಕಳೆದ ಎರಡ್ಮೂರು ಹಬ್ಬಗಳನ್ನು ಸರಳವಾಗಿ ಆಚರಿಸಿದ್ದ ಜನತೆ ದೀಪಾವಳಿ ಬಟ್ಟೆ ಖರೀದಿಗೆ ಮುಂದಾಗಿದೆ. ಕಾರಣ ನಗರದ ಪ್ರಮುಖ ಬಟ್ಟೆ ಅಂಗಡಿಗಳು ಜನರಿಂದ ತುಂಬಿಕೊಂಡಿವೆ.**

# ಬಿಎಸ್‌ವೈ ನೇತೃತ್ವದಲ್ಲೇ ಮುಂದಿನ ಚುನಾವಣೆಗೆ ಹೋದರೆ ಪೂರ್ಣ ಬಹುಮತ



ಚನ್ನಗಿರಿ, ನ. 13 - ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೇ ಮುಂದಿನ ಎರಡೂವರೆ ವರ್ಷಗಳವರೆಗೆ ಅಧಿಕಾರದಲ್ಲಿ ಮುಂದುವರೆಯಲಿದ್ದಾರೆ. ಅವರ ನೇತೃತ್ವದಲ್ಲೇ ಬಿಜೆಪಿ ಚುನಾವಣೆಗೆ ಹೋದರೆ ಮತ್ತೆ ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬರುವುದಲ್ಲಿ ಅನುಮಾನವಿಲ್ಲ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ.

ಇಲ್ಲಿನ ಸರ್ಕಾರಿ ತಾಲ್ಲೂಕು ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಜನಸ್ಪಂದನ ಹಾಗೂ ವಿವಿದ ಕಾಮಗಾರಿಗಳ ಶಂಕುಸ್ಥಾಪನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಇತ್ತೀಚೆಗೆ ನಡೆದ ವಿಧಾನಸಭಾ ಉಪ ಚುನಾವಣೆಯಲ್ಲಿ ಯಡಿಯೂರಪ್ಪ ನೇತೃತ್ವದಲ್ಲಿ ಎರಡೂ ಸ್ಥಾನಗಳಲ್ಲಿ ಬಿಜೆಪಿ ಗೆದ್ದಿದೆ. ಪರಿಷತ್‌ಗೆ ನಡೆದ ನಾಲ್ಕು ಚುನಾವಣೆಯಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ ಎಲ್ಲಾ ಸ್ಥಾನಗಳನ್ನು ಗೆದ್ದಿದೆ ಎಂದು ಹೇಳಿದರು.

ನಾಲ್ಕು ಪರಿಷತ್ ಸ್ಥಾನಗಳ ಪೈಕಿ ಒಂದು ಮಾತ್ರ ಚುನಾವಣೆಗೆ ಮುಂಚೆ ಬಿಜೆಪಿ ಬಳಿ ಇತ್ತು. ಈಗ ನಾಲ್ಕರಲ್ಲೂ ಬಿಜೆಪಿ ಗೆದ್ದಿದೆ. ಯಡಿಯೂರಪ್ಪ ನಾಯಕತ್ವದ ಈ ಗೆಲುವುಗಳು ಅವಿಸ್ಮರಣೀಯ ಎಂದು ಸಿದ್ದೇಶ್ವರ ಹೇಳಿದ್ದಾರೆ.

### ಮನೆ ಬಾಗಿಲಿಗೇ ಸರ್ಕಾರ, ಕಾಟ ಇಲ್ಲದೇ ಕೆಲಸ

ತಮ್ಮ ತಂದೆ ನಿಧನರಾದ ನಂತರ ತಾಯಿ ವಿಧವಾ ವೇತನ ಪಡೆಯಲು ತಹಶೀಲ್ದಾರ್ ಕಚೇರಿಗೆ ಅಲೆದಾಡಿದ ಹಾಗೂ ಕಷ್ಟ ಎದುರಿಸಿದ್ದನ್ನು ನೆನಪಿಸಿಕೊಂಡ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಅಂತಹ ಪರಿಸ್ಥಿತಿ ಮತ್ತೆ ಬರಬಾರದು ಎಂದು ಮನೆ ಬಾಗಿಲಿಗೆ ಸರ್ಕಾರ ತರುವ ಜನಸ್ಪಂದನ ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

ವಿಧವೆಯರು, ವೃದ್ಧರು ಮತ್ತಿತರರಿಗೆ ಈಗ ಮನೆ ಬಾಗಿಲಿಗೇ ಯಾವುದೇ ಕಾಟ ಇಲ್ಲದೇ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು.

### ಪಟಾಕಿ ಬೇಡ, ದೀಪ ಹಚ್ಚಿ : ಸಚಿವ ಭೈರತಿ ಬಸವರಾಜ್

ಪರಿಸರ ಹಾನಿ ತಡೆಯಲು ಹಾಗೂ ಕೊರೊನಾ ಹರಡುವುದನ್ನು ತಡೆಯಲು ಪಟಾಕಿ ನಿಷೇಧಿಸುವ ದಿಟ್ಟ ನಿರ್ಧಾರವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತೆಗೆದುಕೊಂಡಿದ್ದಾರೆ ಎಂದಿರುವ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ದೀಪಾವಳಿಯಲ್ಲಿ ಪಟಾಕಿ ಹೊಡೆಯದೇ ಮನೆಯಲ್ಲಿ ದೀಪ ಹಚ್ಚಿ ಎಂದು ಕರೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಜಿ.ಎಂ.ಸಿದ್ದೇಶ್ವರ, ಕೊರೊನಾ ಬಂದವರಿಗೆ ಉಸಿರು ಕಟ್ಟಿದ ಕಾರಣಕ್ಕಾಗಿಯೇ ಸಾವು ಸಂಭವಿಸುತ್ತದೆ. ಹೀಗಾಗಿ ಕೊರೊನಾ ರೋಗಿಗಳಿಗೆ ಪಟಾಕಿ ಇನ್ನಷ್ಟು ಸಮಸ್ಯೆ ತರುತ್ತದೆ. ಕೊರೊನಾ ಹೆಮ್ಮಾರಿ ಹೋದ ನಂತರ ಪಟಾಕಿ ಹೊಡೆಯೋಣ ಎಂದರು.

ಸಮಾರಂಭದಲ್ಲಿ ಮಾತನಾಡಿದ ಶಾಸಕ ಹಾಗೂ ಕೆ.ಎಸ್.ಡಿ.ಎಲ್. ಅಧ್ಯಕ್ಷ ಮಾಡಾಳ್ ವಿರೂಪಾಕ್ಷಪ್ಪ, ಯಡಿಯೂರಪ್ಪ ನಾಯಕತ್ವ ಬದಲಾಗುವುದಿಲ್ಲ. ಅವರೇ ಮುಂದುವರೆಯ ಬೇಕು ಎಂಬುದು ರಾಜ್ಯದ ಜನತೆಯ ಇಚ್ಛೆ. ರಾಜ್ಯ ಅಭಿವೃದ್ಧಿ ಪಥದತ್ತ ಸಾಗಲು ಅವರ ನಾಯಕತ್ವ ಬೇಕು ಎಂಬ ಭಾವನೆ ಇದೆ ಎಂದರು.

ಬಡವರು ಹಾಗೂ ರೈತರ ಬಗ್ಗೆ ಯಡಿಯೂರಪ್ಪ ಕಾಳಜಿ ಹೊಂದಿದ್ದಾರೆ ಎಂದ ವಿರೂಪಾಕ್ಷಪ್ಪ, ಬಿ.ವೈ. ವಿಜಯೇಂದ್ರ ಅವರು ಉಪ ಚುನಾವಣೆಯ 'ಎಕ್ಸ್‌ಪರ್ಟ್' ಆಗಿದ್ದಾರೆ. ಅವರಲ್ಲಿ ಒಳ್ಳೆಯ ನಾಯಕತ್ವ ಗುಣವಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

# ರಾಜ್ಯ ಬಿಜೆಪಿ ಉಸ್ತುವಾರಿಯಾಗಿ ಅರುಣ್ ಸಿಂಗ್ ನೇಮಕ



ಬೆಂಗಳೂರು, ನ. 13 – ರಾಜ್ಯ ಬಿಜೆಪಿ ಉಸ್ತು ವಾರಿಯಾಗಿ ಪಕ್ಷದ ಹಿರಿಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರನ್ನು ನೇಮಿಸಲಾಗಿದೆ.

ಇದೇ ವೇಳೆ ಮಾಜಿ ಸಚಿವ ಸಿ.ಟಿ. ರವಿ ಅವರನ್ನು ಚುನಾವಣೆ ಎದುರಿಸಲಿರುವ ತಮಿಳುನಾಡು ಹಾಗೂ ರಾಜಕೀಯವಾಗಿ ಮಹತ್ವ ಪಡೆದಿರುವ ಮಹಾರಾಷ್ಟ್ರ ಸೇರಿದಂತೆ ಮೂರು ರಾಜ್ಯಗಳಿಗೆ ಉಸ್ತುವಾರಿಯಾಗಿ ನೇಮಿಸಲಾಗಿದೆ. ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಶುಕ್ರವಾರ ಉಸ್ತುವಾರಿಗಳು ಹಾಗೂ ಸಹ ಉಸ್ತುವಾರಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದ್ದಾರೆ. ಇದುವರೆಗೂ ರಾಜ್ಯ ಉಸ್ತುವಾರಿಯಾಗಿದ್ದ ಮುರಳೀಧರ ರಾವ್ ಅವರನ್ನು ಮಧ್ಯ ಪ್ರದೇಶಕ್ಕೆ ರವಾನಿಸಲಾಗಿದೆ.

ತೆಲಂಗಾಣ ಬಿಜೆಪಿ ನಾಯಕಿಯಾಗಿರುವ ಡಿ.ಕೆ. ಅರುಣ ಅವರು ಕರ್ನಾಟಕದ ಸಹ ಉಸ್ತುವಾರಿಯಾಗಲಿದ್ದಾರೆ. ಅರುಣ್ ಸಿಂಗ್ ಅವರು ಕರ್ನಾಟಕದ ಜೊತೆ ರಾಜಸ್ಥಾನದ ಉಸ್ತುವಾರಿಯನ್ನೂ ನಿರ್ವಹಿಸಲಿದ್ದಾರೆ. ಇತ್ತೀಚೆಗಷ್ಟೇ ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದ ಸಿ.ಟಿ. ರವಿ ಅವರಿಗೆ ದೊಡ್ಡ ಹೊಣೆಯನ್ನು ನೀಡಲಾಗಿದೆ. ತಮಿಳುನಾಡು, ಮಹಾರಾಷ್ಟ್ರಗಳ ಜೊತೆಗೆ ಅವರು ಗೋವಾ ವ್ಯವಹಾರಗಳನ್ನೂ ನೋಡಿಕೊಳ್ಳಲಿದ್ದಾರೆ.

## ತಾಲ್ಲೂಕು ಕಸಾಪದಿಂದ ಇಂದು ನುಡಿ ಹಬ್ಬ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿ ಯಿಂದ ಅಂತರ್ಜಾಲದ ಮೂಲಕ ನಡೆಯುತ್ತಿರುವ ಕನ್ನಡ ನುಡಿ ಹಬ್ಬದಲ್ಲಿ ಇಂದು ಸಂಜೆ 6 ರಿಂದ 7ರವರೆಗೆ 'ಕನ್ನಡ ಕೆಲವು ಶಿಶು ಗೀತೆಗಳಲ್ಲಿ ನಮ್ಮ ಸಂಸ್ಕೃತಿ' ವಿಷಯ ಕುರಿತು ಹಿರಿಯ ವ್ಯಂಗ್ಯ ಚಿತ್ರಕಾರ ಹೆಚ್.ಬಿ. ಮಂಜುನಾಥ್ ಅವರು ಮಾಹಿತಿ ಒದಗಿಸಲಿದ್ದಾರೆ.

ಆಸಕ್ತರು youtube channel links : Davanagere Taluk ka.sa.pa kannada Nudi_habba2020, web site : http://www.youtube.com/channel/ucjWzFm4YFnhAxce4UwjPsYg ಮುಖಾಂತರ ಕಾರ್ಯಕ್ರಮ ವೀಕ್ಷಿಸಬಹುದು.

## ವಿದೇಶದಿಂದ ಬಂದವರಿಗೆ ಪರೀಕ್ಷೆಯಲ್ಲಿ ನೆಗೆಟಿವ್ ಇದ್ದರೆ ಕ್ವಾರಂಟೈನ್ ಅಗತ್ಯವಿಲ್ಲ

ಬೆಂಗಳೂರು, ನ. 13 – ವಿದೇಶದಿಂದ ಆಗಮಿಸುವವರು ಗೃಹ ಕ್ವಾರಂಟೈನ್‌ನಲ್ಲಿರಬೇಕಿ ರುವ ನಿಯಮಗಳನ್ನು ಬದಲಿಸಿರುವ ರಾಜ್ಯ ಸರ್ಕಾರ ಆರ್.ಟಿ. - ಪಿ.ಸಿ.ಆರ್. ಟೆಸ್ಟ್‌ನಲ್ಲಿ ನೆಗೆಟಿವ್ ಬಂದರೆ ಕ್ವಾರಂಟೈನ್ ಅಗತ್ಯವಿಲ್ಲ ಎಂದು ಹೇಳಿದೆ. ಪರಿವರ್ತಿತ ಮಾರ್ಗಸೂಚಿಗಳನ್ನು ಪ್ರಕಟಿಸಿರುವ ಆರೋಗ್ಯ ಆಯುಕ್ತ ಪಂಕಜ್ ಕುಮಾರ್ ಪಾಂಡೆ, ಪ್ರಯಾಣದಿಂದ ಬಂದವರು 14 ದಿನಗಳ ಕಾಲ ಮನೆಯಲ್ಲೇ ಕ್ವಾರಂಟೈನ್‌ನಲ್ಲಿರಬೇಕು. ಇಲ್ಲವೇ ಆರ್.ಟಿ. - ಪಿ.ಸಿ.ಆರ್. ಪರೀಕ್ಷೆಗೆ ಒಳಗಾಗಿ ನೆಗೆಟಿವ್ ಬಂದಿರಬೇಕು ಎಂದು ತಿಳಿಸಿದ್ದಾರೆ.

ಪ್ರಯಾಣಕ್ಕೆ 72 ಗಂಟೆ ಮುಂಚೆ ಪರೀಕ್ಷೆ ಮಾಡಿಸಿಕೊಂಡು ನೆಗೆಟಿವ್ ಬಂದಿರಬೇಕು. ಆ ದಾಖಲೆಯನ್ನು ವೆಬ್ ತಾಣದಲ್ಲಿ ದಾಖಲಿಸಬೇಕು. ಭಾರತಕ್ಕೆ ಬಂದ ನಂತರ ವರದಿಯ ಪ್ರತಿಯನ್ನು ಸಲ್ಲಿಸಬೇಕು ಎಂದು ತಿಳಿಸಲಾಗಿದೆ.

## ಮಕ್ಕಳೇ ದೇವರು

ಮಕ್ಕಳೆಂದರೆ ದೈವ ಸಮಾನ
ಮಕ್ಕಳಿಂದಲೇ ತಣಿವುದು ಮನ
ಮಕ್ಕಳಿದ್ದರೆ ಮನೆಯು ಅಂದ
ಮಕ್ಕಳಿದ್ದರೆ ಬದುಕು ಚೆಂದ
ಮಕ್ಕಳಿಂದ ನಮಗಾಗುವುದಾನಂದ.

ಮಕ್ಕಳೆ ಮನೆಗೆ ಮಾಣಿಕ್ಯ
ಆ ಮಕ್ಕಳೆ ನಮಗೆ ಐಶ್ವರ್ಯ
ತಂದೆ ತಾಯಿಯರ ಬಂಧು ಬಾಂಧವರ
ಬದುಕಲಿ ತರುವರು ಚೈತನ್ಯ.

ಶಾಲೆಯ ನಡೆಸಲು ಮಕ್ಕಳು ಬೇಕು
ಮಕ್ಕಳಿಂದಲೇ ಗುರುಗಳ ಬದುಕು
ಗುರುಗಳೆ ಮಕ್ಕಳ ಬಾಳಿನ ಬೆಳಕು
ಸನ್ಮಾರ್ಗವನು ತೋರಿಸಬೇಕು.

ಮಕ್ಕಳಿಗಾಸ್ತಿಯ ಮಾಡಬೇಡಿ
ಮಕ್ಕಳನ್ನೆ ಆಸ್ತಿಯ ಮಾಡಿ
ಸಂಸ್ಕೃತಿ, ಸಭ್ಯತೆ, ಸಂಸ್ಕಾರ ಕಲಿಸಿ
ಸತ್ಪ್ರಜೆಯಾಗಿ ರೂಪಿಸಿರಿ.

ಮಕ್ಕಳ ಮೇಲೆ ಪ್ರಾಣವಿಟ್ಟವರು
ಅವರೇ ನಮ್ಮಯ ಚಾಚಾ ನೆಹರು
ಮಕ್ಕಳಿಗಾಗಿಯೆ ಜನ್ಮದಿನವನು
'ಮಕ್ಕಳ ದಿನಾಚರಣೆ'ಯೆಂದರು.

ಸ್ವತಂತ್ರ ದೇಶದ ಪ್ರಥಮ ಪ್ರಧಾನಿ
ಜವಾಹರಲಾಲ ನೆಹರೂರವರು
'ನವಭಾರತದ ಶಿಲ್ಪಿ'ಯೆಂದು
ವಿಶ್ವದಲ್ಲಿಯೇ ಖ್ಯಾತರಾದರು.

ಸಮಸ್ತ ಮಕ್ಕಳಿಗೂ ಮಕ್ಕಳ ದಿನಾಚರಣೆಯ
ಹಾರ್ದಿಕ ಶುಭಾಶಯಗಳು.

**- ಜಿ.ಎಸ್.ಗಾಯತ್ರಿ, ಶಿಕ್ಷಕಿ**
**ಬಾಪೂಜಿ ಶಾಲೆ, ಹರಿಹರ.**

## ಪಟಾಕಿ ಸಿಡಿತಕ್ಕೆ ಕೋರ್ಟ್ ಷರತ್ತಿನ ಅನುಮತಿ

ಬೆಂಗಳೂರು, ನ. 13 - ಪಟಾಕಿ ಸಿಡಿತಕ್ಕೆ ರಾಜ್ಯ ಹೈಕೋರ್ಟ್ ಷರತ್ತು ಬದ್ದ ಅನುಮತಿ ನೀಡಿದೆ. ಕ್ಯೂಆರ್‌ಕೋಡ್ ಮತ್ತು ಹಸಿರು ಲೋಗೋ ಹೊಂದಿರುವ ಹಸಿರು ಪಟಾಕಿ ಬಳಕೆಗಷ್ಟೇ ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕ ಅರ್ಜಿ ವಿಚಾರಣೆಯನ್ನು ಕೈಗೆತ್ತಿಕೊಂಡ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀನಿವಾಸ್ ಓಕಾ ಹಾಗೂ ನ್ಯಾಯಮೂರ್ತಿ ವಿಶ್ವ ದೀಪ್ ಶೆಟ್ಟಿ ಅವರನ್ನೊಳಗೊಂಡ ವಿಭಾಗೀಯ ಪೀಠ ಹಸಿರು ಲೋಗೋ ಪಟಾಕಿಯನ್ನಷ್ಟೇ ಮಾರಾಟ ಮಾಡಬೇಕು ಮತ್ತು ಸಿಡಿಸಬೇಕು ಎಂದು ತಿಳಿಸಿದೆ.

ಒಂದು ವೇಳೆ ಆದೇಶವನ್ನು ಉಲ್ಲಂಘಿಸಿದರೆ, ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ ಎಂದು ಎಚ್ಚರಿಸಿದೆ.

ಪಟಾಕಿಗಳನ್ನು ರಾತ್ರಿ 8 ರಿಂದ 10 ಗಂಟೆಯೊಳಗಷ್ಟೆ ಸಿಡಿಸಬೇಕು. ಪಟಾಕಿ ಹಸಿರು ಪಟಾಕಿ ಎಂಬುದನ್ನು ಪೊಲೀಸರು ಮತ್ತು ಸ್ಥಳೀಯ ಸಂಸ್ಥೆಗಳು ಪರಿಶೀಲಿಸಬೇಕೆಂದು ನ್ಯಾಯಾಲಯ ಆದೇಶಿಸಿದೆ.

ನ್ಯಾಯಾಲಯದ ಈ ಆದೇಶದ ಬೆನ್ನಲ್ಲೇ ರಾಜ್ಯ ಸರ್ಕಾರ ಕೂಡಾ ಇಂದು ಪರಿಷ್ಕೃತ ಆದೇಶ ಹೊರಡಿಸಿ, ಕೇಂದ್ರ ಪರಿಸರ ಇಲಾಖೆ ಮಾರ್ಗಸೂಚಿ ಅನ್ವಯವೇ ಹಸಿರು ಪಟಾಕಿ ಬಳಕೆಗಷ್ಟೇ ಅವಕಾಶ ಕಲ್ಪಿಸಿದೆ ಎಂದು ಹೈಕೋರ್ಟ್‌ಗೆ ತಿಳಿಸಿದ್ದಲ್ಲದೆ, ಸರ್ಕಾರಿ ಆದೇಶವನ್ನೂ ಹೊರಡಿಸಿದೆ.

ರಾಷ್ಟ್ರೀಯ ಪರಿಸರ ಹಾಗೂ ಇಂಜಿನಿಯರಿಂಗ್ ಪ್ರತಿಷ್ಠಾನ ಹಾಗೂ ಪೆಟ್ರೋಲಿಯಂ ಮತ್ತು ಸ್ಫೋಟಕ ಸಂಸ್ಥೆಗಳು ರೂಪಿಸಿರುವ ಹಸಿರು ಲೋಗೋ ಇರುವ ಪಟಾಕಿಗಳನ್ನು ಮಾತ್ರ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಪಟಾಕಿ ಬಾಕ್ಸ್‌ಗಳ ಮೇಲೆ ಕ್ಯೂಆರ್ ಕೋಡ್‌ಗಳನ್ನು ಬರೆಸಿರಬೇಕು. ಯಾವುದೇ ಕಾರಣಕ್ಕೂ ನಿಯಮ ಉಲ್ಲಂಘಿಸುವವರಿಗೆ ಸಹಾನುಭೂತಿ ತೋರತಕ್ಕದ್ದಲ್ಲ ಎಂದು ಆದೇಶದಲ್ಲಿ ತಿಳಿಸಿದೆ.

## ಜಿಲ್ಲೆಯಲ್ಲಿ 28 ಪಾಸಿಟಿವ್

ದಾವಣಗೆರೆ, ನ.13- ಜಿಲ್ಲೆಯಲ್ಲಿ 28 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದ್ದು, 39 ಜನರು ಗುಣಮುಖರಾಗಿರುವ ಬಗ್ಗೆ ವರದಿಯಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 20, ಹರಿಹರ 3, ಜಗಳೂರು 3, ಚನ್ನಗಿರಿ ತಾಲ್ಲೂಕಿನಲ್ಲಿ ಇಬ್ಬರಿಗೆ ಸೋಂಕು ದೃಢಪಟ್ಟಿದೆ. ಪ್ರಸ್ತುತ ಜಿಲ್ಲೆಯಲ್ಲಿ 322 ಸಕ್ರಿಯ ಪ್ರಕರಣಗಳಿವೆ.



**ಕಮರ್ಷಿಯಲ್ ಕಾಂಪ್ಲೆಕ್ಸ್ ಮಾರಾಟಕ್ಕೆ**
ಶಾಮನೂರು ರೋಡ್ : 40x60, 30x50.
ಬಿಐಇಟಿ ಕಾಲೇಜ್ ರೋಡ್ : 30x40, 40x60.
ಪಿ.ಬಿ. ರೋಡ್: 15x50, 30x70, 30x50, 190x500, 80x200, 190x200, 50x150 ಇನ್ನೂ ಅನೇಕ.
ಕಿರಣ್ ಬೂಸ್ನೂರ್ (ಏಜೆಂಟ್)
97315-63409, 98440-63409
(ಕಾಂಪ್ಲೆಕ್ಸ್ ಕಟ್ಟುವ ಸೈಟು ಮಾತ್ರ)

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ,
20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಜಮೀನು ಮಾರಾಟಕ್ಕೆ (45 ಲಕ್ಷಕ್ಕೆ)**
1 ಎಕರೆ, ಗ್ರಾಮ : ಚಿಕ್ಕಬೂದಿಹಾಳ್, ದಾವಣಗೆರೆ ತಾಲ್ಲೂಕು (ಮುಂದೆ ಲೇಔಟ್ ಆಗುವಂತಹ) ಸಿಮೆಂಟ್ ರೋಡಿಗೆ.
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
(ನಮ್ಮ ವ್ಯವಹಾರ ಕಮೀಷನ್ ಆಧಾರದ ಮೇಲೆ)

**ಸೈಟ್ ಮತ್ತು ಅಪಾರ್ಟ್‌ಮೆಂಟ್ ಬಾಡಿಗೆಗೆ, ಮಾರಾಟಕ್ಕೆ ಇದೆ**
ಎಸ್.ಎಸ್. ಲೇ ಔಟ್, ಮಹಾಲಕ್ಷ್ಮಿ ಲೇ ಔಟ್, ಸಿದ್ದವೀರಪ್ಪ ಬಡಾವಣೆ, KHB ಕಾಲೋನಿ, ಜೆ.ಹೆಚ್. ಪಟೇಲ್ ನಗರ, ಬನಶಂಕರಿ ಬಡಾವಣೆ 30×50, 30×48, 20×30, 50×50, 50×70
94481-85946

**ಅಪಾರ್ಟ್‌ಮೆಂಟ್‌ನಲ್ಲಿ**
ಮನೆಗಳು ಮಾರಾಟಕ್ಕಿವೆ. 2 ಬೆಡ್‌ರೂಂ ಮನೆಗಳು 100 ಅಡಿ ರೋಡಿಗೆ ಹತ್ತಿರ ಜಯನಗರದಲ್ಲಿ Rs 28 ಲಕ್ಷದಿಂದ 44 ಲಕ್ಷದವರೆಗೆ.
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**ಸೈಟುಗಳು ಮಾರಾಟಕ್ಕಿವೆ**
30x40, 30x40 west ಅಕ್ಕ-ಪಕ್ಕ ಎಸ್.ಎಸ್. ಲೇಔಟ್ 'ಎ' ಬ್ಲಾಕ್‌ನಲ್ಲಿ. 30x50 North, ಡಾಲರ್ಸ್ ಕಾಲೋನಿಯಲ್ಲಿ. 40x60 East, ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ .
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್.ಲೇಔಟ್ ಡುಪ್ಲೆಕ್ಸ್ 30x50 (ಉತ್ತರ), ಸರಸ್ವತಿ ನಗರದಲ್ಲಿ 20x30 (ಪಶ್ಚಿಮ), ಶಕ್ತಿ ನಗರದಲ್ಲಿ 30x40 (ಪೂರ್ವ), ನಿಜಲಿಂಗಪ್ಪ ಲೇಔಟ್‌ನಲ್ಲಿ 40x60 (ಉತ್ತರ), ಶಿವ ಪಾರ್ವತಿ ಲೇಔಟ್‌ನಲ್ಲಿ 30x40 (ಉತ್ತರ) ಮನೆಗಳು ಮಾರಾಟಕ್ಕಿವೆ.
98804 40602

**ಕರ್ನಾಟಕ ಗೃಹ ಮಂಡಳಿಯಲ್ಲಿ ಮನೆಗಳು & ಸೈಟುಗಳು ಮಾರಾಟಕ್ಕಿವೆ**
30x50 North ಮನೆ, 30x40 East ಮನೆ
50x80 South ಸೈಟ್ 80 ಅಡಿ ರೋಡಿಗಿದೆ. 50x80 East
30x50 East 30x40 South
ಐನಹಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**ಸೈಟುಗಳು ಮಾರಾಟಕ್ಕಿವೆ**
ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿ 40x60 (ಪೂರ್ವ), ಕುವೆಂಪು ನಗರ 65x100 (ಉತ್ತರ), ಎಸ್.ಎಸ್. ಲೇಔಟ್‌ನಲ್ಲಿ 30x50 (ಪಶ್ಚಿಮ), ಶಿವ ಪಾರ್ವತಿ ಲೇಔಟ್ ಕಮರ್ಷಿಯಲ್ 44x30 (ಪೂರ್ವ), ಜೆ.ಹೆಚ್. ಪಟೇಲ್ ನಗರದಲ್ಲಿ 40x60 (ಪಶ್ಚಿಮ) ಸೈಟ್‌ಗಳು ಮಾರಾಟಕ್ಕಿವೆ.
98804 40602

**ಮನೆ ಕೈ ತೋಟ ಹಾಗೂ ಜಮೀನಿಗೆ ಉಪಯೋಗಿಸಲು ಉತ್ತಮವಾದ ಕಾಂಪೋಸ್ಟ್ ಗೊಬ್ಬರ ದೊರೆಯುತ್ತದೆ.**
ಸಂಪರ್ಕಿಸಿ : ದಾವಣಗೆರೆ.
ಮೊ. 93411-71212

**ಸೈಟು ಮಾರಾಟಕ್ಕಿದೆ**
ಎಲ್ಲಾ ರೀತಿ ಅಭಿವೃದ್ಧಿ ಹೊಂದಿರುವ ಹಾಗೂ ಎದುರಿಗೆ ಪಾರ್ಕ್ ಇರುವ 30x50 ಅಳತೆಯ ಸೈಟು ರಂಗನಾಥ ಬಡಾವಣೆ 18ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ 577005 ಇಲ್ಲಿ ಮಾರಾಟಕ್ಕಿದೆ.
ಸಪ್ತಗಿರಿ ಸಿಮೆಂಟ್ ಗೋಡೌನ್ ಹತ್ತಿರ.
ಚದರಡಿಗೆ 3600 ರೂ. ಫಿಕ್ಸ್ ರೇಟ್
ಸಂಪರ್ಕಿಸಿ : 99167-64211
ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

**WANTED**
Experince Tally Operator full time Job. Attractive Salary.
70190 73080

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂಡ್ ಸೈಟ್‌ಗಳು ಮಾರಾಟಕ್ಕಿವೆ.
RS. 899 Per Sq ft
ದೀಪಾವಳಿ ವಿಶೇಷ ರಿಯಾಯಿತಿಯಲ್ಲಿ
93431 10009
98441 24217
86603 11021

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಹೊಸ ಮನೆ ಮಾರಾಟಕ್ಕಿದೆ**
30×50 ಪಶ್ಚಿಮ ದಿಕ್ಕಿನ ಸೈಟ್‌ನಲ್ಲಿ 13 ಚದುರದಲ್ಲಿ ಎಲ್ಲಾ ಆಧುನಿಕ ವ್ಯವಸ್ಥೆ ಇರುವ, ವಾಸ್ತು ಪ್ರಕಾರ ಕಟ್ಟಿರುವ 2 ಬೆಡ್‌ರೂಂ ವಾಸದ ಮನೆಗಳು ಬಾಲಾಜಿ ಲೇ ಔಟ್‌ನಲ್ಲಿ ಮಾರಾಟಕ್ಕಿವೆ. ವಿಚಾರಿಸಿ :
98448 82366

**ಜಾಗ ಮಾರಾಟಕ್ಕೆ ಇದೆ**
ದಾವಣಗೆರೆ ಜಗಳೂರು ರಸ್ತೆ, ಆಲೂರುಹಟ್ಟಿ ಹತ್ತಿರ ಇರುವ 1 ಎಕರೆ ಎನ್.ಎ. (ಕೈಗಾರಿಕೆ) ಜಾಗ ಮಾರಾಟಕ್ಕಿದೆ. 80 ತ್ಯಾಗದ ಮರ, 55x26 ಅಡಿ ಶೆಡ್ ಹಾಗೂ ಬೋರ್‌ವೆಲ್ ಸೌಕರ್ಯ ಮತ್ತು 24x7 ಕರೆಂಟ್ ಸೌಲಭ್ಯ ಇದೆ. ಆಸಕ್ತರು ಸಂಪರ್ಕಿಸಿ :
ಮೊ: 83102 42294

**ಮಳಿಗೆ (20'x40') ಬಾಡಿಗೆಗೆ ಇದೆ**
ಅಲಹಾಬಾದ್ ಬ್ಯಾಂಕ್ ಬಿಲ್ಡಿಂಗ್ ಹಿಂಭಾಗ, ಉತ್ತರ ದಿಕ್ಕಿನ ಮಳಿಗೆ Unity hospital ಎದುರು ಎ.ವಿ.ಕೆ. ಕಾಲೇಜು ರೋಡ್ ಪಿ.ಜೆ. ಬಡಾವಣೆಯಲ್ಲಿ ಬಾಡಿಗೆಗೆ ಇದೆ.
98443 06262

**SHOPS FOR RENT**
(with Wash Room Facility)
N.R. Road, Davanagere.
Contact
94483 69523

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ಮಾಳಗೊಂಡನಹಳ್ಳಿ, ಹರಪನಹಳ್ಳಿ ರೋಡ್‌ನಲ್ಲಿ 3ಎಕರೆ 4 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**ಮಹಿಳಾ P.G & ರೂಂಗಳು**
ಪೀಠೋಪಕರಣಗಳು ಮತ್ತು ಎಲ್ಲಾ ಸೌಕರ್ಯ ಹೊಂದಿರುವ ಮಹಿಳಾ ಪಿ.ಜಿ ಮತ್ತು ರೂಂಗಳು ಆಂಜನೇಯ ಬಡಾವಣೆಯ, ಆಂಜನೇಯ ದೇವಸ್ಥಾನದ ಹತ್ತಿರ ಇರುತ್ತದೆ.
ಸಂಪರ್ಕಿಸಿ :
99729 75085

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ
ವಧು-ವರರ ಕೇಂದ್ರ,
Vidya Nagara, Nutan College Road, Davangere.
Web.: www.bhoomikamatrimony.com
7760316576, 9008055813

**ವಾಸ್ತು ಮನೆ, ಶಾಪ್ ಬಾಡಿಗೆ**
ಶಾಪ್, ಗ್ರೌಂಡ್ ಫ್ಲೋರ್ ಪೂರ್ವ ಮುಂಬಾಗಿಲಿನ 2 & 3 ಬೆಡ್ ರೂಂ, ನೀರಿನ ಸೌಕರ್ಯ, ಪಾರ್ಕಿಂಗ್, Semi Furnished ಇದೆ.
# 408, ಸಮೃದ್ಧಿ ನಿಲಯ, ಪಿ.ಜೆ.ಬಡಾವಣೆ, ಮೋದಿ ಕಾಂಪೌಂಡ್ ಹತ್ತಿರ.
93807 97651
95386 41980

**WANTED**
ACCOUNTANT
B.Com / BBM / B.Sc/ M. Com/MBA/ Freshers/ Experince in MNC Company Davanagere
Contact
95380 03302, 99866 92789

**ಮನೆ ಬಾಡಿಗೆಗೆ**
ಎಂಸಿಸಿ ಎ ಬ್ಲಾಕ್‌ನ 3ನೇ ಮೇನ್ ರೋಡ್ ನಲ್ಲಿರುವ 3 ಬೆಡ್ ರೂಂ ನ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ
97430 98298
(ಬ್ರೋಕರ್‌ಗಳಿಗೆ ಅವಕಾಶವಿಲ್ಲ)

**1 BHK House For Rent**
3rd Main, 15th Cross, Vinobha Nagar, Amith Talkies Road,Davanagere
82174 88185

**Admission Started**
with sanitized Room
Veta Expert in Spoken English
93439 44659
99028 60360

**ನೇರ ಪರೀಕ್ಷೆಗಳು**
S.S.L.C, PUC, Technical & Non Technical Courses, Pharmacy & BHMS (Government & Private College)
ಸಂಪರ್ಕಿಸಿ: ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್ ರಾಮ್ & ಕೋ ಸರ್ಕಲ್, ದಾವಣಗೆರೆ.
87490 24789
87620 58369

**ಸೈಟುಗಳು ಮಾರಾಟಕ್ಕಿವೆ**
ಕಡೇಕೊಪ್ಪ ರೈಸ್ ಮಿಲ್ ಬಳಿ ಪಶ್ಚಿಮಾಭಿಮುಖ ವಾಗಿರುವ 30x40 ಅಳತೆಯ ಅಲಿನೇಷನ್ ಆಗಿರುವ 2 ನಿವೇಶನಗಳು ಹಾಗೂ ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ 30x70 ಅಳತೆಯ ನಿವೇಶನ ಮಾರಾಟಕ್ಕಿವೆ. ಸಂಪರ್ಕಿಸಿ :
96636-66870, 98443-04848

**Required**
Male showroom sales executive with accounts experience in Tally for a reputed furniture showroom in Davanagere showroom. Salary will be paid best according to experience. selected Candidates should join immediately. Contact
86607 91774 for interview.

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**Vijay Para Medical College**
Golden Public School Near, DCM Town ship Davanagere.
DMLT- (Lab Technician)
DHT- Health Inspector
DMIT - X-ray Technician
DOT- Operation Theatre
Contact: 77601 55550

**ಹೈಟೆಕ್ ವಯೋವೃದ್ಧರ ಆರೈಕ ಕೇಂದ್ರ**
ನಮ್ಮಲ್ಲಿ ಪಾರ್ಶ್ವವಾಯು, ವೃದ್ಧರು, ಕೈ ಕಾಲು ಸ್ವಾಧೀನ ಇಲ್ಲದವರು, ಮಾನಸಿಕರನ್ನು ನಮ್ಮಲಿ ಊಟ/ವಸತಿಯೊಂದಿಗೆ ನೋಡಿ ಕೊಳ್ಳಲಾಗುವುದು. ದಾವಣಗೆರೆ
89711 92936
76250 15036

**ಕನ್ಸಲ್ಟೆನ್ಸಿ ಸರ್ವೀಸಸ್**
M.R. VENTURES ಕನ್ಸಲ್ಟೆನ್ಸಿ ಸರ್ವೀಸಸ್‌ನಲ್ಲಿ ಮ್ಯಾನ್‌ಪವರ್ ಸಪ್ಲೈ ಇದ್ದು, ESI & PF ಸೌಲಭ್ಯವಿದೆ. ಜೊತೆಗೆ ಕೆಲಸಗಾರರನ್ನು ಸೇರಿಸಿಕೊಳ್ಳಲಾಗುವುದು. ಸಂಪರ್ಕಿಸಿ :
90369 21415, 99862 12164

**Simple vaastu**
ಸಿಂಪಲ್ ವಾಸ್ತು
98444 88838

**Wanted teachers**
No of post :1) BSc B.Ed(CBZ)- 01
2) B.Sc/B.Com/DEd- 02
NISARGA CONVENT & HIGH SCHOOL
" C" Block, SOG Badavane, Industrial Area, Davangere.
Contact us:
99862 26454, 98444 43374

**WALL PAPER**
@ offer Price
10 ₹ per Sq.Ft
(600 - 900 per Roll)
Contact :
INTERIOR HIVE
98860-04771
63635-61331

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ದೂರ ಶಿಕ್ಷಣ ಪರೀಕ್ಷೆಗಳು**
UGC, AICT & DEB Recognisde University
S.S.L.C. PUC, B.A, B.Com, B.Sc, B.C.A, M.A, M.Com, M.Sc, B.Lib, M.Lib, M.B.A, M.C.A. Diploma Course, B.Tech, Para Medical Course & All Courses
77609 55550, 96200 28627

**ಕೆಲಸಕ್ಕೆ ಬೇಕಾಗಿದ್ದಾರೆ**
S.R. Construction company ಗೆ ಕಂಪ್ಯೂಟರ್ ಕೆಲಸಕ್ಕೆ ಬೇಕಾಗಿದ್ದಾರೆ.
ಮಹಿಳೆಯರಿಗೆ ಮಾತ್ರ
Qualifiction : Degree
Ph. No: 90352 20050
ವಿಳಾಸ: ಲೋಕಿಕೆರೆ ರೋಡ್, ಇಂಡಸ್ಟ್ರಿಯಲ್ ಏರಿಯಾ, ಎಸ್.ಎ. ರವೀಂದ್ರನಾಥ್ ನಗರ, ದಾವಣಗೆರೆ-577005


# ಧನಾತ್ಮಕ ಬೆಳಕಿನ ಹಬ್ಬ ದೀಪಾವಳಿ





ಸರಿ ಸುಮಾರು 10 ತಿಂಗಳುಗಳೇ ಕಳೆದವು. ಈ ಕೊರೊನಾ ಮಹಾಮಾರಿ ಜಗತ್ತನ್ನೆಲ್ಲ ಆವರಿಸಿದೆ. ಶರವೇಗದಲ್ಲಿ ಸಾಗುತ್ತಿದ್ದ ಜನಜೀವನ, ನಾಗಾಲೋಟದಲ್ಲಿ ಓಡುತ್ತಿದ್ದ ತಾಂತ್ರಿಕತೆ ಇದ್ದಕ್ಕಿದಂತೆ ಸ್ತಬ್ದವಾಗಿ ವಿಶ್ವಕ್ಕೆ ಶೂನ್ಯತೆಯ ಖಿನ್ನತೆ ಕಾಡುತ್ತಿರುವಂತೆ ಭಾಸವಾಗುತ್ತಿದೆ. ಆದರೂ ಬುದ್ದಿ ಜೀವಿ, ಸಂಘ ಜೀವಿ ಅಂದುಕೊಂಡ ಮಾನವ, "ಮತ್ತೆ ಮರಳಿ ಯತ್ನವ ಮಾಡು" ಎಂಬ ಗುರಿಯನ್ನು ಮುಂದಿಟ್ಟುಕೊಂಡು, ಈ ಮಹಾಮಾರಿಯಿಂದ ಕಳೆದು ಹೋದ ಜೀವನದ ಚೈತನ್ಯವನ್ನು ಪಡೆಯಲು ಮತ್ತೆ ಶತಾಯ ಗತಾಯ ಪ್ರಯತ್ನಿಸುತ್ತಿದ್ದಾನೆ ಎಂದರೆ ತಪ್ಪಾಗಲಾರದು.

ಅಂತೆಯೇ, ವಿವಿಧತೆಯಲ್ಲಿ ಏಕತೆಯನ್ನು ಕಂಡಿರುವ ಭಾರತೀಯರು ನಾವು. ನಮ್ಮದೇ ವಿಶಿಷ್ಟ ಉಡುಗೆ-ತೊಡುಗೆ ವಿವಿಧ ಸಂಪ್ರದಾಯಗಳು, ಆಯಾ ಕಾಲದ ಹವಾಮಾನಕ್ಕೆ ತಕ್ಕಂತಿರುವ ಹಬ್ಬ, ಹರಿದಿನಗಳ ಆಚರಣೆ, ಭಕ್ಷ್ಯ ಭೋಜನಗಳ ಸೇವನೆ, ಹಬ್ಬಗಳ ಹಿನ್ನೆಲೆಗೆ ತಕ್ಕಂತೆ ಇರುವ, ಇಷ್ಟದೇವರುಗಳ ಪ್ರಾರ್ಥನೆ, ಇವೇ ಮೊದಲಾದ ವೈಶಿಷ್ಟ್ಯತೆಗಳು ಭಾರತವನ್ನು ವಿಶ್ವದಲ್ಲೇ ಇತರೆ ದೇಶಗಳಿಗಿಂತಲೂ, ಇತರೆ ಜನರುಗಳಿಗಿಂತಲೂ ಒಂದು ಭಿನ್ನ ಸಾಲಲ್ಲಿ ಕಂಡಿರುವುದು ಶ್ಲಾಘನೀಯ.

ಭಾರತೀಯರಾದ ನಾವು, ಈ ಕೊರೊನಾ ಮಹಾಮಾರಿಯಿಂದಾಗಿ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಹೀಗೆ ಹತ್ತು, ಹಲವು ಕ್ಷೇತ್ರಗಳಲ್ಲಿ ವಿಶ್ವದ ಇತರೆ ದೇಶಗಳಷ್ಟೇ ತೊಂದರೆ ಅನುಭವಿಸುತ್ತಿರುವುದು ಪ್ರಸ್ತುತ. ಆದರೆ, ಸಾಂಸ್ಕೃತಿಕ, ಅಧ್ಯಾತ್ಮಿಕ ಕ್ಷೇತ್ರಗಳಲ್ಲಿ ಸಾಂಘಿಕ ಒಗ್ಗಟ್ಟಿನ ನಿಲುವಿಗೆ, ಹೆಚ್ಚಿನ ಒತ್ತು ನೀಡುವ ನಮ್ಮ ಸಾಂಪ್ರದಾಯಿಕ ಹಬ್ಬ ಹರಿದಿನಗಳು ತಮ್ಮ ಪ್ರಾಶಸ್ತ್ಯ ಕಳೆದು, ಜನರ ಚೈತನ್ಯವನ್ನು ಕಡಿಮೆ ಮಾಡಿವೆ ಎನ್ನುವುದರಲ್ಲಿ ನಿಸ್ಸಂಶಯ.

ಈ ಶಾರ್ವರಿ ನಾಮ ಸಂವತ್ಸರದಲ್ಲಿ ಪ್ರಾರಂಭದ ಮೊದಲ ಹಬ್ಬ, ಯುಗಾದಿ ಹಬ್ಬವೇ ಸಂಪೂರ್ಣ ಲಾಕ್‌ಡೌನ್, ಸೀಲ್‌ಡೌನ್ ಎನ್ನುವ ಪದಗಳಿಂದ ಜನರ ಮನಸ್ಸನ್ನು ಮಂಕಾಗಿಸಿತು.

ಬೇವು, ಬೆಲ್ಲ ತಿಂದು, ಬಿದಿಗೆ ಚಂದ್ರದರ್ಶನದಿಂದ ನವ ಚೇತನದಿಂದ ಪ್ರಾರಂಭವಾಗಬೇಕಾಗಿದ್ದ ಭಾರತೀಯರ ಹೊಸ ವರುಷ ತನ್ನ ನವೀನತೆಯನ್ನೇ ಕಳೆದುಕೊಂಡು ಕೊರೊನಾ ಮಹಾಮಾರಿಯ ಅಟ್ಟಹಾಸಕ್ಕೆ ನಲುಗಿತು.

ವ್ಯಕ್ತಿತ್ವದ ಭಾವನೆಗಳನ್ನು ಅಭಿವ್ಯಕ್ತ ಪಡಿಸಲು ಮೂಲವಾಗಿರುವ ಮುಖವನ್ನೇ ಮುಚ್ಚಿಕೊಂಡು ಓಡಾಡುವುದು ಮುಕ್ತ ಮನಸ್ಸಿನ, ನೇರ ನುಡಿಯವರಿಗೆ ಸಹ್ಯವಾಗಲಿಲ್ಲ. ಆದರೆ ಜೀವ ಭಯ, ಕಾಯಿಲೆ ಭಯ ಅಲ್ಲದೇ ಕಾನೂನು ಕಟ್ಟಳೆ ಭಯದಿಂದ ನಾವೆಲ್ಲರೂ ಮುಖ ಕವಚ, ಕೈತೊಳೆಯುವಿಕೆ ಹಾಗೂ ಸಾಮಾಜಿಕ ಅಂತರದಿಂದಲೇ ತದನಂತರದ ಎಲ್ಲ ಹಬ್ಬಗಳನ್ನು ಸಾಂಕೇತಿಕವಾಗಿ ಆಚರಿಸಿದೆವು ಎನ್ನುವುದಕ್ಕೆ ಸಾಕ್ಷಿ ಬೇಕಾಗಿಲ್ಲ.

ಈಗ ದೀಪಾವಳಿ ಹಬ್ಬದ ಸರದಿ. ಕತ್ತಲನ್ನು ಕಳೆದು ಬೆಳಕಿನ ಶಕ್ತಿಯಿಂದ ತನ್ನ ಸುತ್ತಮುತ್ತಲಿನ ವಾತಾವರಣವನ್ನು ಪ್ರಜ್ವಲವಾಗಿಸುವುದೇ ದೀಪ. ಈ ದೀಪ ಪಸರಿಸುವ ಉಜ್ವಲ ಪ್ರಕಾಶ ಎಂತಹ ಅಂಧಕಾರವನ್ನೂ ನೀಗಿಸಬಲ್ಲದು. ಇಂತಹ ಸಹಸ್ರ ದೀಪಗಳ ಸಾಲು ಸಾಲೇ ಈ ದೀಪಾವಳಿಯ ವೈಭವ.

ಈ ಸಾಲಿನ ದೀಪಾವಳಿ ಹಬ್ಬವನ್ನೂ, ಕೊರೊನಾ ಕಾಯಿಲೆಯ ಭಯ, ಆತಂಕದಲ್ಲಿ ಆಚರಿಸುವಂತಾಗಿದೆ. ನಮಗೆಲ್ಲರಿಗೂ ತಿಳಿದಿರುವಂತೆ ಈ ದೀಪಾವಳಿ ಹಬ್ಬ ಅತ್ಯಂತ ಧನಾತ್ಮಕತೆಯ ಪ್ರತೀಕ. ಈ ಹಬ್ಬದಲ್ಲಿ ಹಳೆಯ ಸರಕು, ಸರಂಜಾಮುಗಳನ್ನು ವರ್ಜಿಸಿ, ನವೀನ ವಸ್ತುಗಳನ್ನು ಖರೀದಿಸುತ್ತಿದ್ದೆವು. ಮನೆಯನ್ನು ಸ್ವಚ್ಛಗೊಳಿಸಿ ಹೊಸ ಸುಣ್ಣ ಬಣ್ಣ ಬಳಿಯುತ್ತಿದ್ದೆವು.

ಹೊಸ ಬಟ್ಟೆ, ಚಿನ್ನ, ಬೆಳ್ಳಿಯ ಖರೀದಿ ಮಾಡಿ ವಿಜೃಂಭಣೆಯಿಂದ ಶ್ರೀಮಂತ, ಬಡವರೆಂಬ ಭೇದವಿಲ್ಲದೆ ಆಚರಿಸುತ್ತಿದ್ದೆವು. ಸಿಹಿ ತಿಂಡಿ, ಉಡುಗೊರೆಗಳ ವಿನಿಮಯವಾಗುತ್ತಿತ್ತು. ಪಟಾಕಿಗಳ ಶಬ್ದವೇ ಈ ಹಬ್ಬದ ವಿಶೇಷವಾಗಿತ್ತು. ಆದರೆ, ಈ ಬಾರಿ, ಕೊರೊನಾ ಮಹಾಮಾರಿಯಿಂದ ಆರ್ಥಿಕ ಸಂಕಷ್ಟದಲ್ಲಿರುವ ನಾವೆಲ್ಲರೂ ಆತ್ಮವಿಶ್ವಾಸದಿಂದ, ಆತ್ಮಸ್ಥೈರ್ಯದಿಂದ, ಜೀವನವನ್ನು ಎದುರಿಸಬೇಕಾಗಿದೆ. ಈ ಬಾರಿಯ ದೀಪಾವಳಿಯಲ್ಲಿ ಹಚ್ಚಲ್ಪಡುವ ಪ್ರತಿಯೊಂದು ದೀಪವೂ ನಮ್ಮಲ್ಲಿನ ಅಜ್ಞಾನ, ಅಹಂಕಾರ, ಅಧಿಕಾರದ ದರ್ಪ, ಅಸೂಯೆ, ಅಧರ್ಮ ಅಸತ್ಯತೆಗಳೆಂಬ ಋಣಾತ್ಮಕ ಗುಣಗಳನ್ನು ಅಳಿಸಿ, ಸಾಮರಸ್ಯ, ಪ್ರೀತಿ-ವಾತ್ಸಲ್ಯ-ಕರುಣೆ-ಅನುಕಂಪ, ಸತ್ಯ ಧರ್ಮಗಳೆಂಬ ಧನಾತ್ಮಕತೆಯನ್ನು ಚೆಲ್ಲುವ ಬೆಳಕಾಗಬೇಕು.

ನಾನೇ ನನ್ನಿಂದಲೇ ಎಂದು ಬೀಗುತ್ತಿದ್ದ ಇಡೀ ವಿಶ್ವ ಸಮುದಾಯಕ್ಕೆ ಅದ್ಯಾವುದೋ ಒಂದು ಅದೃಶ್ಯ ಶಕ್ತಿ ಕೋವಿಡ್-19 ಎಂಬ ಹೆಸರಿನಲ್ಲಿ ಮರಣ ಮೃದಂಗದ ಜಾಗತಿಕ ಘಂಟೆಯನ್ನೇ ಬಾರಿಸಿದೆ. ಹಣ, ಅಂತಸ್ತು, ಜಾತಿ, ಲಿಂಗ, ಭೇಧವಿಲ್ಲದೆ ನಮ್ಮನ್ನು ಆವರಿಸಿರುವ ಈ ಭಯದಿಂದ, ಎಚ್ಚೆತ್ತುಕೊಂಡು ಚಿತ್ತ ಶುದ್ದಿಯಿಂದ, ಆತ್ಮಸ್ಥೈರ್ಯದಿಂದ ಬಾಳುವೆ ಮಾಡಬೇಕಾಗಿದೆ.ಕಾಮ, ಕ್ರೋಧ, ಲೋಭ, ಮೋಹ, ಮದ- ಮತ್ಸರಗಳೆಂಬ, ಪಂಚೇಂದ್ರಿಯಗಳ ಆರು ವೈರಿಗಳನ್ನು ಜಯಿಸಬೇಕಿದೆ.

ಕಳಬೇಡ, ಕೊಲಬೇಡ, ಮಾತೇ ಮುತ್ತು, ನುಡಿದಂತೆ ನಡೆ ಎಂಬ ಶರಣರ ವಚನಗಳನ್ನು ಮತ್ತೆ ನೆನಪಿಸಿಕೊಂಡು ಸನ್ಮಾರ್ಗದಲ್ಲಿ ನಡೆಯಬೇಕಿದೆ. ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ಎಂಬ ವೈರಾಗ್ಯ ನಿಧಿ ಅಕ್ಕಮ್ಮನ ಮಾತು ನೆನೆದು ನೀತಿಯುತ ಜೀವನ ನಡೆಸಿ ಭಗವಂತನ ಸಾಕಾರವಾಗಬೇಕಾಗಿದೆ.

ಅನಿಶ್ಚಿತತೆ, ಅಸಹಾಯಕತೆಯ ನಿಟ್ಟುಸಿರು ತುಂಬಿರುವ ಈ ಜೀವನಕ್ಕೆ ಮತ್ತೆ ಚೈತನ್ಯದ ಮೆರಗು ನೀಡಬೇಕಿದೆ.

ಆಧುನಿಕ ತಾಂತ್ರಿಕತೆಯ ಶರವೇಗದಿಂದ ಕಂಗಾಲಾಗಿದ್ದ ಪ್ರಕೃತಿ ಮಾತೆ ಮತ್ತು ಇತರೆ ಜೀವ ಜಂತುಗಳು ಮತ್ತೆ ಚೇತರಿಸಿಕೊಂಡು ''ಇರುವುದೊಂದೇ ಭೂಮಿ ನಮಗೂ ಇರಲು ಅವಕಾಶ ನೀಡು ಮಾನವ'' ಎಂದು ಸಂದೇಶ ನೀಡಿದಂತಿದೆ.

ನಾಲ್ಕು ದಿನದ ಈ ಬಾಳಿನಲ್ಲಿ, ''ಹುಟ್ಟು ಆಕಸ್ಮಿಕ, ಸಾವು ಖಚಿತ" ಎಂದು ತಿಳಿದಿರುವ ನಾವು ಆದರ್ಶದಿಂದ ನೀತಿವಂತರಾಗಿ ಬಾಳಿ, ಮಾನವ ಜೀವನದ ಸಾರ್ಥಕತೆ ಮೆರೆಯಬೇಕಾಗಿದೆ.

ಒಟ್ಟಿನಲ್ಲಿ ಹೇಳುವುದಾದರೆ ಈ ಬಾರಿಯ ಹಬ್ಬವನ್ನು ತೈಲ ಅಭ್ಯಂಜನದಿಂದ ಶರೀರದ ಕಲ್ಮಶ ಮಾತ್ರವಲ್ಲ ಮನಸ್ಸಿನ ಕಲ್ಮಶವನ್ನೂ ತೊಳೆಯಬೇಕಾಗಿದೆ. ದ್ವಾಪರ ಯುಗದಲ್ಲಿ ಶ್ರೀಕೃಷ್ಣನು ನರಕ ಚತುರ್ದಶಿ ದಿನದಂದು ನರಕಾಸುರನ ಸಂಹರಿಸಿ, ಗೋಪಿಯರನ್ನು ಮುಕ್ತಗೊಳಿಸಿದಂತೆ, ಆ ಭಗವಂತನಕೃಪೆಯಿಂದಲಸಿಕೆಗಳುಶೀಘ್ರವೇ ಲಭಿಸಿ, ಕೊರೊನಾ ಮಹಾಮಾರಿಯ ಎದುರು ನೂರು ಶೇಕಡ ಪರಿಣಾಮಕಾರಿಯಾಗ ಬೇಕಾಗಿದೆ. ಅಮಾವಾಸ್ಯೆಯಂದು ಮಾಡುವ ಲಕ್ಷ್ಮಿ ಪೂಜೆಯಿಂದ ಆಕೆಯ ಕೃಪೆಯಿಂದ ಜನರ ಆರ್ಥಿಕ ಸಂಕಷ್ಟ ನೀಗಬೇಕಿದೆ. ಹಸಿರು ಪಟಾಕಿಗಳು ವಾಯುಮಾಲಿನ್ಯ, ಶಬ್ದ ಮಾಲಿನ್ಯ ರಹಿತವಾದರೂ, ಸಾಂಕೇತಿಕವಾಗಿ ಇವು ರಾಕ್ಷಸ ಮನೋವೃತ್ತಿ ಇರುವ ದುಷ್ಟಶಕ್ತಿಗಳ ವಿರುದ್ಧ ರಣಕಹಳೆ ಊದಿ, ವಿಜಯದ ಪತಾಕೆ ಹಾರಿಸುವಂತಾಗಬೇಕಾಗಿದೆ. ಗೋ ಪೂಜೆಯಿಂದ, ಕೇಳಿದ್ದನ್ನು ನೀಡುವ ಕಾಮಧೇನು ಕೃಪೆ ಮುಂದಿನ ದಿನಗಳಲ್ಲಿ ನಮಗೆ ಒಲಿದು ಬರಬೇಕಿದೆ. ಒಟ್ಟಿನಲ್ಲಿ, ಈ ದೇಶ ಸುಭಿಕ್ಷೆಯಿಂದ ರಾಮರಾಜ್ಯವಾಗಲಿ ಎಂದು ಪ್ರಾರ್ಥಿಸುತ್ತ, ಆರೋಗ್ಯ, ಧನ ಸಂಪತ್ತನ್ನು ಹೆಚ್ಚಿಸಿ, ಶತ್ರು ಬುದ್ದಿ ವಿನಾಶಕ್ಕಾಗಿ, ದೀಪಜ್ಯೋತಿಯನ್ನು ಎಲ್ಲರೂ ಒಂದಾಗಿ ದೀಪಾವಳಿಯಂದು ಬೆಳಗೋಣ. ಕೊನೆಯ ಉಸಿರಿರುವವರೆಗೂ ಧನಾತ್ಮಕ ಚಿಂತನೆಯನ್ನು ನಮ್ಮದಾಗಿಸಿಕೊಳ್ಳೋಣ. ನಾವೆಲ್ಲರೂ ಒಂದಾಗಿ ಮುಖ ಕವಚವನ್ನು ಕಡ್ಡಾಯವಾಗಿ ಧರಿಸಿ, ನೈರ್ಮಲ್ಯತೆಯನ್ನು ಕಾಪಾಡಿ, ಸಾಮಾಜಿಕ ಅಂತರವನ್ನು ಕಾಯ್ದು ''ಕೊರೊನಾ ವೈರಾಣುವಿನ ಸಂಪೂರ್ಣ ವಿನಾಶಕ್ಕೆ ನಾವೆಲ್ಲರೂ ಕಾರಣೀಭೂತರಾಗುತ್ತೇವೆ, ಇದು ನಮ್ಮೆಲ್ಲರ ಮಾನವೀಯತೆಯ ಪ್ರತೀಕ ಹಾಗೂ ಪ್ರಬುದ್ಧ ನಾಗರಿಕರಾದ ನಮ್ಮೆಲ್ಲರ ಜವಾಬ್ದಾರಿ'' ಎಂದು ಈ ಮೂಲಕ ಪ್ರಮಾಣ ವಚನ ಸ್ವೀಕರಿಸೋಣ.

ನಮ್ಮ ಹೆಮ್ಮೆಯ ಭಾರತವನ್ನು ವಿಶ್ವಗುರುವಾಗಿಸುವಲ್ಲಿ ಇಂದೇ ಕಂಕಣ ಬದ್ದರಾಗೋಣ

ಜಯ ಕರ್ನಾಟಕ ಜಯ ಭಾರತ
ಸರ್ವೇ ಜನಃ ಸುಖಿನೋಭವಂತು.

**- ಡಾ. ಆರತಿ ಸುಂದರೇಶ್**, ದಾವಣಗೆರೆ.

## ಜ್ಞಾನ ಜ್ಯೋತಿ

ಮನ ಮನದ ದೀಪ
ಮನೆ ಮನೆಯ ದೀಪ
ಎಂದೂ ಆರದ ದೀಪ

ದೀಪದಿಂದ ದೀಪವ
ಹಚ್ಚಬೇಕು ಮಾನವ
ಆಗಬೇಕು ದಾನವ

ಕೊಡು ದೇವ ಸಮ್ಮತಿ
ನೀಡು ಜ್ಞಾನ ಜ್ಯೋತಿ
ಬೇಡುವೆನು ಸದ್ಗತಿ

ದೀನ ಬಂಧು
ಪಾವನನಾಮ
ವಾಮನನಾಗಿ ಬ
ಲಿಂದ್ರನನ್ನು ತುಳಿದು
ಆಚರಿಸುವ ದೀಪಾವಳಿ
ಸಡಗರ ಸಂಭ್ರಮದಿಂದ
ನಾಡಿನ ಸಮಸ್ತ ಜನತೆಗೆ
ಕೊರೊನಾ ಕೃಪೆಯಿಂದ
ಮತಾಪು ಪಟಾಕಿ ಸಿಡಿಸದೆ
ವಾಯು ಮಾಲಿನ್ಯ
ಮಾಡದೆ
ಆರೋಗ್ಯವನ್ನು
ಕಾಪಾಡಿಕೊಂಡು
ಹಬ್ಬ ಆಚರಿಸುವಂತೆ
ಬೇಡುವೆ
ದೀಪಾವಳಿ ಹಬ್ಬದ
ಶುಭಾಶಯ ಕೋರುವೆ

**-ಹೆಚ್.ಕೆ.ಸತ್ಯಭಾಮ ಮಂಜುನಾಥ್,**
ದಾವಣಗೆರೆ

## ಗ್ರಾ.ಪಂ. ಚುನಾವಣೆಗೆ ಅಸ್ತು

**(1ನೇ ಪುಟದಿಂದ)** ಕೊರೊನಾ ಹಿನ್ನೆಲೆಯಲ್ಲಿ ಚುನಾವಣೆ ನಡೆಸಲು ಸಾಧ್ಯವಿಲ್ಲ ಎಂದು ಮತ್ತು ಚುನಾವಣೆಯನ್ನು ಮುಂದೂಡುವಂತೆ ರಾಜ್ಯ ಸರ್ಕಾರ ಆಯೋಗಕ್ಕೆ ಮತ್ತು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿತ್ತು. ಸರ್ಕಾರದ ಮನವಿಗೆ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಕೂಡಾ ಬೆಂಬಲ ನೀಡಿದ್ದವು. ಸರ್ಕಾರದ ಮನವಿಗೆ ಸ್ಪಂದಿಸಿದ್ದ ಆಯೋಗ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು, ಚುನಾವಣೆಯನ್ನು ಆಯೋಗ ಮುಂದೂಡಿತ್ತು.

ಇದನ್ನು ಪ್ರಶ್ನಿಸಿ, ಅರ್ಜಿದಾರರು ನ್ಯಾಯಾಲಯದ ಮೊರೆ ಹೋಗಿದ್ದರು. ವಾದ-ವಿವಾದ ಆಲಿಸಿದ ಮುಖ್ಯ ನ್ಯಾಯಮೂರ್ತಿ ಅಭಯ್ ಶ್ರೀವಾಸ್ ಓಕಾ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್. ಕೆಣಗಿ ಅವರನ್ನೊಳಗೊಂಡ ವಿಭಾಗೀಯ ಪೀಠ ಮಹತ್ವದ ಆದೇಶ ನೀಡಿದೆ.

## ವೈದ್ಯಕೀಯ ಕಾಲೇಜುಗಳ ಆರಂಭ

**(1ನೇ ಪುಟದಿಂದ)** ವೈದ್ಯಕೀಯ ಕಾಲೇಜುಗಳ ಆರಂಭದ ಬಗ್ಗೆ ಮಾಹಿತಿ ನೀಡಿರುವ ಅವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಈ ಎಲ್ಲಾ ಶಿಕ್ಷಣ ಸಂಸ್ಥೆಗಳು ಆರಂಭಗೊಳ್ಳಲಿವೆ ಎಂದರು.

ಪದವಿ ಕಾಲೇಜುಗಳು ನವೆಂಬರ್ 17 ರಿಂದ ಆರಂಭವಾಗಲಿವೆ. ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳು ಹೊರ ರಾಜ್ಯದಲ್ಲಿದ್ದಾರೆ. ಕಾಲೇಜಿಗೆ ಬರಲು ಅವರಿಗೆ ಕಾಲಾವಕಾಶ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಡಿಸೆಂಬರ್ 1 ರಿಂದ ತರಗತಿಗಳನ್ನು ಆರಂಭಿಸಲಾಗುವುದು ಎಂದವರು ಹೇಳಿದ್ದಾರೆ.

ಈ ಮಧ್ಯೆ ಸಮಾಜ ಕಲ್ಯಾಣ ಸಚಿವ ಶ್ರೀರಾಮುಲು ಪ್ರತ್ಯೇಕವಾಗಿ ಟ್ವೀಟ್ ಮಾಡಿ, ಶಾಲಾ - ಕಾಲೇಜುಗಳು ಮತ್ತು ಇನ್ನಿತರೆ ಶಿಕ್ಷಣ ತರಗತಿಗಳು ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ವಸತಿ ನಿಲಯಗಳನ್ನು ಪ್ರಾರಂಭಿಸುವುದಾಗಿ ತಿಳಿಸಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ವಸತಿ ನಿಲಯಗಳ ಮೇಲ್ವಿಚಾರಕರು ಎಲ್ಲಾ ಬಿಗಿ ಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಿದ್ದಾರೆ.

## ಪತ್ರಕರ್ತ ರವಿ ಬೆಳಗೆರೆ ಇನ್ನಿಲ್ಲ

**(1ನೇ ಪುಟದಿಂದ)** ವಾಗಿದ್ದು, ಅಲ್ಲಿನ ಸಿಬ್ಬಂದಿ ಕೂಡಲೇ ಅಪೋಲೋ ಆಸ್ಪತ್ರೆಗೆ ಅವರನ್ನು ದಾಖಲಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಅವರ ಅಂತ್ಯ ಸಂಸ್ಕಾರವನ್ನು ಬೆಂಗಳೂರಿನ ಬನಶಂಕರಿ ಚಿತಾಗಾರದಲ್ಲಿ ಬ್ರಾಹ್ಮಣ ಪದ್ದತಿಯಂತೆ ನೆರವೇರಿಸಲಾಗಿದೆ. ಪುತ್ರರಾದ ಕರ್ಣ ಹಾಗೂ ಹಿಮವಂತ ರವಿ ಅವರ ಚಿತೆಗೆ ಅಗ್ನಿ ಸ್ಪರ್ಷ ಮಾಡಿದ್ದಾರೆ. ಶಿವರಾಂ ಅಂತ್ಯ ಸಂಸ್ಕಾರದ ವಿಧಿ ವಿಧಾನಗಳ ನೇತೃತ್ವ ವಹಿಸಿದ್ದರು.

ಇದಕ್ಕೂ ಮುನ್ನ ಅವರ ಪಾರ್ಥಿವ ಶರೀರವನ್ನು ಕನಕಪುರ ರಸ್ತೆಯ ಕರಿಷ್ಮಾ ಹಿಲ್ಸ್ ಮನೆಗೆ ತಂದು ಬಳಿಕ ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಪದ್ಮನಾಭ ನಗರದಲ್ಲಿರುವ ಪ್ರಾರ್ಥನಾ ಸ್ಕೂಲ್ ಮೈದಾನದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು.


ರವಿ ಬೆಳಗೆರೆ ಪತ್ರಕರ್ತ, ನಿರೂಪಕ, ನಟ, ಲೇಖಕ, ಕಾದಂಬರಿಕಾರ, ಚಿತ್ರಕಥೆ ಬರಹಗಾರ, 'ಕ್ರೈಂ ಡೈರಿ' ಕಾರ್ಯಕ್ರಮ ನಿರೂಪಕರಾಗಿಯೂ ಕಾರ್ಯ ನಿರ್ವಹಿಸಿದ್ದರು. ಹಾಯ್ ಬೆಂಗಳೂರು ಹಾಗೂ ಓ ಮನಸೇ ಪತ್ರಿಕೆಯ ಸಂಪಾದಕರಾಗಿದ್ದರು. ಅಲ್ಲದೆ 'ಪ್ರಾರ್ಥನಾ ಶಾಲೆ'ಯ ಸಂಸ್ಥಾಪಕ ಕೂಡ ಆಗಿದ್ದಾರೆ. ಉಪನ್ಯಾಸಕರಾಗಿ ವೃತ್ತಿ ಜೀವನ ಆರಂಭಿಸಿರುವ ರವಿ ಬೆಳಗೆರೆ, ತಮ್ಮ ಬರಹದಿಂದಲೇ ಅಸಂಖ್ಯಾತ ಓದುಗ ಬಳಗವನ್ನು ಸೃಷ್ಟಿಸಿಕೊಂಡಿದ್ದ ಮಾಂತ್ರಿಕರಾಗಿದ್ದಾರೆ.

ಹಾಯ್ ಬೆಂಗಳೂರು ಪತ್ರಿಕೆ ಸ್ಥಾಪನೆ ಮಾಡಿ ಕರ್ನಾಟಕದ ಮೂಲೆಮೂಲೆಯ ಜನರಿಗೂ ಚಿರಪರಿಚಿತರಾಗಿದ್ದರು. ಓ ಮನಸೇ ಮೂಲಕ ಜನಪ್ರಿಯವಾಗಿದ್ದ ಇವರು, ಕಾದಂಬರಿ,ಅನುವಾದ, ಜೀವನ ಕಥನ ಸೇರಿದಂತೆ ಇನ್ನಿತರೆ ಬರಹಗಳನ್ನು ಬರೆದಿದ್ದ ಬೆಳಗೆರೆಯವರ ಪುಸ್ತಕಗಳು ಅಚ್ಚರಿಯ ರೀತಿಯಲ್ಲಿ ಮಾರಾಟವಾಗುತ್ತಿದ್ದವು.

ರವಿ ಬೆಳಗೆರೆ ಬಳ್ಳಾರಿಯ ಸತ್ಯನಾರಾಯಣಪೇಟೆಯಲ್ಲಿ 1958 ಮಾರ್ಚ್ 15ರಂದು ಜನಿಸಿದರು. ಬಳ್ಳಾರಿಯಲ್ಲೇ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದ ಬಳಿಕ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಕರ್ನಾಟಕ ವಿವಿಯಲ್ಲಿ ಇತಿಹಾಸ, ಪ್ರಾಚ್ಯಶಾಸ್ತ್ರದಲ್ಲಿ ಎಂ.ಎ ಮಾಡಿ, ಇತಿಹಾಸ ಉಪನ್ಯಾಸಕರಾಗಿ ರವಿ ಬೆಳಗೆರೆ ವೃತ್ತಿ ಜೀವನ ಪ್ರಾರಂಭಿಸಿದರು. ಓದಿದ ವಿಶ್ವವಿದ್ಯಾಲಯ ಧಾರವಾಡ ವಿವಿಯಲ್ಲೇ ಉಪನ್ಯಾಸಕರಾಗಿ ವೃತ್ತಿ ಆರಂಭಿಸಿದರು. ಕ್ರಮೇಣ ಉಪನ್ಯಾಸಕ ವೃತ್ತಿ ತೊರೆದು ಬರಹದತ್ತ ವಾಲಿದರು.

ಉಪನ್ಯಾಸಕ ವೃತ್ತಿಗೆ ರಾಜೀನಾಮೆ, ಲಂಕೇಶ್ ಪತ್ರಿಕೆಯಲ್ಲಿ ಕೆಲಸ ಮಾಡಲು ಆರಂಭಿಸಿದರು. ಕರ್ಮವೀರ, ಕಸ್ತೂರಿ, ಸಂಯುಕ್ತ ಕರ್ನಾಟಕದಲ್ಲಿ ಕೆಲಸ ಮಾಡಿದ್ದಾರೆ. 1995ರಲ್ಲಿ ಬೆಂಗಳೂರಿನಲ್ಲಿ 'ಹಾಯ್ ಬೆಂಗಳೂರ್' ಪತ್ರಿಕೆಯನ್ನು ಪ್ರಾರಂಭಿಸಿ ಜನಮೆಚ್ಚುಗೆ ಗಳಿಸಿದರು. ಜನಪ್ರಿಯ 'ಕ್ರೈಂ ಡೈರಿ' ಕಾರ್ಯಕ್ರಮದ ನಿರೂಪಕ ಕೂಡ ಆಗಿದ್ದರು. ಜನಶ್ರೀ ವಾಹಿನಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು. ಕ್ರೈಂ, ದೇಶ, ಯುದ್ಧ, ಇತಿಹಾಸ, ಭೂಗತ ಇತಿಹಾಸದ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದರು.

# ಮೆಕ್ಕೆಜೋಳ ಖರೀದಿಗಾಗಿ ಸಿಎಂಗೆ ಒತ್ತಾಯ : ಭೈರತಿ




### ಜಿಲ್ಲೆಗೆ ಸಚಿವ ಸ್ಥಾನ ನೀಡಲು ಭೈರತಿ ಒತ್ತಾಯ

**ನಾನು ದಾವಣಗೆರೆ ಜಿಲ್ಲೆಗೆ ಉಸ್ತುವಾರಿ ಆಗಿದ್ದೇನೆ ಅಷ್ಟೇ. ಜಿಲ್ಲೆಗೆ ಸಚಿವ ಸ್ಥಾನದ ಅಗತ್ಯವಿದೆ. ಈ ಬಗ್ಗೆ ನಾನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಮಾಡಿಕೊಂಡಿದ್ದೇನೆ ಎಂದು ಉಸ್ತುವಾರಿ ಸಚಿವ ಭೈರತಿ ಬಸವರಾಜ ಹೇಳಿದ್ದಾರೆ.**

**ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಜಿಲ್ಲೆಯಲ್ಲಿ ಹಿರಿಯ ಶಾಸಕರಾದ ಎಸ್.ಎ. ರವೀಂದ್ರನಾಥ್, ಎಂ.ಪಿ. ರೇಣುಕಾಚಾರ್ಯ, ಮಾಡಾಳ್ ವಿರೂಪಾಕ್ಷಪ್ಪ ಅವರಿದ್ದಾರೆ. ಜಿಲ್ಲೆಗೆ ಸಚಿವ ಸ್ಥಾನ ಕೇಳುವುದರಲ್ಲಿ ತಪ್ಪಿಲ್ಲ. ಒಗ್ಗಟ್ಟಿ ನಿಂದ ಯಾರಾದರೂ ಒಬ್ಬರಿಗೆ ಸಚಿವ ಸ್ಥಾನ ಕೊಡುವಂತೆ ಕೇಳಿದ್ದೇವೆ ಎಂದವರು ತಿಳಿಸಿದರು.**

**(1ನೇ ಪುಟದಿಂದ)** ಬೆಳೆಯಲಾಗುತ್ತದೆ. ಉತ್ತಮ ಮಳೆಯಿಂದ ಮೆಕ್ಕೆಜೋಳ ಇಳುವರಿ ಚೆನ್ನಾಗಿ ಬಂದಿದೆ ಎಂದು ಹೇಳಿದರು. ಕಳೆದ ಬಾರಿ ಬೆಂಬಲ ಬೆಲೆಯಲ್ಲಿ ಇಳುವರಿ ಖರೀದಿಗೆ ಯಡಿಯೂರಪ್ಪನವರು 500 ಕೋಟಿ ರೂ. ಬಿಡುಗಡೆ ಮಾಡಿದ್ದರು. ಈ ಬಾರಿಯೂ ಮೆಕ್ಕೆಜೋಳ ಖರೀದಿಗೆ ಹಣ ಬಿಡುಗಡೆ ಮಾಡಲು ಮುಖ್ಯಮಂತ್ರಿಗಳ ಗಮನಕ್ಕೆ ಮತ್ತೆ ತರಲಾಗುವುದು ಎಂದು ಸಚಿವರು ತಿಳಿಸಿದರು.

**ಯುಜಿಡಿ ಸೌಲಭ್ಯ :** ಚನ್ನಗಿರಿಗೆ ಯು.ಜಿ.ಡಿ. ಸೌಲಭ್ಯ ಕಲ್ಪಿಸುವ ಯೋಜನೆಗೆ ಕೆಲವೇ ದಿನಗಳಲ್ಲಿ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ಹೇಳಿದ ಅವರು, ಸೂಳೆಕೆರೆಯಿಂದ ನಗರಕ್ಕೆ ನೀರು ತರಲಾಗುವುದು ಎಂದು ತಿಳಿಸಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಬಿಹಾರದಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಇನ್ನೂ ಹತ್ತು ವರ್ಷ ಮೋದಿಯವರು ಪ್ರಧಾನಿಯಾದರೆ ದೇಶದ ಚಿತ್ರಣವೇ ಬದಲಾಗಲಿದೆ. ಭಾರತ ವಿಶ್ವದಲ್ಲೇ ನಂ.1 ಆಗಲಿದೆ ಎಂದರು.

**ಶೀತಲೀಕರಣ ಘಟಕ :** ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿಯಲ್ಲಿ 7.5 ಕೋಟಿ ರೂ. ವೆಚ್ಚದ ಶೀತಲೀಕರಣ ಘಟಕಕ್ಕೆ ಶೀಘ್ರದಲ್ಲೇ ಶಂಕುಸ್ಥಾಪನೆ ನೆರವೇರಿಸಲಾಗುವುದು ಎಂದು ಶಾಸಕ ಹಾಗೂ ಕೆ.ಎಸ್.ಡಿ.ಎಲ್. ಅಧ್ಯಕ್ಷ ಮಾಡಾಳ್ ವಿರೂಪಾಕ್ಷಪ್ಪ ತಿಳಿಸಿದ್ದಾರೆ.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಒಂದೂವರೆ ವರ್ಷದೊಳಗೆ ಶೀತಲೀಕರಣ ಘಟಕ ಜನರಿಗೆ ಲಭ್ಯವಾಗಲಿದೆ ಎಂದರು.

ಕೆ.ಎಸ್.ಡಿ.ಎಲ್.ನಲ್ಲಿ 2.3 ಕೋಟಿ ರೂ.ಗಳ ಸಿ.ಎಸ್.ಆರ್. ನಿಧಿ ಇದೆ. ಇದನ್ನು ಬಳಸಿಕೊಂಡು ಚನ್ನಗಿರಿ ತಾಲ್ಲೂಕಿನ ಶಾಲೆ ಹಾಗೂ ಅಂಗನವಾಡಿಗಳಿಗೆ ಕೊಠಡಿಗಳನ್ನು ನಿರ್ಮಿಸಲಾಗುವುದು ಎಂದವರು ಇದೇ ವೇಳೆ ತಿಳಿಸಿದರು.

ಈ ಸಂದರ್ಭದಲ್ಲಿ ಸರ್ಕಾರಿ ಪಿ.ಯು. ಕಟ್ಟಡ, ತಾಲ್ಲೂಕು ಆಯುರ್ವೇದಿಕ್ ಆಸ್ಪತ್ರೆ ಕಟ್ಟಡ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಎಸ್.ಟಿ. ಹಾಸ್ಟೆಲ್ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು. ಸುಮಾರು 1211 ಫಲಾನುಭವಿಗಳಿಗೆ ಸರ್ಕಾರದ ವಿವಿಧ ಸವಲತ್ತುಗಳನ್ನು ವಿತರಿಸಲಾಯಿತು.

ಸಮಾರಂಭದಲ್ಲಿ ಮಾಯಕೊಂಡ ಶಾಸಕ ಪ್ರೊ. ಎನ್. ಲಿಂಗಣ್ಣ, ಜಿ.ಪಂ. ಉಪಾಧ್ಯಕ್ಷೆ ಸಾಕಮ್ಮ ಗಂಗಾಧರ ನಾಯ್ಕ, ಚನ್ನಗಿರಿ ತಾ.ಪಂ. ಅಧ್ಯಕ್ಷೆ ಕವಿತ ಕಲ್ಲೇಶ್, ಉಪಾಧ್ಯಕ್ಷೆ ಚಂದ್ರಮ್ಮ ರುದ್ರಪ್ಪ, ಜಿ.ಪಂ. ಸದಸ್ಯರಾದ ಮಂಜುಳ ಟಿ.ಬಿ., ಲೋಕೇಶಪ್ಪ, ಫಕ್ಕೀರಪ್ಪ, ಎಪಿಎಂಸಿ ಅಧ್ಯಕ್ಷ ಜಗದೀಶ್, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತರಾಯ, ಜಿ.ಪಂ. ಸಿಇಒ ಪದ್ಮ ಬಸವಂತಪ್ಪ, ಉಪ ವಿಭಾಗಾಧಿಕಾರಿ ಮಮತ ಹೊಸಗೌಡರ್, ಚನ್ನಗಿರಿ ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕ ಪ್ರಶಾಂತ್ ಜಿ. ಮನ್ನೋಳಿ, ಆರಕ್ಷಕ ವೃತ್ತ ನಿರೀಕ್ಷಕ ಆರ್.ಆರ್. ಪಾಟೀಲ್ ಮತ್ತಿತರರು ಉಪಸ್ಥಿತರಿದ್ದರು.

ಚನ್ನಗಿರಿ ಪುರಸಭೆ ಮುಖ್ಯಾಧಿಕಾರಿ ಐ. ಬಸವರಾಜ್ ಸ್ವಾಗತಿಸಿದರು.

## ಮರೆಯಾದ ರವಿಬೆಳಗೆರೆ

ಬೆಂಗಳೂರಿಗೆ ಹಾಯ್ ಎನ್ನುತ್ತಲೇ
ಬಂದ ರವಿ !
ಅಧ್ಯಾಪಕರಾಗಿ ವೃತ್ತಿ ಆರಂಭಿಸಿ
ಪತ್ರಕರ್ತ; ಕಾದಂಬರಿಕಾರ
ಪತ್ರಿಕೆ ಸಂಪಾದಕ; ನಟನಾಗಿ
ಬೆಳೆದದ್ದು ಅಚ್ಚರಿ!

ಭಾವನಾತ್ಮಕ ಬರಹಗಾರ
ಲವಲವಿಕೆಯಿಂದಲೇ ಬದುಕಿದ್ದು
ಬರೆಯುತ್ತಲೇ ಬದುಕು
ಮುಗಿಸಿದ ಮಾಂತ್ರಿಕ !

ಸುಲಲಿತವಾಗಿ ಬರೆಯುತ್ತಿದ್ದ ರವಿ
ಕನ್ನಡ ಪತ್ರಿಕೋದ್ಯಮದಲ್ಲಿ
ಹೊಸ ಸಂಚಲನ ಮೂಡಿಸಿದ
ಕನಸುಗಾರ ಮೋಡಿಗಾರ
'ನೀ ಹಿಂಗ ನೋಡಬ್ಯಾಡ'ಎಂದ
ಅಕ್ಷರ ಮಾಂತ್ರಿಕ ಅಸ್ತಂಗತ !

'ಡೆಡ್ಲಿ ಸೋಮ'ಚಿತ್ರದ ಮೂಲಕ
ಸಿನಿಮಾ ರಂಗ ಪ್ರವೇಶಿಸಿ
ಹಲವು ಸಿನಿಮಾಗಳಲ್ಲಿ ನಟಿಸಿ
ಐವತ್ತಕ್ಕೂ ಹೆಚ್ಚು ಕೃತಿ ರಚಿಸಿ
ಗಂಡುಗಲಿಯಾಗಿ ಬೆಳೆದುದು
ನಿಜಕ್ಕೂ ಅಗ್ನಿ ಕಾವ್ಯ!

ನೊಂದ ಜೀವಗಳಿಗೆ ಭರವಸೆಯ ಬೆಳಕಾಗಿ
ಬರಹದ ಮೂಲಕವೇ ಬದುಕು ಕಟ್ಟುವ
ಛಲಗಾರ
ಖಾಸಗಿ ವಾಹಿನಿಯ ಎಂದೂ ಮರೆಯದ
ಹಾಡಾಗಿ
ಪ್ರಾರ್ಥನಾ ಶಾಲೆಯ ಸಂಸ್ಥಾಪಕ ರಾಗಿ
ರವಿ ಇಟ್ಟ ಹೆಜ್ಜೆ ದಿಟ್ಟ ಹೆಜ್ಜೆಯಾದುದು
ಎಲ್ಲರಿಗೂ ಸಮಾಧಾನ ಹೇಳಿ ಹೋದುದು
ಇತಿಹಾಸ!

ಗಣಿ ನಾಡಿನಿಂದ ಬಂದ ಅಕ್ಷರದ ಗಣಿ
ಕರುನಾಡ ಜನರ ಮನಗೆದ್ದ ರವಿ
ಕವಲೊಡೆಯಿತು ಬಾಳಿನ ಹಲವು ಮುಖ
ಪಡೆಯಿತು ಕರುನಾಡಿನಲಿ ಜೀವನ್ ಮುಕ್ತಿ
ರವಿ ರೇಷ್ಮೆರುಮಾಲು ಇನ್ನೂ ಒಂಟಿ
ಕನಸು ಏಕಾಂತದಲ್ಲಿ ಹುಟ್ಟಬೇಕು
ಜಂಗುಳಿಯಲ್ಲಿ ಬೆಳೆಯಬೇಕು
ಎಂದ ಕವಿ ಬದುಕು ಮುಗಿಸಿದ ರವಿ !

ರವಿ ಇಲ್ಲದೆ'ಕಲ್ಪನಾ ವಿಲಾಸ'ದಲ್ಲಿ
ಕಗ್ಗತ್ತಲು!
ಕನ್ನಡ ಸಾರಸ್ವತ ಲೋಕಕ್ಕೆ
ರವಿ ಮುಕುಟಮಣಿ
ಹಾಯ್ ಹೇಳುವ ಮುನ್ನವೇ
ಹೊರಟು ಹೋದುದು ಬದುಕಿನ ಹಾದಿ
ಮುಗಿಸಿದುದು
ಕರುನಾಡಿಗೆ ಪತ್ರಿಕೋದ್ಯಮಕೆ
ಅಪಾರ ನಷ್ಟ !

ರವಿ ಬರಹವೇ ಒಂದು ವಿಶೇಷ
ಅವರಿಗೆ ಅವರೇ ಸಾಟಿ
ರವಿ ಇಲ್ಲದೆ ಚೇತನ ಕಳೆದುಕೊಂಡ
ಪತ್ರಿಕಾ ಲೋಕ!
'ಬೆಳ'ಕಿನ'ಗೆರೆ'ದಾಟಿದ ರವಿ

ಮತ್ತೊಮ್ಮೆ ಹುಟ್ಟಿ ಬಾ
ಉದಯ ರವಿಯಾಗಿ ಕರುನಾಡ ಸಿರಿಯಾಗಿ
ಪತ್ರಿಕೋದ್ಯಮದ ನಕ್ಷತ್ರ ತಾರೆಯಾಗಿ
ನಿನ್ನ ಸಾಧನೆಯ ಹಿರಿಮೆಗೆ
ಈ ನನ್ನ ನುಡಿ ನಮನ

**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು, ದಾವಣಗೆರೆ

## ಬಂತು ಬಂತು ದೀಪಾವಳಿ

ಮೂಡಣದಿ ಅರುಣೋದಯ
ಮೂಡಿತು ಇಳೆಗೆ ಜ್ಯೋತಿ ಉದಯ
ಮೂಢಜನರಿಗೆ ಕಾಂತಿಯ
ಮೂಡಲಮನೆಯಲ್ಲಿ ಜ್ಞಾನದ ಜಯ

ಅಜ್ಞಾನವ ಓಡಿಸುವ ದೀಪಾವಳಿ
ಅಂಧಕಾರ ತೊಲಗಿಸುವ ಬೆಳಕಾವಳಿ
ಅರಿವೆಂಬ ದೀವಿಗೆ ಎಲ್ಲೆಲ್ಲಿ
ಅರಮನೆಯಾಯ್ತು ಇಳೆ ಲೀಲಾವಳಿ

ಜಲರೂಪಿ ಗೋವಿಂದ ಲೀಲಾವಳಿ
ಜಗದೋದ್ಧಾರ ವಿಷ್ಣು ನರಕಾಸುರನ ವಧಿಸಿದ
ದೀಪಾವಳಿ
ಜಗದೊಡೆಯ ರಾಮನ ಆಗಮನ
ಜಗದೇಕವೀರ ಬಲೀಂದ್ರನ ತುಳಿದ ದಿನ

ಸಾಲುಸಾಲು ದೀಪಗಳ ಅಲಂಕರಿಸಿ
ಸಡಗರದಿಂದ ಲಕ್ಷ್ಮಿಯ ಪೂಜಿಸಿ
ಸರಸರ ಸುಡುವ ಸುರ್ಸುರ್ ಪಟಾಕಿ
ಸಂಭ್ರಮದಿಂದ ನಭದಲಿ ಚಿತ್ತಾರ ಮಾಡಿ

ದುಷ್ಟರ ಸಂಹಾರ ಶಿಷ್ಟರ ವಿಜಯದ ಹಾರ
ದುಪ್ಪಟ್ಟಾಯ್ತು ನೂತನ ವಸ್ತ್ರ ಸಿಹಿಯ ಸಡಗರ
ದುರಹಂಕಾರವ ಓಡಿಸುವ ಜ್ಯೋತಿಗೆ ಇಲ್ಲ
ಭೇದ-ಭಾವ
ದೀಪಾವಳಿ ಆಚರಣೆ ಸಮತಾಭಾವದ
ಸಂಕೇತದ ಭಾವ

**- ಕೋಮಲ ವಸಂತ ಕುಮಾರ್**, ದಾವಣಗೆರೆ.

## ಬೇಡ ಪಟಾಕಿ

ಪಟಾಕಿ ಹೊತ್ತಿಸೆ ಕಣ್ಣಿಗೆ ಚಂದ
ಆದರೆ ಪರಿಸರ ಹಾನಿ ಇದರಿಂದ,
ಪಟಾಕಿ ರಹಿತ ದೀಪಾವಳಿಯಿಂದ
ಹಣತೆ ದೀಪಗಳ ಅಂದವೆ ಅಂದ.

'ಢಂ ಢಂ' ಶಬ್ದಕ್ಕೆ ಲಕ್ಷ್ಮಿ ಒಲಿಯಳು
ಕಿವಿಗಡ ಚಿಕ್ಕಲು ಆಕೆ ಮುನಿವಳು,
ಶಾಂತ ಸ್ವರೂಪಿಯು ಕೋಮಲೆ ಅವಳು
ಕರ್ಣ ಕಠೋರ ಶಬ್ದ ಸಹಿಸಳು.

ಲಕ್ಷ್ಮಿಯ ಜೊತೆಗಿಹ ವಾಣಿ ಸರಸ್ವತಿ
ಅವಳು ಬಯಸುವುದು ನಿರ್ಮಲ ಶಾಂತಿ,
ಅವರೊಡನಿರುವನು ಸಮುಖ ಗಣಪತಿ
ಈ ಮೂವರಿಗೂ ಭಕ್ತಿಯೆ ಪ್ರೀತಿ.

ದೀಪ ಬೆಳಗಿಸಿರಿ, ಬೇಡ ಪಟಾಕಿ
ಹಚ್ಚಲೆ ಬೇಡಿರಿ 'ಲಕ್ಷ್ಮಿ ದಢಾಕಿ'
ಉಳಿಸಿದ ಹಣವನು ದಾನಕೆ ಹಾಕಿ
ಸುತ್ತಲ ಪರಿಸರ ಪ್ರಕೃತಿಯ ಸಾಕಿ.

**-ಹೆಚ್.ಬಿ.ಮಂಜುನಾಥ**, ಹಿರಿಯ ಪತ್ರಕರ್ತ.



## ಹೆಸರೇ ಇಲ್ಲದ ರೈಲ್ವೆ ನಿಲ್ದಾಣ ಇರಲು ಸಾಧ್ಯವೇ ?

### ಸಾಧ್ಯ .! ಅದಿರುವುದು ಸಹಾ ಭಾರತದಲ್ಲಿಯೇ !!


ಪಶ್ಚಿಮ ಬಂಗಾಳದ ಬರ್ಧಮಾನ್ ನಿಂದ ಮೂವತ್ತೈದು ಕಿ.ಮೀ ದೂರದ, ಬಂಕುರಾ - ಮಸಾಗ್ರಾಮ್ ಮಾರ್ಗದ ರೈನಾ ಹಾಗೂ ರೈನಾಗಢ ಗ್ರಾಮಗಳ ನಡುವೆ ಈ ನಿಲ್ದಾಣ ಇದೆ. ಮೊದಲು ರೈನಗಢ ಎಂದು ಹೆಸರಿಡಲಾಯಿತು.ಆದರೆ, ಅದಕ್ಕೆ ರೈನಾ ಗ್ರಾಮಸ್ಥರು ವಿರೋಧಿಸಿದರು. ಕಾರಣ ನಿಲ್ದಾಣ ರೈನಾ ವ್ಯಾಪ್ತಿಯ ಜಮೀನಿನಲ್ಲಿತ್ತು.

ವಿವಾದ ರೈಲ್ವೆ ಮಂಡಳಿಯ ಮುಂದೆ ಹೋದಾಗ, ಎಲ್ಲರಿಗೂ ಒಪ್ಪಿತವಾಗುವ ತೀರ್ಮಾನ ಬಾರದ ಕಾರಣ ವಿವಾದವನ್ನು ಹಾಗೆಯೇ ಪೆಂಡಿಂಗ್ ನಲ್ಲಿರಿಸಲಾಯಿತು. ಅಂತಿಮ ತೀರ್ಮಾನ ಆಗುವವರೆಗೆ ಹೆಸರಿಲ್ಲದೆ ನಿಲ್ದಾಣದ ಕಾರ್ಯಗಳನ್ನು ನಡೆಸಲು ಸೂಚಿಸಲಾಯಿತು !

ಹೀಗಾಗಿ ಸದ್ಯ ಈ ನಿಲ್ದಾಣದಲ್ಲಿಳಿಯಬೇಕಾದ ಹೊರ ಊರ ನಿಲ್ದಾಣದವರು ಟಿಕೆಟ್ ಕಿಟಕಿಯಲ್ಲಿ 'ಹೆಸರಿಲ್ಲದ ಸ್ಟೇಷನ್‌ಗೆ ಟಿಕೆಟ್ ಕೊಡ್ರಿ' ಎಂದು ಕೇಳಬೇಕಾದ ಸ್ಥಿತಿ !

**-ಹಳೇಬೀಡು ರಾಮಪ್ರಸಾದ್**, ದಾವಣಗೆರೆ.

### ವಿಶ್ವ ನ್ಯುಮೋನಿಯಾ ದಿನ 12 ನೇ ನವೆಂಬರ್ 2020



## ಎಲ್ಲರಿಗೂ ಆರೋಗ್ಯಕರ ಶ್ವಾಸಕೋಶಗಳು

ಪ್ರತಿವರ್ಷ 2009 ರಿಂದ 12 ನೇ ನವೆಂಬರ್‌ನಲ್ಲಿ 'ವಿಶ್ವ ನ್ಯುಮೋನಿಯಾ ದಿನ'ವನ್ನು ಆಚರಿಸುತ್ತಿದೆ. ವಿಶ್ವ ನ್ಯುಮೋನಿಯಾ ದಿನದ ಮುಖ್ಯ ಗುರಿ ನ್ಯುಮೋನಿಯಾ ಬಗ್ಗೆ ಜಾಗೃತಿ ಮೂಡಿಸುವುದು. 5 ವರ್ಷದೊಳಗಿನ ಮಕ್ಕಳ ವಿಶ್ವದ ಪ್ರಮುಖ ಸಾಂಕ್ರಾಮಿಕ ಕೊಲೆಗಾರ. ನ್ಯುಮೋನಿಯಾ ಪ್ರತಿ 39 ಸೆಕೆಂಡಿಗೆ ಒಂದು ಮಗುವನ್ನು ಕೊಲ್ಲುತ್ತದೆ, ಕಳೆದ ವರ್ಷ ಭಾರತದಲ್ಲಿ 1,27,000 ಜನರು ಸಾವನ್ನಪ್ಪಿದ್ದಾರೆ.

ಒಂದು ಅಂದಾಜಿನ ಪ್ರಕಾರ ನ್ಯೂಮೋನಿಯಾ ರೋಗವು 2030 ರ ವೇಳೆಗೆ ಭಾರತವೊಂದರಲ್ಲಿಯೇ ಸುಮಾರು 1.7 ಮಿಲಿಯನ್ ಮಕ್ಕಳನ್ನು ಹಾಗೂ ಪ್ರಪಂಚದಲ್ಲಿ 11 ಮಿಲಿಯನ್ ಮಕ್ಕಳನ್ನು ರೋಗವು ಬಲಿ ಪಡೆಯಬಹುದೆಂದು ಅಂದಾಜಿಸಲಾಗಿದೆ. ಪ್ರಸ್ತುತ ಅತ್ಯಂತ ಹೆಚ್ಚಾಗಿ ಈ ರೋಗಕ್ಕೆ ಬಲಿಯಾಗುತ್ತಿರುವ ದೇಶಗಳೆಂದರೆ ನೈಜೇರಿಯಾ (1,73,000), ಭಾರತ (1,71,000), ಪಾಕಿಸ್ತಾನ ( 7,06,000) ಮತ್ತು ಡೆಮಾಕ್ರಟಿಕ್ ರಿಪಬ್ಲಿಕ್ ಕಾಂಗೋ (6,35,000) ನ್ಯುಮೋನಿಯಾ ಬ್ಯಾಕ್ಟೀರಿಯಾ, ವೈರಸ್ ಮತ್ತು ಶಿಲೀಂಧ್ರಗಳಿಂದ ಉಂಟಾಗುವ ಶ್ವಾಸಕೋಶದ ಸೋಂಕು. ಶ್ವಾಸಕೋಶವು ಅಲ್ವಿಯೋಲಿ ಎಂಬ ಸಣ್ಣ ಚೀಲಗ



ಳಿಂದ ಕೂಡಿದೆ, ಇದು ಆರೋಗ್ಯವಂತ ವ್ಯಕ್ತಿಯು ಉಸಿರಾಡುವಾಗ ಗಾಳಿಯಿಂದ ತುಂಬುತ್ತದೆ. ಮಗುವಿಗೆ ನ್ಯುಮೋನಿಯಾ ಇದ್ದಾಗ, ಅಲ್ವಿಯೋಲಿಯು ಕೀವು ಮತ್ತು ದ್ರವದಿಂದ ತುಂಬಿರುತ್ತದೆ, ಇದು ಉಸಿರಾಟವನ್ನು ನೋವಿನಿಂದ ಕೂಡಿಸುತ್ತದೆ ಮತ್ತು ಆಮ್ಲಜನಕದ ಸೇವನೆಯನ್ನು ಮಿತಿಗೊಳಿಸುತ್ತದೆ.

**ಅಪಾಯಕಾರಕ ಅಂಶಗಳು**

1. ಅಪೌಷ್ಟಿಕತೆ
2. ವಾಯು ಮಾಲಿನ್ಯವು - ಒಳಾಂಗಣ ಮತ್ತು ಹೊರಾಂಗಣ
3. ಕಿಕ್ಕಿರಿದ ಮನೆಗಳಲ್ಲಿ ವಾಸಿಸುತ್ತಿದ್ದರೆ
4. 6 ತಿಂಗಳಿಗಿಂತ ಕಡಿಮೆ ಕಾಲ ಸ್ತನ್ಯಪಾನ
5. ಧೂಮಪಾನ ಮಾಡುತ್ತಿರುವ ಪೋಷಕರು
6. ಭಾಗಶಃ ಲಸಿಕೆ
7. ಮೀಸಲ್ಸ್, ಪರ್ಟುಸಿಸ್ ನಂತಹ ಪೂರ್ವ ಅಸ್ತಿತ್ವದಲ್ಲಿರುವ ಕಾಯಿಲೆ ರೋಗ

**ನ್ಯುಮೋನಿಯಾದ ಲಕ್ಷಣಗಳು :** ಕೆಮ್ಮು, ಉಸಿರಾಟದ ತೊಂದರೆ ಮತ್ತು ಜ್ವರ ಸಾಮಾನ್ಯ ಲಕ್ಷಣಗಳಾಗಿವೆ. ನ್ಯುಮೋನಿಯಾ ಹೊಂದಿರುವ ಮಕ್ಕಳು ಸಾಮಾನ್ಯವಾಗಿ ವೇಗವಾಗಿ ಉಸಿರಾಡುವುದನ್ನು ಅನುಭವಿಸುತ್ತಾರೆ ಅಥವಾ ಅವರು ಉಸಿರಾಡುವಾಗ ಅವರ ಕೆಳ ಎದೆಯು ಸೆಳೆಯಬಹುದು ಅಥವಾ ಹಿಂತೆಗೆದುಕೊಳ್ಳಬಹುದು.

ನ್ಯುಮೋನಿಯಾ ಸಾಂಕ್ರಾಮಿಕ ಮತ್ತು ವಾಯುಗಾಮಿ ಕಣಗಳ ಮೂಲಕ (ಕೆಮ್ಮು ಅಥವಾ ಸೀನು) ಅಥವಾ ಕಲುಷಿತ ಮೇಲ್ಮೈಗಳಿಂದ ಹರಡಬಹುದು.

**ರೋಗ ನಿರ್ಣಯ :** ಆರೋಗ್ಯ ಕಾರ್ಯಕರ್ತರು ಅಸಹಜ ಉಸಿರಾಟವನ್ನು ಪರೀಕ್ಷಿಸುವುದು, ಮಗು ನಿಮಿಷಕ್ಕೆ ತೆಗೆದುಕೊಳ್ಳುವ ಉಸಿರಾಟದ ಸಂಖ್ಯೆಯನ್ನು ಎಣಿಸುವುದು ಸೇರಿದಂತೆ ದೈಹಿಕ ಪರೀಕ್ಷೆಯ ಮೂಲಕ ನ್ಯುಮೋನಿಯಾ ರೋಗ ನಿರ್ಣಯ ಮಾಡಬಹುದು. 'ವೇಗದ ಉಸಿರಾಟ'ದ ಸಂಖ್ಯೆ ಮಗುವಿನ ವಯಸ್ಸನ್ನು ಅವಲಂಬಿಸಿರುತ್ತದೆ.

**ಚಿಕಿತ್ಸೆ :** ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ, ಹೆಚ್ಚಿನ ಸಂಖ್ಯೆಯ ನ್ಯುಮೋನಿಯಾ ಬ್ಯಾಕ್ಟೀರಿಯಾದಿಂದ ಉಂಟಾಗುತ್ತದೆ ಮತ್ತು ಕಡಿಮೆ ವೆಚ್ಚದ ಪ್ರತಿಜೀವಕಣಗಳ (ಅಮೋಕ್ಸಿಸಿಲಿನ್) ನೊಂದಿಗೆ ಚಿಕಿತ್ಸೆ ನೀಡಬಹುದು, ಆದರೂ ನ್ಯುಮೋನಿಯಾ ಹೊಂದಿರುವ ಮೂರನೇ ಒಂದು ಭಾಗದಷ್ಟು ಮಕ್ಕಳು ಮಾತ್ರ ಅವರಿಗೆ ಅಗತ್ಯವಿರುವ ಪ್ರತಿಜೀವಕಣಗಳನ್ನು ಪಡೆಯುತ್ತಾರೆ. ಏಕೆಂದರೆ ಅವರಿಗೆ ಗುಣಮಟ್ಟದ ಆರೋಗ್ಯ ರಕ್ಷಣೆ ಕೊರತೆಯಿದೆ.

**ತಡೆಗಟ್ಟುವಿಕೆ**

1. 6 ತಿಂಗಳವರೆಗೆ ವಿಶೇಷ ಸ್ತನ್ಯಪಾನ ಮತ್ತು 2 ವರ್ಷಗಳವರೆಗೆ ಘನ ಆಹಾರಗಳಿಂದ ನಿರಂತರ ಸ್ತನ್ಯಪಾನ
2. ಎಲ್‌ಪಿಜಿ (LPG) ಬಳಸುವ ಮೂಲಕ ಒಳಾಂಗಣ ವಾಯುಮಾಲಿನ್ಯವನ್ನು ಕಡಿಮೆ ಮಾಡುವುದು ಮತ್ತು ಹೊರಾಂಗಣ ಮಾಲಿನ್ಯಕ್ಕೆ ಕಡಿಮೆ ಒಡ್ಡಿಕೊಳ್ಳುವುದು
3. ವೂಪಿಂಗ್ ಕಾಫ್ (ಪೆರ್ಟುಸಿಸ್), ದಡಾರ, ಹಿಮೋಫಿಲಸ್ ಇನ್ಫ್ಲುಯೆನ್ಸ ಟೈಪ್ ಬಿ (ಹೆಚ್‌ಐಬಿ) ಮತ್ತು ನ್ಯುಮೋಕೊಕಸ್ ವಿರುದ್ಧ ಲಸಿಕೆ.
4. ಸುರಕ್ಷಿತ ಕುಡಿಯುವ ನೀರು, ನೈರ್ಮಲ್ಯ ಮತ್ತು ಕೈ ತೊಳೆಯುವುದು.

**- ಡಾ. ಮೂಗನಗೌಡ,**
ಮಕ್ಕಳ ವಿಭಾಗದ ಮುಖ್ಯಸ್ಥರು
ಬಾಪೂಜಿ ಚೈಲ್ಡ್ ಹೆಲ್ತ್ ಇನ್‌ಸ್ಟಿಟ್ಯೂಟ್,
ಜೆಜೆಎಂ ಮೆಡಿಕಲ್ ಕಾಲೇಜು,
ದಾವಣಗೆರೆ. ಮೊ: 9972699961

## ಟಿಪ್ಪುರವರ ಆದರ್ಶಗಳು ನಮಗೆ ಮಾರ್ಗದರ್ಶನ



ಟಾರ್ಗೆಟ್ ಅಸ್ಲಾಂ

ದಾವಣಗೆರೆ, ನ.13- ಟಿಪ್ಪು ಸುಲ್ತಾನ್ ರವರ ಆದರ್ಶಗಳು ನಮಗೆ ಮಾರ್ಗದರ್ಶನವಾಗಿವೆ ಎಂದು ಸುವರ್ಣ ಕರ್ನಾಟಕ ಹಿತ ರಕ್ಷಣಾ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಟಾರ್ಗೆಟ್ ಅಸ್ಲಾಂ ತಿಳಿಸಿದ್ದಾರೆ.

ಸುವರ್ಣ ಕರ್ನಾಟಕ ಹಿತ ರಕ್ಷಣಾ ವೇದಿಕೆಯ ಕಚೇರಿಯಲ್ಲಿ ಏರ್ಪಡಿಸಿದ್ದ ಮೈಸೂರು ಹುಲಿ ಟಿಪ್ಪು ಸುಲ್ತಾನ್ ಜಯಂತಿ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಮೈಸೂರು ಹುಲಿ ಟಿಪ್ಪು ಸುಲ್ತಾನ್ ಅವರು ಒಂದು ಸಮುದಾಯಕ್ಕೆ ಸೀಮಿತರಾದವರಲ್ಲ. ಸರ್ವ ಸಮುದಾಯದ ಜೊತೆ ಉತ್ತಮ ಬಾಂಧವ್ಯ ಹೊಂದಿದ್ದರು. ಕೆಲವರು ತಮ್ಮ ಸ್ವಾರ್ಥಕ್ಕಾಗಿ ಅವರ ಬಗ್ಗೆ ಇಲ್ಲಸಲ್ಲದ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅವರ ಶೌರ್ಯ, ಆದರ್ಶಗಳು ಇತಿಹಾಸದಲ್ಲಿ ಅಚ್ಚಳಿಯದೇ ಉಳಿದಿವೆ. ಟಿಪ್ಪುಸುಲ್ತಾನ್ ಅವರು ತಾಯಿ ಕನ್ನಡಾಂಬೆ ಭುವನೇಶ್ವರಿಯ ಪುತ್ರ ಎಂದು ಹೇಳಲು ನನಗೆ ಹೆಮ್ಮೆ ಯಾಗುತ್ತದೆ. ಅವರಿಂದ ಯಾರಿಗೂ ತೊಂದರೆಯಾಗಿಲ್ಲ, ದಯವಿಟ್ಟು ಅವರ ಜಯಂತಿಯನ್ನು ಬಹಳ ಸರಳ ಹಾಗೂ ಶಾಂತಿಯ ಸಂಕೇತವಾಗಿ ಆಚರಿಸಲು ಮನವಿ ಮಾಡಿದರು

ನಮ್ಮ ಕನ್ನಡನಾಡಿನ ಕಲರವವನ್ನು ಹೊರ ದೇಶದವರೂ ಸಂಭ್ರಮಿಸುವಂತಾಗಬೇಕು. ಇಡೀ ನವೆಂಬರ್ ತಿಂಗಳು ಕನ್ನಡದ ಕಂಪನ್ನು ಪ್ರತಿಯೊಬ್ಬರೂ ಸಂಭ್ರಮವಾಗಿ ಸವಿಯಲಿ. ಆ ರೀತಿಯಲ್ಲಿ ನಾವು ಕನ್ನಡ ರಾಜ್ಯೋತ್ಸವವನ್ನು ಆಚರಿಸೋಣ ಎಂದರು.

ಈ ವೇಳೆ ಯಾಕೂಬ್ ಕೊಟ್ಟೂರು, ಆಜಂ, ಚಮನ್ ಷರೀಫ್, ಅಬ್ದುಲ್ ಜಬ್ಬಾರ್, ಗೋವಿಂದ್‌ರಾವ್, ಬಿ.ಕೆ. ಅತಾವುಲ್ಲಾ ಷರೀಫ್, ಗಣೇಶ್, ನಜೀರ್‌ಸಾಬ್, ಚಾಂದ್‌ಪೀರ್, ಇಮ್ತಿಯಾಜ್, ಶೌಕತ್, ರಿಯಾಜ್ ಓಡಕಾಯ್ ಮತ್ತು ಇತರರು ಇದ್ದರು.

## ದಾನಗಳಲ್ಲೇ ರಕ್ತ ದಾನ ಶ್ರೇಷ್ಠ ದಾನ



ದಾವಣಗೆರೆ,ನ.13- ದಾವಣಗೆರೆ ಲಯನ್ಸ್ ಕ್ಲಬ್ ವತಿಯಿಂದ ಲಯನ್ಸ್ ಭವನದಲ್ಲಿ ರಕ್ತ ದಾನ ಶಿಬಿರ ನಡೆಯಿತು. ಕ್ಲಬ್ಬಿನ ಅಧ್ಯಕ್ಷ ಕೆ.ಎಂ. ವಿಜಯಕುಮಾರ್ ಸ್ವತಃ ರಕ್ತದಾನ ಮಾಡುವುದರ ಮೂಲಕ ಶಿಬಿರಕ್ಕೆ ಚಾಲನೆ ನೀಡಿದರು.

ಜಿಲ್ಲಾ ಲಯನ್ಸ್ 317ಸಿ ಉಪ ರಾಜ್ಯಪಾಲರುಗಳಾದ ವಿಶ್ವನಾಥ ಶೆಟ್ಟಿ ಮತ್ತು ಕೆ.ಸಿ. ವೀರಭದ್ರ ಅವರುಗಳು ಶಿಬಿರದ ವೇದಿಕೆ ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಿಶ್ವನಾಥ ಶೆಟ್ಟಿ ಮತ್ತು ಕೆ.ಸಿ. ವೀರಭದ್ರ, ಒಂದು ಜೀವವನ್ನು ಉಳಿಸಬಲ್ಲ ರಕ್ತದಾನವು ಶ್ರೇಷ್ಠ ದಾನವಾಗಿದ್ದು, ಆರೋಗ್ಯವಂತರಾಗಿರುವ ಪ್ರತಿಯೊಬ್ಬರೂ ರಕ್ತದಾನ ಮಾಡಬಹುದಾಗಿದೆ ಎಂದರು.

ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ಡಾ. ಬಿ. ಎಸ್. ನಾಗಪ್ರಕಾಶ್, ಎ.ಆರ್. ಉಜ್ಜನಪ್ಪ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

**ರಕ್ತ ದಾನ ಮಾಡಲು ಜಿಲ್ಲಾ ಲಯನ್ಸ್ ಉಪ ರಾಜ್ಯಪಾಲರುಗಳಾದ ವಿಶ್ವನಾಥ ಮತ್ತು ಕೆ.ಸಿ.ವೀರಭದ್ರ ಕರೆ**

ಲಯನ್ಸ್ ಪ್ರಾಂತೀಯ ಅಧ್ಯಕ್ಷ ಎನ್. ವಿ. ಹರೀಶ್, ವಲಯಾಧ್ಯಕ್ಷ ವೈ.ಬಿ. ಸತೀಶ್, ಕ್ಲಬ್ ವಿಸ್ತರಣಾ ಸಮಿತಿ ಛೇರ್ಮನ್ ಬೆಳ್ಳೂಡಿ ಶಿವಕುಮಾರ್, ಜಿಲ್ಲಾ ಲಯನ್ಸ್ ಕೋ-ಆರ್ಡಿನೇಟರ್ ಗಳಾದ ದಿನೇಶ್ ಕೆ.ಶೆಟ್ಟಿ, ಲಯನ್ಸ್ ಟ್ರಸ್ಟ್ ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಎಸ್. ಶಿವಮೂರ್ತಿ ಸುರಭಿ, ಲಯನ್ಸ್ ಉಪಾಧ್ಯಕ್ಷ ಎಸ್. ಓಂಕಾರಪ್ಪ, ಕಾರ್ಯದರ್ಶಿ ಕೋರಿ ಶಿವಕುಮಾರ್, ಖಜಾಂಚಿ ಸಂಪತ್ ಬಿ.ಹಳ್ಳಿಕೇರಿ, ಸಹ ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ್ ಮತ್ತಿತರರು ಉಪಸ್ಥಿತರಿದ್ದರು.

## ನ್ಯಾಷನಲ್ ಟೆಲಿವಿಷನ್ ಅವಾರ್ಡ್ಸ್ : ದಿಗ್ವಿಜಯ ನ್ಯೂಸ್‌ಗೆ 7 ಪ್ರಶಸ್ತಿ

ಬೆಂಗಳೂರು, ನ.13- ಪರಿಣಾಮಕಾರಿಯಾಗಿ ಜನರಿಗೆ ಸುದ್ದಿ ಮುಟ್ಟಿಸುವ ವಾಹಿನಿಗಳಿಗೆ ನೀಡಲಾಗುವ ಪ್ರತಿಷ್ಠಿತ ನ್ಯಾಷನಲ್ ಟೆಲಿವಿಷನ್ ಅವಾರ್ಡ್ಸ್-2020ರಲ್ಲಿ ಕರ್ನಾಟಕದ 'ದಿಗ್ವಿಜಯ 24x7 ನ್ಯೂಸ್' ಸುದ್ದಿವಾಹಿನಿ 7 ವಿಭಾಗಗಳಲ್ಲಿ ಪ್ರಶಸ್ತಿಗೆ ಭಾಜನವಾಗಿದೆ.

2020ರ ನ್ಯಾಷನಲ್ ಟೆಲಿವಿಷನ್ ಅವಾರ್ಡ್ ಗಳನ್ನು ಮೊನ್ನೆ ಘೋಷಣೆ ಮಾಡಲಾಯಿತು. ದೇಶದ ಅನೇಕ ನ್ಯೂಸ್ ಚಾನೆಲ್‌ಗಳ ನಡುವೆ ಸ್ಪರ್ಧೆಯಲ್ಲಿ ದಿಗ್ವಿಜಯ 24x7 ನ್ಯೂಸ್ ವಾಹಿನಿಗೆ ಬೆಸ್ಟ್ ನ್ಯೂಸ್ ಬುಲೆಟಿನ್ (ನ್ಯೂಸ್ ಔಟ್‌ಲುಕ್), ಬೆಸ್ಟ್ ನ್ಯೂಸ್ ಡಿಬೇಟ್ (ಮೆಗಾ ಡಿಬೇಟ್), ಬೆಸ್ಟ್ ನ್ಯೂಸ್ ಪ್ರೆಸೆಂಟರ್ (ಮಮತಾ ಹೆಗ್ಡೆ), ಬೆಸ್ಟ್ ಪ್ರೈಮ್ ಟೈಮ್ ನ್ಯೂಸ್ ಪ್ರೆಸೆಂಟರ್ (ರಕ್ಷಿತ್ ಶೆಟ್ಟಿ), ಬೆಸ್ಟ್ ರಿಪೋರ್ಟರ್ (ಅಶೋಕ್ ಮಂಗಳೂರು), ಬೆಸ್ಟ್ ಪ್ರೋಮೋ ಕ್ಯಾಂಪೇನ್ ಕನ್ನಡ (ಕೊರೊನಾ ಜಾಗೃತಿ ಪ್ರೋಮೋ), ಬೆಸ್ಟ್ ಸ್ಟಿಂಗ್ ಬೈ ನ್ಯೂಸ್ ಚಾನೆಲ್ ಕನ್ನಡ (ಬೆಗ್ಗರ್ಸ್ ಕಾಲೋನಿ ಸ್ಟಿಂಗ್) ವಿಭಾಗದಲ್ಲಿ ಪ್ರಶಸ್ತಿಗಳು ಲಭಿಸಿವೆ.

**ಅಭಿನಂದನೆ:** 7 ವಿಭಾಗಗಳಲ್ಲಿ ಪ್ರಶಸ್ತಿ ಪಡೆದಿರುವ ದಿಗ್ವಿಜಯ ವಾಹಿನಿಗೆ ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ. ವಿಜಯ ಸಂಕೇಶ್ವರ, ವ್ಯವಸ್ಥಾಪಕ ನಿರ್ದೇಶಕ ಆನಂದ ಸಂಕೇಶ್ವರ ಅಭಿನಂದಿಸಿದ್ದಾರೆ.

## ಜಗಳೂರು ತಾಲ್ಲೂಕಿನಲ್ಲಿ ಐಸಿಎಆರ್ ಕೇಂದ್ರದಿಂದ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆ




ಜಗಳೂರು, ನ.13- ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರ ವತಿಯಿಂದ ಜಗಳೂರು ತಾಲ್ಲೂಕು ಮರಿಕುಂಟೆ ಗ್ರಾಮದಲ್ಲಿ ಹತ್ತಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಪ್ರಾತ್ಯಕ್ಷಿಕೆಯ ಕ್ಷೇತ್ರೋತ್ಸವ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಕೇಂದ್ರದ ಮಣ್ಣು ವಿಜ್ಞಾನ ವಿಷಯ ತಜ್ಞ ಹೆಚ್.ಎಂ.ಸಣ್ಣಗೌಡರ ಮಾತನಾಡಿ, ರೈತರು ಸಮಗ್ರ ಬೆಳೆ ನಿರ್ವಹಣೆ ಕಡೆ ಗಮನವಹಿಸಬೇಕೆಂದುಮನವರಿಕೆಮಾಡಿಕೊಟ್ಟರು. ಜೊತೆಗೆ ಸುರಕ್ಷಿತ ಕೀಟನಾಶಕ ಬಳಕೆ ಕುರಿತು ಪ್ರಾತ್ಯಕ್ಷಿಕೆ ತೋರಿಸಲಾಯಿತು.

ಪ್ರಾತ್ಯಕ್ಷಿಕೆ ಅಳವಡಿಸಿಕೊಂಡ ರೈತ ಬಸವರಾಜ ಮಾತನಾಡಿ, ಕಾಲಕಾಲಕ್ಕೆ ತಜ್ಞರ ಸಲಹೆ ಅಳವಡಿಸಿಕೊಂಡಿರುವುದರಿಂದ ರೋಗ ಮತ್ತು ಕೀಟದ ಹಾವಳಿ ಕಡಿಮೆಯಾಗಿ ಉತ್ತಮ ಇಳುವರಿ ಬಂದಿರುವುದಾಗಿ ಸಂತಸ ವ್ಯಕ್ತಪಡಿಸಿದರು.

ರೈತರಿಗೆ ಅಗತ್ಯ ಪರಿಕರಗಳನ್ನು ಈ ಸಂದರ್ಭದಲ್ಲಿ ಒದಗಿಸಲಾಯಿತು. ಕೇಂದ್ರದ ಬೇಸಾಯ ತಜ್ಞರಾದ ಬಿ.ಓ.ಮಲ್ಲಿಕಾರ್ಜುನ್, ಕೊಂಡುಕುರಿ ರೈತ ಉತ್ಪಾದಕ ಕಂಪನಿಯ ಕಾರ್ಯ ನಿರ್ವಹಣಾಧಿಕಾರಿ ರುದ್ರೇಶ್ ಮತ್ತು ರೈತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಪರಿಹಾರ ಹಣ ಬಿಡುಗಡೆಗೆ ನಾಗರಾಜ್ ಮನವಿ



ದಾವಣಗೆರೆ ನ.13-ಜಿಲ್ಲೆಯಾದ್ಯಂತ ಅನೇಕ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಸುಮಾರು 70 ಲಕ್ಷದಷ್ಟು ಪರಿಹಾರದ ಹಣ ಬಾಕಿ ಇದ್ದು, ಅದಷ್ಟು ಬೇಗ ಬಿಡುಗಡೆಗೊಳಿಸಲು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಅವರಿಗೆ ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾಗರಾಜ್ ಲೋಕಿಕೆರೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾಗರಾಜ್ ಲೋಕಿಕೆರೆ, ಲೋಕಿಕೆರ ಮಂಜುನಾಥ್, ರಾಜು ಮಠದ್, ಕೂಲಂಬಿ ಬಸವರಾಜ್ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.


**ಆಶ್ರಯ ಆಸ್ಪತ್ರೆ**
ಡಾ. ದಿನೇಶ್. ಎಂ. ಜಿ,
M.S, M.ch, F.M.A.S, F.M.A.O.
ಬಿ. ಜಿ. ಎಸ್ ಗ್ಲೋಬಲ್ ಆಸ್ಪತ್ರೆಯ ಖ್ಯಾತ ವೈದ್ಯರು,
ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರು ಮತ್ತು ಉದರ ದರ್ಶಕ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞರು
ಇವರು ಪ್ರತಿ ತಿಂಗಳು ಎರಡನೇ ಮತ್ತು ನಾಲ್ಕನೇ ಶನಿವಾರ
ದಾವಣಗೆರೆಯ ಆಶ್ರಯ ಆಸ್ಪತ್ರೆಯಲ್ಲಿ ಲಭ್ಯವಿರುತ್ತಾರೆ.
ನೋಂದಣಿಗಾಗಿ ಕರೆ ಮಾಡಿ
08192 224679
ಸಮಯ -ಬೆಳಿಗ್ಗೆ-11 ಗಂಟೆಯಿಂದ ಮಧ್ಯಾಹ್ನ -2.30 ಗಂಟೆಯವರೆಗೆ



**MAHA TVS**
WANTED
SERVICE TECHNICIANS
Qualification : ITI / SSLC / PUC
Experience Candidates are 1st Preference
Contact :
90714 11081,70221 15555
MAHA TVS, Hadadi Road, Davanagere.



**GODOWNS & OFFICE SPACE AVAILABLE ON RENT**
AT
RAVI MILLS PREMISES
POONA-BANGALORE ROAD
CONTACT :
M/s R. Hanumanthappa & Son,
# 56/1,2, Hanumanthappa Building,
Poona-Bangalore Road, DAVANGERE-577002.
Phone Nos : (08192) - 258834 / 258836



**ಕಬ್ಬು ಕಟಾವು ಮಾಡುವ ಕುರಿತು ಟೆಂಡರ್ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ, ಕತ್ತಲಗೆರೆಯಲ್ಲಿ $28^{1/2}$ ಎಕರೆಗಳಲ್ಲಿ ಬೆಳೆದಿರುವ ಕಬ್ಬನ್ನು ದಾವಣಗೆರೆ ಸಕ್ಕರೆ ಕಂಪನಿ ನಿಯಮಿತ, ಕುಕ್ಕುವಾಡ, ದಾವಣಗೆರೆ ತಾಲ್ಲೂಕು ಇವರಿಗೆ ಅರೆಯುವುದಕ್ಕೆ ಕಡಿದು ಸರಬರಾಜು ಮಾಡಬೇಕಾಗಿರುವುದರಿಂದ ಆಸಕ್ತಿಯುಳ್ಳವರು ಕಬ್ಬು ಕಟಾವು ಮಾಡುವ ಯಂತ್ರ ಅಥವಾ ಕಾರ್ಮಿಕರುಗಳ ಮೂಲಕವಾಗಲೀ ಕಟಾವು ಮಾಡಿ ಕಾರ್ಖಾನೆಗೆ ಸಾಗಿಸಲು ಪ್ರತಿ ಟನ್ ಕಬ್ಬಿನ ಕಟಾವಿಗೆ ತಮ್ಮ ದರವನ್ನು ಲಿಖಿತ ಮೂಲಕ ಈ ಕೆಳಗೆ ಸಹಿ ಮಾಡಿರುವವರ ಹೆಸರಿಗೆ ಸೀಲ್ಡ್ ಕವರಿನಲ್ಲಿ ತಮ್ಮ ಸಂಪೂರ್ಣ ವಿಳಾಸದೊಂದಿಗೆ ದಿನಾಂಕ : 23.11.2020 ರೊಳಗೆ ಕಛೇರಿಗೆ ತಲುಪುವಂತೆ ನೀಡಬೇಕಾಗಿ ಕೋರಲಾಗುತ್ತದೆ. ಅಲ್ಲದೇ ಆಸಕ್ತಿಯುಳ್ಳವರು ದಿನಾಂಕ 17.11.2020 ರಿಂದ ಕಛೇರಿ ಸಮಯದಲ್ಲಿ ಸದರಿ ಬೆಳೆಯನ್ನು ವೀಕ್ಷಿಸಬಹುದಾಗಿ ತಿಳಿಯಪಡಿಸಲಾಗುತ್ತದೆ.

ಹಿರಿಯ ಕ್ಷೇತ್ರಾಧೀಕ್ಷಕರು
ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ,
ಕತ್ತಲಗೆರೆ- 577219, ಚನ್ನಗಿರಿ ತಾ||



**ಮಾನ್ಯ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ**

ಪಿ ಅಂಡ್ ಎಸ್.ಸಿ.ನಂ 21/2020
**ಅರ್ಜಿದಾರರು :** ಬಿ.ಈಶ್ವರಮ್ಮ ತಂದೆ ಚಂದ್ರಾಚಾರಿ, ವಯಸ್ಸು 47 ವರ್ಷ
ವಾಸ: ಹೊಸಕೆರೆ ಗ್ರಾಮ, ಜಗಳೂರು (ತಾ) ದಾವಣಗೆರೆ (ಜಿ)
**ವಿರುದ್ಧ**
**ಎದುರುದಾರರು :** ಯಾರೂ ಇಲ್ಲಾ
**ಭಾರತೀಯ ಉತ್ತರಾಧಿಕಾರಿ ಅಧಿನಿಯಮ ಕಲಂ 373(1)(ಬಿ) ರ ಅಡಿಯಲ್ಲಿ ನೀಡಲಾದ ಸಾರ್ವಜನಿಕ ಪ್ರಕಟಣಾ ನೋಟಿಸ್**

**ಶ್ರೀ ಚಂದ್ರಾಚಾರಿ ಬಿನ್ ಶಂಕ್ರಪ್ಪ** ಇವರು ಷೆಡ್ಯೂಲ್ ಆಸ್ತಿಗೆ ಸಂಬಂಧ ಪಟ್ಟಂತೆ ನೋಂದಾಯಿತ ವಿಲ್ ದಿನಾಂಕ 16.08.2013 ರಲ್ಲಿ ಉಪ-ನೋಂದಣಾಧಿಕಾರಿಗಳು ಜಗಳೂರು ತಾಲ್ಲೂಕು ಇಲ್ಲಿ ನೋಂದಾವಣೆಯಾಗಿರುವ ನೋಂದಾಯಿತ ವಿಲ್ ಯಾನೆ ಮರಣ ಶಾಸನ ಪತ್ರವನ್ನು ಮಾಡಿಸಿಟ್ಟಿದ್ದು ಇರುತ್ತದೆ ನಂತರ ಸದರಿ ಶ್ರೀ ಚಂದ್ರಾಚಾರಿ ಬಿನ್ ಶಂಕ್ರಪ್ಪ ಇವರು ದಿನಾಂಕ 04.07.2019 ರಂದು ಮರಣ ಹೊಂದಿರುತ್ತಾರೆ. ಕಾರಣ ಮೇಲ್ಕಂಡ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಪ್ರೊಬೇಟ್ ಆದೇಶ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಅರ್ಜಿದಾರರನ್ನು ಹೊರತುಪಡಿಸಿ ಶ್ರೀ ಚಂದ್ರಾಚಾರಿ ಬಿನ್ ಶಂಕ್ರಪ್ಪರವರ ವಾರಸುದಾರರು ಯಾರಾದರೂ ಇದ್ದಲ್ಲಿ ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ : 19.12.2020 ರಂದು ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಿ ಪ್ರಕರಣದಲ್ಲಿ ಹಾಜರಿದ್ದು, ತಕರಾರೇನಾದರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

**-:ಷೆಡ್ಯೂಲ್:-**
ಜಗಳೂರು ತಾಲ್ಲೂಕು ಸೊಕ್ಕೆ ಹೋಬಳಿ ಹೊಸಕೆರೆ ಗ್ರಾಮಕ್ಕೆ ಸೇರಿದ ರಿ.ಸ.ನಂ 79/ಪಿ6 ಇದರ ವಿಸ್ತೀರ್ಣ 3.00 ಎಕರೆ, ಗುಂಟೆ ಇಲ್ಲ, ಆಕಾರ 2-43 ಪೈಸೆ ಇರುವ ಖುಷ್ಕಿ ಜಮೀನಿಗೆ ಚಕ್ಕು ಬಂದಿ.
**ಪೂರ್ವಕ್ಕೆ:** ತಳವಾರ ಸತ್ಯಮೂರ್ತಿ ಇವರ ಜಮೀನು
**ಪಶ್ಚಿಮಕ್ಕೆ:** ಕೆಂಚಮ್ಮನಹಳ್ಳಿ ನಾಗರಾಜ ಇವರ ಜಮೀನು
**ಉತ್ತರಕ್ಕೆ :** ಸಿದ್ದಮ್ಮನವರ ಜಮೀನು
**ದಕ್ಷಿಣಕ್ಕೆ:** ಈರಾಚಾರಿ ಇವರ ಜಮೀನು
ಸಹಿಯೊಂದಿಗೆ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ 12.11.2020 ರಂದು ನೀಡಲಾಗಿದೆ.

**ಅರ್ಜಿದಾರರ ಪರ ವಕೀಲರು**
(ಕೆ.ವಿ. ರುದ್ರೇಶ್), (ಎಸ್.ಎಂ. ಅಜ್ಜಯ್ಯ)
ದಾವಣಗೆರೆ
ದಿನಾಂಕ : 12.11.2020

**ನ್ಯಾಯಾಲಯದ ಆದೇಶದ ಮೇರೆಗೆ**
ಮುಖ್ಯ ಆಡಳಿತಾಧಿಕಾರಿಗಳು,
ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.



**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

# ಸಾಹಿತ್ಯ ಓದಿ, ಬರೆಯಲು ಅಲ್ಲ ಬದುಕಿಗಾಗಿ ಬೇಕು

**ಲೇಖಕ ನಿಷ್ಠಿ ರುದ್ರಪ್ಪ**

ದಾವಣಗೆರೆ, ನ.13- ಸಾಹಿತ್ಯ ಓದಿ, ಬರೆಯಲು ಅಲ್ಲ. ಅದು ಬದುಕಿಗಾಗಿ ಬೇಕು. ಸಾಹಿತ್ಯ ಬೇರೆಯಲ್ಲ. ಬದುಕು ಬೇರೆಯಲ್ಲ ಎಂಬ ಅಭಿಪ್ರಾಯವನ್ನು ಲೇಖಕ, ಬಳ್ಳಾರಿ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ನಿಷ್ಠಿ ರುದ್ರಪ್ಪ ವ್ಯಕ್ತಪಡಿಸಿದರು.

ಅವರು ದಾವಣಗೆರೆ ಗ್ರಂಥ ಸರಸ್ವತಿ ಪ್ರತಿಭಾರಂಗದ ವತಿಯಿಂದ ಹಮ್ಮಿಕೊಂಡಿದ್ದ 'ಕನ್ನಡಕಬ್ಬ ಉಗಾದಿಹಬ್ಬ' ಕನ್ನಡ-ಕನ್ನಡಿಗ-ಕರ್ನಾಟಕ ಕುರಿತ ಅಂತರ್ಜಾಲಿತ ಚಿಂತನಾ ಕಾರ್ಯಕ್ರಮದ 6ನೇ ದಿನದ ಉಪನ್ಯಾಸಕರಾಗಿ ಮಾತನಾಡಿದರು.

ಆದಿ ಕವಿ ಪಂಪ ಹೇಳಿದ ಹಾಗೆ ನಾನು ಸಾಹಿತ್ಯವನ್ನು ಬರೆಯುತ್ತೇನೆ. ಏಕೆಂದರೆ ಜನ ಬದುಕಲೆಂದು ಸಾಹಿತ್ಯವನ್ನು ಬರೆಯುತ್ತೇನೆ. ಪ್ರಾಣಿ-ಪಕ್ಷಿಗಳ ಹಾಗೂ ಮಾನವನ ಬದುಕು ಕೇವಲ ಜೀವಿಸಿ ಸಾಯೋದಕ್ಕೆ ಅಲ್ಲ. ತಾವು ಬದುಕಿದ ರೀತಿ ನಾವು ಸಮಾಜಕ್ಕೆ ಕೊಟ್ಟ ಕೊಡುಗೆ ಉಳಿಯಬೇಕು ಎಂದು ಜನಪದ ಸಾಹಿತ್ಯ ಹೇಳುತ್ತದೆ ಎಂದರು.

ಮಂಕುತಿಮ್ಮನ ಕಗ್ಗ, ರಾಮಾಯಣ, ಮಹಾಭಾರತ ಮಹಾಕಾವ್ಯಗಳು, ಜಾನಪದ ಕಾವ್ಯಗಳನ್ನು ವಾಚಿಸಿ, ಉದಾಹರಣೆ ಸಹಿತ ತಿಳಿಸುವ ಮೂಲಕ ಚಿಂತನೆಗೆ ಹಚ್ಚಿದರು.

ಗ್ರಂಥ ಸರಸ್ವತಿ ಪ್ರತಿಭಾರಂಗದ ಅಧ್ಯಕ್ಷ ಆರ್. ಶಿವಕುಮಾರಸ್ವಾಮಿ ಕುರ್ಕಿ ಸ್ವಾಗತಿಸಿದರು. ಸುಶ್ರಾವ್ಯ ಸಂಗೀತ ಶಾಲೆಯ ಯಶಾ ದಿನೇಶ್ ಹಾಗೂ ಟಿ.ಆರ್. ಹೇಮಂತಕುಮಾರ್ ಭಾವಗೀತೆಗಳನ್ನು ಹಾಡಿದರು. ಐಶ್ವರ್ಯ ವೈ. ಶ್ರವಣ್ ಉಪನ್ಯಾಸಕರ ಪರಿಚಯ ಮಾಡಿಕೊಟ್ಟರು.

# ರಾಣೇಬೆನ್ನೂರಿನಲ್ಲಿ ಜ್ಞಾನತಾಣ



ರಾಣೇಬೆನ್ನೂರು, ನ.13- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾ ಕಚೇರಿಯಲ್ಲಿ ಮೊನ್ನೆ ಏರ್ಪಡಿಸಿದ್ದ ಜ್ಞಾನತಾಣ ಕಾರ್ಯಕ್ರಮವನ್ನು ಬಸವಶ್ರೀ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಭಾರತಿ ಜಂಬಿಗಿ ಉದ್ಘಾಟಿಸಿದರು. ಓಂ ಪಬ್ಲಿಕ್ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ರುಕ್ಮಿಣಿ ಸಾಹುಕಾರ ಅವರು ವಿದ್ಯಾರ್ಥಿಗಳಿಗೆ ಟ್ಯಾಬ್ ವಿತರಣೆ ಮಾಡಿದರು. ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆಯ ನಿತ್ಯಾನಂದ ಕುಂದಾಪುರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಿದರು. ತಾಲ್ಲೂಕು ಯೋಜನಾಧಿಕಾರಿ ಸತೀಶ್ ಶೇಟ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶಶಿಕಲಾ ಸ್ವಾಗತಿಸಿದರು. ಮಂಜುನಾಥ್ ವಂದಿಸಿದರು.

# ಪಾಕ್‌ಗೆ ತಿರುಗೇಟು : 8 ಸೈನಿಕರು ಹತ

**(1ನೇ ಪುಟದಿಂದ)** ಉಗ್ರರನ್ನು ರವಾನಿಸಲು ಯತ್ನ ನಡೆಸಿತ್ತಾದರೂ, ಅದನ್ನು ವಿಫಲಗೊಳಿಸಲಾಗಿದೆ. ಈ ವಾರದಲ್ಲಿ ಎರಡನೇ ಬಾರಿ ನುಸುಳುವಿಕೆಯ ವಿಫಲ ಯತ್ನ ನಡೆಸಲಾಗಿದೆ. ಪಾಕಿಸ್ತಾನದ ಸೈನಿಕ ಠಾಣೆಗಳು ಹಾಗೂ ಬಂಕರ್‌ಗಳ ಮೇಲೆ ದಾಳಿ ನಡೆಸಿರುವ ಹಲವಾರು ವಿಡಿಯೋಗಳನ್ನು ಭಾರತೀಯ ಸೈನ್ಯ ಬಿಡುಗಡೆ ಮಾಡಿದೆ.


**ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಟ್ರಸ್ಟ್ ಅಂಡ್ ಹಾಸ್ಪಿಟಲ್**

ಸಕ್ಕರೆ ಕಾಯಿಲೆ ತಪಾಸಣೆ ಹಾಗೂ ಸಂಶೋಧನಾ ಕೇಂದ್ರ

2ನೇ ಮುಖ್ಯರಸ್ತೆ, ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577002.

36ನೇ ವಿಶ್ವ ಮಧುಮೇಹ ದಿನಾಚರಣೆ -2020

ಸಕ್ಕರೆ ಕಾಯಿಲೆ ಮತ್ತು ಶುಶ್ರೂಷಕರು

ದಿನಾಂಕ 14.11.2020, ಬೆಳಿಗ್ಗೆ 11 ರಿಂದ 1 ರವರೆಗೆ

Virtual Live Meeting :

https://www.facebook.com/alurhospital

https://youtu.be/hIYSoU8VN9M

facebook link

youtube link



# ವಿಶ್ವ ಮಧುಮೇಹ ದಿನ

- ಡಾ. ವರುಣ್ ಚಂದ್ರ ಆಲೂರು
ದಾವಣಗೆರೆ.



ಮೊಟ್ಟ ಮೊದಲನೆಯದಾಗಿ 1991 ರಲ್ಲಿ ವಿಶ್ವ ಮಧುಮೇಹ ದಿನಾಚರಣೆಯನ್ನು ಆಚರಿಸಬೇಕೆಂದು ಇಂಟರ್‌ನ್ಯಾಷನಲ್ ಡಯಾಬಿಟಿಸ್ ಫೆಡರೇಶನ್ (ಐಡಿಎಫ್) ಅರ್ಥಾತ್ ಅಂತರರಾಷ್ಟ್ರೀಯ ಸಕ್ಕರೆ ಕಾಯಿಲೆ ಒಕ್ಕೂಟ ಮತ್ತು ವಿಶ್ವ ಆರೋಗ್ಯ ಸಂಸ್ಥೆಗಳು ನಿರ್ಧರಿಸಿ ಆರಂಭಿಸಿದರು. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಸಕ್ಕರೆ ಕಾಯಿಲೆ ಬಗ್ಗೆ ಅರಿವು ಮೂಡಿಸುವುದು. ನಂತರ ಈ ದಿನಾಚರಣೆಯನ್ನು ಪ್ರತಿವರ್ಷ ನವೆಂಬರ್ 14 ರಂದು ಆಚರಿಸಲು ಒಮ್ಮತದ ನಿರ್ಧಾರಕ್ಕೆ ಬದಲಾಯಿತು . 1922 ರ ನವೆಂಬರ್ 14 ರಂದು ಸರ್ ಫ್ರೆಡರಿಕ್ ಬ್ಯಾಂಟಿಂಗ್ ರವರು ಚಾರ್ಜ್ ಬೆಸ್ಟ್ ಅವರೊಂದಿಗೆ ಇನ್ಸುಲಿನ್ ಕಂಡುಹಿಡಿದ ದಿನ.

ವಿಶ್ವ ಮಧುಮೇಹ ದಿನಾಚರಣೆ ಸಕ್ಕರೆ ಕಾಯಿಲೆ ಬಗ್ಗೆ ಜಾಗೃತಿ ಮೂಡಿಸುವ ಅಭಿಯಾನ ಎಂದು ಹೇಳಬಹುದು. ಇದು ವಿಶ್ವದಾದ್ಯಂತ 160ಕ್ಕೂ ಹೆಚ್ಚು ದೇಶಗಳಲ್ಲಿ ಸುಮಾರು 1 ಬಿಲಿಯನ್ ಜನರಿಗೆ ತಲುಪುವ ಕಾರ್ಯಕ್ರಮ. ಇದರ ಮೂಲಕ ಸಕ್ಕರೆ ಕಾಯಿಲೆಯನ್ನು ವಿಶೇಷವಾಗಿ ತಡೆಗಟ್ಟುವುದು ಮತ್ತು ಕಾಯಿಲೆಯನ್ನು ಹೊಂದಿರುವವರಲ್ಲಿ ನಿಯಂತ್ರಣದ ಬಗ್ಗೆ ತಿಳುವಳಿಕೆ ನೀಡುವುದು ಈ ಅಭಿಯಾನದ ಮುಖ್ಯ ಗುರಿ. ಈ ಅಭಿಯಾನದ ಮೂಲಕ ವಿಶ್ವದಾದ್ಯಂತ ಅನೇಕ ವಲಯಗಳಲ್ಲಿ ಜನರಿಗೆ ಕಾಯಿಲೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ಈ ಅಭಿಯಾನಕ್ಕೆ 2001 ರಲ್ಲಿ 1 ಚಿಹ್ನೆಯನ್ನು ಮಾಡಿಕೊಳ್ಳಲಾಯಿತು. ಇದು ನೀಲಿ ಬಣ್ಣದ ಚಕ್ರ. ಇದು ಸಕ್ಕರೆ




ಕಾಯಿಲೆ ವಿರುದ್ಧ ಹೋರಾಡಲು ಬೇಕಾಗಿರುವ ಏಕತೆಯ ಸಂಕೇತ.

ಅಂದು ಆರಂಭವಾದ ಈ ಅಭಿಯಾನ ಸರಾಗವಾಗಿ ನಡೆಯುತ್ತಾ ಬಂದಿದೆ. ಪ್ರತಿ ವರ್ಷ ಒಂದು ಅರ್ಥಯುತವಾದ ಘೋಷಣೆಯನ್ನು ಹೊಂದಿರುತ್ತದೆ. ಈ ವರ್ಷದ ಘೋಷಣೆ 'ಸಕ್ಕರೆ ಕಾಯಿಲೆ ಮತ್ತು ಶುಶ್ರೂಷಕರು'. ಇದರ ಮೂಲ ಉದ್ದೇಶ ಸಕ್ಕರೆ ಕಾಯಿಲೆಯುಳ್ಳ ವ್ಯಕ್ತಿಗಳ ಆರೈಕೆಯಲ್ಲಿ ಶುಶ್ರೂಷಕರ ಪಾತ್ರ ಎಷ್ಟು ಮುಖ್ಯವಾದುದು ಎಂಬ ವಿಷಯದ ಬಗ್ಗೆ ಒತ್ತು ಕೊಡಲಾಗುವುದು. ಇದರಲ್ಲಿ ಶುಶ್ರೂಷಕರನ್ನು ಪ್ರೋತ್ಸಾಹಿಸಲು ಅವರ ಪಾತ್ರದ ಮಹತ್ವವನ್ನು ಅವರಿಗೂ ಮತ್ತು ಕಾಯಿಲೆಯುಳ್ಳ ವ್ಯಕ್ತಿಗಳಿಗೂ ತಿಳಿಸುವುದು ಇದರ ಉದ್ದೇಶ. ಇದು ಶುಶ್ರೂಷಕರಲ್ಲಿ ಇನ್ನೂ ಹೆಚ್ಚಿನ ಉತ್ಸಾಹ ಹಾಗೂ ಆತ್ಮವಿಶ್ವಾಸವನ್ನು ಹೊಂದಲು ಸಹಾಯಕಾರಿಯಾಗುವುದು. ಇನ್ನೊಂದು ಮುಖ್ಯವಾಗಿ ಗಮನಿಸಬೇಕಾದ ಅಂಶ ಎಂದರೆ ಸಕ್ಕರೆ ಕಾಯಿಲೆಯ ನಿಯಂತ್ರಣದಲ್ಲಿ ಕೆಲಸ ಮಾಡುತ್ತಿರುವವರಲ್ಲಿ ಸುಮಾರು ಅರ್ಧದಷ್ಟು ಶುಶ್ರೂಷಕರೇ ಆಗಿದ್ದಾರೆ. ಅದಲ್ಲದೆ ಸಕ್ಕರೆ ಕಾಯಿಲೆ ನಿಯಂತ್ರಣವಲ್ಲದೆ, ಅದರಿಂದ ಆಗುವ ಅನಾಹುತಗಳನ್ನು ತಡೆಗಟ್ಟುವಲ್ಲಿ ಅವರ ಪಾತ್ರ ಶ್ಲಾಘನೀಯ ಹಾಗೂ ಮಹತ್ವದ್ದಾಗಿದೆ.

ಈ ಕಾಯಿಲೆ ಬಗ್ಗೆ ಉತ್ತಮ ತಿಳುವಳಿಕೆ ಇರುವ ಇವರು ಜೀವನ ಶೈಲಿಯ ಮಹತ್ವವನ್ನು ತಿಳಿಸುತ್ತಾರೆ. ಜೀವನ ಶೈಲಿಯ ಅಗತ್ಯ ಬದಲಾವಣೆಗಳನ್ನು ವೈದ್ಯರು ಮತ್ತು ಶುಶ್ರೂಷಕರು ಪರಿಣಾಮಕಾರಿಯಾಗಿ ಮಾಡುತ್ತಿದ್ದಾರೆ. ಮುಂದುವರೆದ ಅನೇಕ ದೇಶಗಳಲ್ಲಿ ಈ ಬಗ್ಗೆ ಸೂಕ್ತ ಮಾಹಿತಿ ನೀಡಲು ಡಯಾಬಿಟಿಸ್ ಆರೈಕೆಯಲ್ಲಿ ಉತ್ತಮ ಜ್ಞಾನವನ್ನು ಪಡೆದ ಶುಶ್ರೂಷಕರನ್ನು ಬಳಸಿಕೊಳ್ಳಲಾಗುತ್ತದೆ. ಈ ತರದ ವಿಶೇಷ ಶುಶ್ರೂಷಕರ ಸಂಖ್ಯೆ ಕಡಿಮೆ. ವೈದ್ಯರ ಸಲಹೆಯ ಜೊತೆಗೆ ಇವರ ಸೇವೆಯನ್ನು ಚಿಕಿತ್ಸೆಯಲ್ಲಿ ಪರಿಣಾಮಕಾರಿಯಾಗಿ ಬಳಸಿದರೆ ಅತ್ಯುತ್ತಮ ಪರಿಣಾಮ ಬರುವುದರಲ್ಲಿ ಅನುಮಾನವೇ ಇಲ್ಲ.

ಇವರುಗಳ ಜೊತೆ ಮಾನಸಿಕ ವೈದ್ಯರು ಹಾಗೂ ಸಲಹಾಗಾರರ ಪಾತ್ರವೂ ಅಮೂಲ್ಯ. ನ್ಯೂನತೆಗೆ ಒಳಗಾದವರಿಗಂತೂ ಇವರ ಸಲಹೆ ಅಮೂಲ್ಯ. ಏಕೆಂದರೆ ಅವರುಗಳಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸಬಲ್ಲದು. ಇವರೆಲ್ಲರ ಜೊತೆಗೆ ಆಹಾರ ಸಲಹಾ ತಜ್ಞರ ಸಲಹೆಯೂ ಬಹಳ ಅಮೂಲ್ಯವಾದದ್ದು ಎನ್ನಬಹುದು. ಇದಲ್ಲದೆ ತೆರೆಯ ಹಿಂದೆಯೂ ಕೂಡ ಕೆಲವರು ಸಹಾಯ ಮಾಡುತ್ತಾರೆ. ಒಟ್ಟಾರೆಯಾಗಿ ಸಾಂಘಿಕ ಹೋರಾಟದ ಪಾತ್ರ ಅಮೂಲ್ಯವಾದದ್ದು ಎನ್ನಬಹುದು.

ಈ ವರ್ಷದ ಘೋಷಣೆಯ ಬಗ್ಗೆ ಹೇಳಬೇಕೆಂದರೆ ಚಿಕಿತ್ಸೆಯಲ್ಲಿ ಇವರುಗಳ ಪಾತ್ರ ಪರಿಣಾಮಕಾರಿಯಾದದ್ದು ಇವರ ಸಹನೆ, ಸಲಹೆ ಮುಖ್ಯವಾದದ್ದು. ಏಕೆಂದರೆ ಇವರುಗಳು ಕಾಯಿಲೆ ಉಳ್ಳವರಿಗೆ ಆತ್ಮವಿಶ್ವಾಸವನ್ನು ಹೆಚ್ಚಿಸಬಲ್ಲರು. ರೋಗಿಗಳ ಆರೈಕೆಯಲ್ಲಿ ಇವರುಗಳು ವೈದ್ಯರೊಂದಿಗೆ ಚರ್ಚಿಸಬಹುದು. ಏಕೆಂದರೆ ರೋಗಿಗಳ ಆರೈಕೆಯಲ್ಲಿ ಇವರ ಹೆಚ್ಚಿನ ಸಮಯ ವಿನಿಮಯವಾಗುತ್ತದೆ. ಕುಟುಂಬಸ್ಥರಲ್ಲಿ ಕಾಯಿಲೆಯ ಬಗ್ಗೆ ಮಾಹಿತಿ, ಅವರನ್ನು ಮನೆಯಲ್ಲಿ ಆರೈಕೆ ಮಾಡುವ ಬಗ್ಗೆ ಕುಟುಂಬದ ಇತರೆ ಸದಸ್ಯರಿಗೆ ಕಾಯಿಲೆ ಬರದಂತೆ ಅಥವಾ ನಿಯಂತ್ರಿಸುವ ಬಗ್ಗೆ ಸಲಹೆ ಕೊಡಬಲ್ಲರು.

ಒಟ್ಟಾರೆ ಹೇಳಬೇಕೆಂದರೆ ಸಕ್ಕರೆ ಕಾಯಿಲೆ ತಡೆಗಟ್ಟುವಲ್ಲಿ, ಕಾಯಿಲೆಯ ಬಗ್ಗೆ ತಿಳುವಳಿಕೆ ಕೊಡುವುದರಲ್ಲಿ ಹಾಗೂ ನ್ಯೂನತೆ ಉಂಟಾದಲ್ಲಿ ಅವುಗಳಿಂದ ಉತ್ತಮ ಬದುಕನ್ನು ರೂಪಿಸಿಕೊಳ್ಳುವುದರಲ್ಲಿ ಅವರ ಪಾತ್ರ ಶ್ಲಾಘನೀಯ. ಇವರೆಲ್ಲರೊಂದಿಗೆ ಸಹಕರಿಸಿದಲ್ಲಿ ಸಕ್ಕರೆ ಕಾಯಿಲೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿ ಕಾಯಿಲೆ ಉಳ್ಳವರಿಗೆ ಉತ್ತಮ ಜೀವನ ನಡೆಸುವಲ್ಲಿ ಪ್ರೋತ್ಸಾಹಿಸಬಹುದು.

ಇಂದಿನ ಒತ್ತಡದ ಜೀವನ ಶೈಲಿಯಲ್ಲಿ ಸಕ್ಕರೆ ಕಾಯಿಲೆಯ ಪ್ರಮಾಣ ಹೆಚ್ಚಾಗಿ ಕಂಡುಬರುತ್ತಿದೆ. ಇದನ್ನು ಹತೋಟಿಗೆ ತರಲು ಸಾಂಘಿಕ ಪ್ರಯತ್ನ ಬಹಳ ಮುಖ್ಯವಾದದ್ದು. ಸಕ್ಕರೆ ಕಾಯಿಲೆ ಬಗ್ಗೆ ಹೆಚ್ಚಿನ ಅರಿವು ಮೂಡಿಸುವುದು ಅತ್ಯವಶ್ಯಕ. ಈ ನಿಟ್ಟಿನಲ್ಲಿ ವೈದ್ಯರು ಮತ್ತು ಶುಶ್ರೂಷಕರ ಪಾತ್ರ ಮುಖ್ಯವಾದದ್ದು. ಇದರ ಜೊತೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರ, ಮಾಧ್ಯಮ ವರ್ಗದವರು ಒಂದಾಗಿ ಹೋರಾಟ ಮಾಡುವುದು ಇಂದಿನ ಅವಶ್ಯಕತೆ.

# ಪ್ರಮಾಣೀಕೃತ ಹಸಿರು ಪಟಾಕಿಗೆ ಅವಕಾಶ




ದಾವಣಗೆರೆ, ನ. 13- ದೀಪಾವಳಿ ಹಬ್ಬದ ಸಂದರ್ಭದಲ್ಲಿ ಈ ಬಾರಿ ಸಿಎಸ್‌ಐಆರ್ ಮತ್ತು ಎನ್‌ಇಇಆರ್‌ಐ ಪ್ರಮಾಣೀಕೃತ ಹಸಿರು ಪಟಾಕಿಗಳನ್ನು ಮಾತ್ರ ಮಾರಾಟ ಮಾಡುವಂತೆ ಹಾಗೂ ಸಾರ್ವಜನಿಕರು ಬಳಸುವಂತೆ ಸರ್ಕಾರ ಮತ್ತು ರಾಜ್ಯ ಹೈಕೋರ್ಟ್ ನಿರ್ದೇಶನ ನೀಡಿದ್ದು, ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ಹಬ್ಬ ಸಂದರ್ಭದಲ್ಲಿ ನ. 16 ರವರೆಗೆ ಹಸಿರು ಪಟಾಕಿಗಳನ್ನು ಮಾತ್ರ ಪಟಾಕಿ ಮಾರಾಟಗಾರರಿಂದ ಮಾರಾಟ ಮಾಡಲು ಮತ್ತು ಸಾರ್ವಜನಿಕರು ಹಸಿರು ಪಟಾಕಿಗಳನ್ನು ಮಾತ್ರ ಹಚ್ಚಲು ಅನುಮತಿಸಲಾಗಿದೆ ಎಂದರು.

ಪೊಲೀಸ್ ಇಲಾಖೆ, ನಗರಪಾಲಿಕೆ, ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಪ್ರಾಧಿಕಾರಗಳು ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

# ಜವಾಹರ್‌ಲಾಲ್ ಜನ್ಮ ದಿನ : ನಗರದಲ್ಲಿ ಇಂದು ಕಾಂಗ್ರೆಸ್ ನಿಂದ ಮಕ್ಕಳ ದಿನಾಚರಣೆ



ಜಿಲ್ಲಾ ಕಾಂಗ್ರೆಸ್ ವತಿಯಿಂದ ದೇಶದ ಮೊದಲ ಪ್ರಧಾನಿ ಪಂಡಿತ್ ಜವಾಹರ್‌ಲಾಲ್ ನೆಹರು ಅವರ ಜನ್ಮ ದಿನಾಚರಣೆ ಅಂಗವಾಗಿ ಮಕ್ಕಳ ದಿನಾಚರಣೆಯನ್ನು ಇಂದು ಆಚರಿಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾ ಕಾಂಗ್ರೆಸ್ ಕಛೇರಿಯ ಎಸ್ಸೆಸ್ ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

# ನಗರದಲ್ಲಿ ಧನ್ವಂತರಿ ಹೋಮ



ದಾವಣಗೆರೆ, ನ.13- ಧನ್ವಂತರಿ ಜಯಂತಿ ಪ್ರಯುಕ್ತ ನಗರದ ಅನ್ವಯ ಆಯುರ್ವೇದ ಆಸ್ಪತ್ರೆಯಲ್ಲಿ ಧನ್ವಂತರಿ ಹೋಮವನ್ನು ಲೋಕಕಲ್ಯಾಣಾರ್ಥವಾಗಿ ಮತ್ತು ಮನುಕುಲದ ಆರೋಗ್ಯವೃದ್ಧಿಗೆ ನಡೆಸಲಾಯಿತು. ಆಸ್ಪತ್ರೆಯ ನಿರ್ದೇಶಕರು ಮತ್ತು ಮುಖ್ಯ ವೈದ್ಯ ಡಾ. ದರ್ಶನ್ ಬಾಬು ಅವರು ವೇದಗಳ ಅನುಶಾಸನದಂತೆ ಮುಖ್ಯ ಅರ್ಚಕರಾದ ಕೃಷ್ಣಪ್ರಸನ್ನ ಆಚಾರ್, ವೆಂಕಟರಾಘವನ್, ಲೋಹಿತ್ ಅವರು ಧನ್ವಂತರಿ ಹೋಮವನ್ನು ನೆರವೇರಿಸಿದರು. ಸಹ ನಿರ್ದೇಶಕ ನಂದಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಕೊಂಡಜ್ಜಿಯಲ್ಲಿ ಇಂದು ಕೊಂಡಜ್ಜಿ ಬಸಪ್ಪನವರ 38ನೇ ಪುಣ್ಯ ಸ್ಮರಣೆ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಜ್ಯ ಸಂಸ್ಥೆ ವತಿಯಿಂದ ಕೊಂಡಜ್ಜಿ ಬಸಪ್ಪನವರ 38ನೇ ಪುಣ್ಯ ಸ್ಮರಣೆ ಹಾಗೂ ಸರ್ವಧರ್ಮ ಪ್ರಾರ್ಥನೆಯನ್ನು ಇಂದು ಬೆಳಿಗ್ಗೆ 9 ಗಂಟೆಗೆ ಕೊಂಡಜ್ಜಿ ಬಸಪ್ಪ ರಾಜ್ಯ ಸ್ಕೌಟ್ ಗೈಡ್ ತರಬೇತಿ ಕೇಂದ್ರ, ಕೊಂಡಜ್ಜಿ, ಹರಿಹರ ತಾಲ್ಲೂಕು ಇಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮಕ್ಕೆ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್ ಸಿಂಧ್ಯಾ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಉಪಾಧ್ಯಕ್ಷ ಕೊಂಡಜ್ಜಿ ಬಿ. ಷಣ್ಮುಖಪ್ಪ ಭಾಗವಹಿಸಲಿದ್ದಾರೆ.


॥ ಶ್ರೀ ನಂದಿ ॥

**ಶ್ರೀ ಅಜ್ಜಯ್ಯ ಕೃಪ ಎಂಟರ್‌ಪ್ರೈಸಸ್**

ಬಸ್ ಸ್ಟ್ಯಾಂಡ್, ತೇರು ಮನೆ ಹತ್ತಿರ, ಉಕ್ಕಡಗಾತ್ರಿ, ಹರಿಹರ ತಾ॥, ದಾವಣಗೆರೆ ಜಿ॥

**ದೀಪಾವಳಿ ಹಬ್ಬದ ಭರ್ಜರಿ ಬಂಪರ್ ಆಫರ್**

ಸ್ಪ್ರಿಂಗ್ ಮ್ಯಾಟರ್ಸ್ ಒಂದು ಕೊಂಡಲ್ಲಿ ಒಂದು ಫೋಮ್ ಮ್ಯಾಟರ್ಸ್ ಉಚಿತ ವಾಗಿ ಪಡೆಯಿರಿ.




ಉಚಿತ ಹೋಮ್ ಡಿಲೆವರಿಗಾಗಿ ಸಂಪರ್ಕಿಸಿರಿ : ಜಿ.ಎಸ್. ಅಜಯ್‌ಗೌಡ-9148565185, 6362632322


# ರೈಲು ಮಾರ್ಗ ಭೂಸ್ವಾಧೀನ ಪ್ರಕ್ರಿಯೆ ಶೀಘ್ರ ಮುಗಿಸಲು ಮನವಿ

ದಾವಣಗೆರೆ, ನ.13- ತುಮಕೂರು-ಚಿತ್ರದುರ್ಗ-ದಾವಣಗೆರೆ ನೇರ ರೈಲು ಮಾರ್ಗ ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರವೇ ಮುಗಿಸುವಂತೆ ಹಾಗೂ ಕೆಲವು ರೈಲು ಗಾಡಿಗಳನ್ನು ವಿಸ್ತರಿಸುವ ಕುರಿತು ನೈರುತ್ಯ ರೈಲ್ವೆ ವಲಯ ಪ್ರಯಾಣಿಕರ ಸಂಘದಿಂದ ರೈಲ್ವೆ ಬೋರ್ಡ್ ಚೇರ್ಮನ್ ವಿನೋದ್ ಕುಮಾರ್ ಯಾದವ್ ಅವರಿಗೆ ಪತ್ರ ಬರೆಯಲಾಗಿದೆ ಎಂದು ಸಂಘದ ರೋಹಿತ್ ಎಸ್. ಜೈನ್ ತಿಳಿಸಿದ್ದಾರೆ.

# ಸಹಕಾರಿ ಅಧ್ಯಕ್ಷರಾಗಿ ಧನ್ಯಕುಮಾರ್



ದಾವಣಗೆರೆ, ನ.13- ಬಿ. ಕಲಪನಹಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಯು.ಕೆ. ಧನ್ಯ ಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಡಿ.ಎಸ್. ಸುರೇಂದ್ರ ಘೋಷಿಸಿದ್ದಾರೆ.

# ರಿಯಾಯಿತಿ ದರದಲ್ಲಿ ಪುಸ್ತಕ ಮಾರಾಟ

ದಾವಣಗೆರೆ ನ. 13- ಕನ್ನಡ ರಾಜ್ಯೋತ್ಸವದ ಅಂಗವಾಗಿ ನವೆಂಬರ್ ತಿಂಗಳು ಪೂರ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲಾ ಪುಸ್ತಕಗಳನ್ನು ಶೇ.50ರ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.

ಜಿಲ್ಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದಿಂದ ತೆರೆಯಲಾಗಿರುವ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಈ ರಿಯಾಯಿತಿ ಸೌಲಭ್ಯ ದೊರೆಯಲಿದೆ. ಅಲ್ಲದೇ ಕನ್ನಡ ಪುಸ್ತಕ ಪ್ರಾಧಿಕಾರದ ಆನ್‌ಲೈನ್, ಅಂಚೆ ಮೂಲಕವೂ ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಪಡೆಯಬಹುದು. ಕನ್ನಡ ಕೃತಿಗಳನ್ನು ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬ ಉದ್ದೇಶ ಕನ್ನಡ ಪುಸ್ತಕ ಪ್ರಾಧಿಕಾರದ್ದಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ತಿಳಿಸಿದ್ದಾರೆ.


**ಹೃದಯಪೂರ್ವಕ ಕೃತಜ್ಞತೆಗಳು**




ದಿನಾಂಕ : 12.11.2020ರಂದು ನಡೆದ ಮಲೇಬೆನ್ನೂರು ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರ ಚುನಾವಣೆಯಲ್ಲಿ ನನ್ನನ್ನು ಅವಿರೋಧವಾಗಿ ಆಯ್ಕೆ ಮಾಡಿದ ಸಂಘದ ಎಲ್ಲಾ ನಿರ್ದೇಶಕರಿಗೂ, ನನ್ನ ಆಯ್ಕೆಗೆ ಸಹಕರಿಸಿದ ಪಟ್ಟಣದ ಎಲ್ಲಾ ಮುಖಂಡರಿಗೂ ಮತ್ತು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನನ್ನ ಹೃದಯಪೂರ್ವಕ ಕೃತಜ್ಞತೆಗಳು...



ಸರ್ವರಿಗೂ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು...



ಶ್ರೀಮತಿ ನಾಗರತ್ನಮ್ಮ ಕೆ.ಜಿ. ಪರಮೇಶ್ವರಪ್ಪ
ಅಧ್ಯಕ್ಷರು

**ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಮಲೇಬೆನ್ನೂರು.**


# ದೈವದ ಚಿಂತನೆ ನನ್ನ ಕಾವ್ಯಗಳ ಮುಖ್ಯವಾದ ವಸ್ತು : ಡಾ.ಹೆಚ್.ಎಸ್.ವಿ

ದಾವಣಗೆರೆ, ನ.13- ಸುಮಾರು ಆರು ದಶಕಗಳಿಂದ ಕಾವ್ಯ, ಕಥೆ, ಕಾದಂಬರಿ, ಮಕ್ಕಳ ಸಾಹಿತ್ಯ ವಿಮರ್ಶೆ ಹೀಗೆ ಬೇರೆ ಬೇರೆ ಪ್ರಕಾರಗಳಲ್ಲಿ ಕೆಲಸ ಮಾಡಿದ್ದೇನೆ. ಆದರೆ, ನನಗೆ ವಿಶೇಷವಾಗಿ ಪ್ರಿಯವಾದದ್ದು ಕಾವ್ಯ ಮಾಧ್ಯಮ ಎಂದು ಖ್ಯಾತಕವಿ ಡಾ. ಹೆಚ್.ಎಸ್. ವೆಂಕಟೇಶಮೂರ್ತಿ ತಿಳಿಸಿದರು.

ಗ್ರಂಥ ಸರಸ್ವತಿ ಪ್ರತಿಭಾರಂಗ ನಡೆಸುತ್ತಿರುವ ಕನ್ನಡಕಬ್ಬ ಯುಗಾದಿಹಬ್ಬ ಅಂತರ್ಜಾಲಿತ ಕಾರ್ಯಕ್ರಮದ ಏಳನೇ ದಿನದ ಉಪನ್ಯಾಸ ಕಾರ್ಯಕ್ರಮದಲ್ಲಿ ಖ್ಯಾತ ಕವಿಗಳಾದ ಹೆಚ್.ಎಸ್.ವೆಂಕಟೇಶ್ ಮೂರ್ತಿ ಅವರು 'ನಾನು ಮತ್ತು ನನ್ನ ಕವಿತೆ' ಎಂಬ ವಿಷಯವನ್ನು ಕುರಿತು ಮಾತನಾಡಿದರು.

ದೈವದ ಚಿಂತನೆ ನನ್ನ ಕಾವ್ಯಗಳಲ್ಲಿ ಮುಖ್ಯ ವಾದ ವಸ್ತು. ನಮ್ಮನ್ನು ಕಾಪಾಡುವ ಶಕ್ತಿಯನ್ನು ಆರಾಧನೆ ಮಾಡುವುದು ನನ್ನ ಕವಿತೆಯ ಸ್ವರೂಪ ಅಲ್ಲ. ದೈವ ಅನ್ನುವುದು ಅದ್ಭುತವಾದ ಮನುಷ್ಯನ ಮನಸ್ಸು ನಿರ್ಮಿಸಿದ ಶಕ್ತಿ ವಿಶೇಷ. ನಾವೇ ನಿರ್ಮಿಸಿದ ಇದು ನಮಗೆ ಹೇಗೆ ಶಾಂತಿಯನ್ನು, ಸಮಾಧಾನವನ್ನು, ಕ್ಷಮತೆಯನ್ನು ನೀಡುತ್ತದೆ ಎಂಬುದನ್ನು ನನ್ನ ಕವಿತೆಗಳು ಹೇಳುತ್ತವೆ ಎಂದು ಅವರು ತಿಳಿಸಿದರು.

'ಪ್ರಾಚೀನ ಕವಿಗಳ ಕವಿತೆಗಳಲ್ಲಿ ಕನ್ನಡ ನಾಡುನುಡಿಯ ವರ್ಣನೆ' ಕುರಿತು ಮಾತನಾಡಿದ ಶಿವಕುಮಾರಸ್ವಾಮಿ ಕುರ್ಕಿ ಅವರು, ಕವಿರಾಜ ಮಾರ್ಗಕಾರ ಶ್ರೀವಿಜಯನು ನಮ್ಮ ಕನ್ನಡದ ಜನಪದರು ಅಕ್ಷರಸ್ಥರಲ್ಲದಿದ್ದರೂ ಕಾವ್ಯಪ್ರಯೋಗ ಪರಿಣತರಾಗಿದ್ದರು ಎಂದಿದ್ದಾನೆ.

ನಯಸೇನನು ಕನ್ನಡವು ಕೆಲವು ಪಂಡಿತರಿಂದ ಸಂಸ್ಕೃತಮಯ ಆಗುವುದನ್ನು ಸಹಿಸದೇ ಶುದ್ಧ ಕನ್ನಡವೇ ಇರಬೇಕೆಂದು ಬಯಸಿದ್ದಾನೆಂದು ಶಿವಕುಮಾರಸ್ವಾಮಿ ಅವರು ಕವಿಗಳ ಕಾವ್ಯಗಳನ್ನು ರಾಗವಾಗಿ ಹಾಡಿ ಸರಳವಾಗಿ ವಿವರಿಸಿದರು.

ಮುಂದುವರೆದು ಮಾತನಾಡಿದ ಅವರು, ಮಹಲಿಂಗ ರಂಗಕವಿ ಕನ್ನಡವು ಹೇಗೆ ಸರಳ, ಸುಂದರ ಎಂಬುದನ್ನು ಹಲವು ಉಪಮೆಗಳೊಂದಿಗೆ ಹೊಗಳಿ ಸಂಸ್ಕೃತಕ್ಕಿಂತ ಕನ್ನಡ ಯಾವುದರಲ್ಲೂ ಕಡಿಮೆಯಿಲ್ಲ ಎನ್ನುತ್ತಾರೆ.

ಹಾಗೆಯೇ ಆಂಡಯ್ಯ ಕವಿ ಕನ್ನಡ ನಾಡಿನ ಪ್ರಕೃತಿಯ ರಮ್ಯತೆಯನ್ನು ಮೆಚ್ಚಿ ವರ್ಣಿಸುತ್ತಾನೆ. ಹೀಗೆ ಕನ್ನಡ ನಾಡಿನ ಪ್ರಕೃತಿ, ಸಂಸ್ಕೃತಿ ಹಾಗೂ ಭಾಷಾ ಹಿರಿಮೆಗಳನ್ನು ವಿವಿಧ ಪ್ರಾಚೀನ ಕವಿಗಳು ವರ್ಣಿಸಿದ್ದಾರೆ ಎಂದು ತಿಳಿಸಿದರು.

ಗಾಯಕಿ ವಿ.ಎಸ್.ಮಾನಸ, ಡಾ.ಹೆಚ್ಚೆಸ್ವಿ ಅವರ ಭಾವಗೀತೆಗಳನ್ನು ಹಾಡಿದರು. ಶ್ರೀಮತಿ ಐಶ್ವರ್ಯ ವೈಶ್ರವಣ ಅವರು ಉಪನ್ಯಾಸಕರ ಪರಿಚಯ ಮಾಡಿಕೊಟ್ಟರು.

## ಭಾವ ಬೆಳಕು

ದೀಪವ ಹಚ್ಚೋಣ ನಾವೆಲ್ಲಾ
ಹೃನ್ಮನದಿ ದೀಪವ ಬೆಳಗೋಣ
ಜಗದ ಏಳಿಗೆಗೆ ಭಾವಮಿಶ್ರಿತರಾಗಿ
ಶಾಂತಿ ದೀಪವನೆಲ್ಲೆಡೆ ಹಚ್ಚೋಣ.

ಅಣು ಅಣುವಿನ ಕಣದಲ್ಲಿ
ಕಾಣದ ಹೊಳಪಿನ ಹೊಳಪಲ್ಲಿ
ಭಕ್ತಿ- ಭಾವದ ಚೈತನ್ಯದಲಿ
ಜಗವು ಬೆಳಗಲಿ ಹೊಂಬೆಳಕಲ್ಲಿ.

ದೀಪದ ಅಡಿಯಲ್ಲಿ ಅವಿತಿಹುದು
ಕತ್ತಲದು ಹೆದರಿ ಭಯಭೀತನಾಗಿ
ದೂರದಿ ಸರಿಸಿ ದೀಪವ ಬೆಳಗಿಸಿ
ಸಾಲು ಸಾಲಿನಲಿ ದೀವಿಗೆ ಹಚ್ಚಿ.

ಮನದ ಕೊಳೆಯನು ತೊಳೆದು
ಆತ್ಮಸಾಕ್ಷಿಯಲಿ ಹೊಳೆದು
ಎಣ್ಣೆ ಬತ್ತಿಯ ದೀಪವ ಬೆಳಗಿಸಿ
ಮಣ್ಣ ಹಣತೆಯಲಿ ಮಿಂಚು ತುಂಬಿ.

ಆಕಾಶದಲಿ ಮಿನುಗು ನಕ್ಷತ್ರಗಳು
ಭುವಿಯ ಬೆಳಗಿದ ಪುಣ್ಯಾತ್ಮರು
ಆತ್ಮಶಾಂತಿಯ ದೀಪವ ಹಚ್ಚಿ
ಆಕಾಶ ಬುಟ್ಟಿಯಲ್ಲಿಟ್ಟು
ನೆನೆಯೋಣ.

ಸಿಡಿಸದೇ ಇರೋಣ ಸಿಡಿಮದ್ದನ್ನು
ಸದ್ದು ಗದ್ದಲವೇಕೆ ಬೆಳಕೇ ಸಾಕು
ಹರಡಲೆಲ್ಲಡೆ ಶಾಂತ ಹೊಂಬೆಳಕು
ಚಿಮ್ಮಲಿ ಕಣ್ಮಣಿಯ ಮಿಂಚಿನಲಿ.

**- ವೀಣಾ ಕೃಷ್ಣಮೂರ್ತಿ,**
ದಾವಣಗೆರೆ.

## 'ಕನ್ನಡಾಮೃತದ ನವನೀತ'

ಗಡಿಗಳ ದಾಟಿ ಗೆರೆಗಳ ಮೀಟಿ
ಹರಡಲಿ ಹಬ್ಬಲಿ ಕನ್ನಡ ಪ್ರೇಮ...
ವರ್ಷದೊಂದೇ ಮಾಸಕೆ
ಹಳಸದಿರಲಿ
ಅಪರಿಮಿತ ಅಭಿದಾನದ ಹೇಮ....
ಅನುದಿನವೂ ಅನುಕ್ಷಣವೂ
ಅನುರಣಿಸುತ ಬಾನಂಗಳದಿ
ಹಾರಾಡಲಿ ಕನ್ನಡದಕ್ಕರದ ಅಕ್ಕರೆಯ
ವ್ಯೋಮ....

ಕಾಗುಣಿತದ ಬಳ್ಳಿಯಲರಳಲಿ
ಅಭಿಮಾನದ ಪುಷ್ಪಗಳು
ಕೀಳರಿಮೆಯ ಕಳೆ ಕಿತ್ತೆಸೆದು
ಬಿತ್ತೋಣ ಬೀಜವನು ಹದವರಿತ
ಎದೆ ಬಯಲಲಿ ಹಗಲಿರುಳು....
ಹುಲುಸಾಗಿ ಬೆಳೆಯಲಿ ಕನ್ನಡದ
ಸ್ವಾಭಿಮಾನದ ಫಸಲು....
ದಿಗ್ದಿಗಂತದುದ್ದಗಲಕ್ಕೂ ಪಸರಿಸಲಿ
ಸಿರಿ ಚಂದನದ ಘಮಲು...

ಆಧುನಿಕತೆಯ ಸೋಗಿನಲ್ಲಿ
ಸೋಗಲಾಡಿತನದ ಗುಂಗಿನಲ್ಲಿ
ಜಾನಪದದ ಸೊಗಡು
ನಲುಗದಿರಲಿ....
ನವ ಪೀಳಿಗೆಗೂ ರುಚಿಸಲಿ
ಕನ್ನಡಾಮೃತದ ನಾವೀನ್ಯದ
ನವನೀತ....
ಕಲಬೆರಕೆಯ ಅಭಿರುಚಿಗೆ ನಾಲಿಗೆ
ನಂಜಾಗದಿರಲಿ
ಕನ್ನಡಿಗರ ಔದಾರ್ಯದ ಕಣ್ಣು
ಮಂಜಾಗದಿರಲಿ...!?

**- ಮಹಾಂತೇಶ್.ಬಿ.ನಿಟ್ಟೂರ್**
ದಾವಣಗೆರೆ.

## ಮರೆತೇ ಹೋಗಿದೆ ಶಾಲೆಯ ದಾರಿ !?

ಮರೆತೇ ಹೋಗಿದೆ ಶಾಲೆಯ ದಾರಿ
ಹುಡುಕಲೇ ಬೇಕಿನ್ನು,
ಆನ್‌ಲೈನ್ ಕ್ಲಾಸು ಕಣ್ಣೆಲ್ಲಾ ಉರಿ
ನಿಲ್ಲಿಸಬೇಕಿನ್ನು.

ನೆಟ್ಟಗಾದವು ಮಕ್ಕಳ ಬೆನ್ನುಹುರಿ
ಹೊರದೇ ಬ್ಯಾಗನ್ನು,
ಸಮವಸ್ತ್ರವನು ತೊಡುವುದು ಹೇಗ್ರೀ
ತೋರಿಸಬೇಕಿನ್ನು.

ಕರೆವರು ಮಕ್ಕಳ ಕೂಲಿ ತೋರಿ
ತಂದು ಟ್ರ್ಯಾಕ್ಟರನು,
ಹಣದಾಸೆಯಿಂದ ಕಳಿಸಬೇಡಿರಿ
ಚಿಂತಿಸಿ ಭವಿಷ್ಯವನು.

ಎಲ್ಲ ಕಾರಣ ಕೋವಿಡ್ ಮಾರಿ
ಪಾಲಿಸಿ ನಿಯಮವನು,
ಶಿಕ್ಷಣದಿಂದಲೇ ಸಾರ್ಥಕ ಕಾಣಿರಿ
ಬಿಡದಿರಿ ಓದನ್ನು
ಬಿಡದಿರಿ ಓದನ್ನು.

**-ಹೆಚ್.ಬಿ.ಮಂಜುನಾಥ್,**
ಹಿರಿಯ ಪತ್ರಕರ್ತ

# ಸುಭಾನ್ ರಿಂದ ಕೊರೊನಾ ಜಾಗೃತಿ

ದಾವಣಗೆರೆ, ನ.13- ಹೆಲ್ಪ್‌ಲೈನ್ ರೂರಲ್ ಡೆವಲಪ್‌ಮೆಂಟ್ ಆರ್ಗನೈಜೇಷನ್ ಪ್ರಧಾನ ಕಾರ್ಯದರ್ಶಿ ಹೆಲ್ಪ್‌ಲೈನ್ ಸುಭಾನ್ ಅವರಿಂದ 'ಕೊರೊನಾ ಭಯಬೇಡ ಜಾಗೃತಿ ಇರಲಿ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸ್ವಯಂ ಪ್ರೇರಣೆಯಿಂದ ಕೊರೊನಾ ಜಾಗೃತಿ ಮೂಡಿಸಿದ ಸುಭಾನ್ ಅವರು ಮನೆ ಮನೆಗೆ ತೆರಳಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರನ್ನು ಕೊರೊನಾ ಭಯದಿಂದ ಮುಕ್ತಗೊಳಿಸುವ ಪ್ರಯತ್ನ ಮಾಡಿದ್ದು, ಸಾರ್ವಜನಿಕರು ಹಾಗೂ ವೈದ್ಯರು ಸುಭಾನ್ ಅವರ ಸೇವೆಯನ್ನು ಅಭಿನಂದಿಸಿದ್ದಾರೆ.

# ಅವ್ಯವಸ್ಥೆಯ ಆಗರವಾದ ಕುಂದವಾಡ ಕೆರೆ: ದಿನೇಶ್ ಶೆಟ್ಟಿ ಆರೋಪ



**ಸ್ವಚ್ಛತೆ ಇಲ್ಲದೇ ಬೇಕಾಬಿಟ್ಟಿಯಾಗಿ ಬೆಳೆದ ಗಿಡಗಂಟಿಗಳು ಮಹಾನಗರ ಪಾಲಿಕೆ ನಿರ್ಲಕ್ಷ್ಯದಿಂದ ಕೆರೆಯಲ್ಲಿ ಮಲಿನ**

ದಾವಣಗೆರೆ, ನ.12- ನಗರದ ಜನತೆಗೆ ಜೀವನಾಡಿ ಎಂತಿರುವ ಕುಂದವಾಡ ಕೆರೆ ಇಂದು ಮಹಾನಗರ ಪಾಲಿಕೆಯ ನಿರ್ಲಕ್ಷ್ಯ ಧೋರಣೆಯಿಂದಾಗಿ ಮಲಿನಗೊಳ್ಳುತ್ತಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಅವರು ದೂರಿದ್ದಾರೆ.

ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ದೂರದೃಷ್ಟಿಯಿಂದ ನಿರ್ಮಾಣವಾದ ಈ ಕೆರೆ, ಜಿಲ್ಲೆಯ ಜನತೆಯ ನೀರಿನ ದಾಹವನ್ನು ತೀರಿಸುತ್ತಿದ್ದು, ಇಂತಹ ಕೆರೆಯ ಆವರಣ ನಿರ್ವಹಣೆ ಇಲ್ಲದೇ ಅವ್ಯವಸ್ಥೆಯ ಆಗರವಾಗಿದೆ ಎಂದು ಆರೋಪಿಸಿದ್ದಾರೆ.

ಕುಂದುವಾಡ ಕೆರೆ ಕೇವಲ ನೀರು ಸರಬರಾಜು ಕೇಂದ್ರವಾಗಿರದೇ ವಾಯುವಿಹಾರಿಗಳಿಗೆ ಅನುಕೂಲವಾ ಗಿದೆ. ಜಿಲ್ಲಾಧಿಕಾರಿಗಳು ಸೇರಿದಂತೆ ಸಾವಿರಾರು ಜನರು ಪ್ರತಿನಿತ್ಯ ವಾಯುವಿಹಾರ ಮಾಡುತ್ತಿದ್ದಾರೆ. ಆದರೆ, ವಾಕಿಂಗ್‌ಪಾತ್‌ನಲ್ಲಿ ಸಾಕಷ್ಟು ಗಿಡ-ಗಂಟಿಗಳು ಬೆಳೆದು, ಹಾವು ಮುಂಗಸಿಗಳ ತಾಣವಾಗಿದೆ. ವಾಯುವಿಹಾರಿಗಳಿಗೆ ತೊಂದರೆ ಆಗಿದ್ದರೂ ಸಹ ಮಹಾನಗರ ಪಾಲಿಕೆ ಆಡಳಿತ ಕಂಡು ಕಾಣದಂತೆ ವರ್ತಿಸುತ್ತಿದೆ ಎಂದಿದ್ದಾರೆ.

ಭದ್ರಾ ನದಿಯಿಂದ ಕಾಲುವೆಗೆ ನೀರು ಹರಿಸಿದ್ದರೂ ಸಹ ಕೆರೆಯನ್ನು ತುಂಬಿಸಿಕೊಳ್ಳದೇ ನಿರ್ಲಕ್ಷ್ಯ ವಹಿಸಿದ್ದು, ನೀರು ಮಲಿನವಾಗುತ್ತಿದೆ. ಕೆರೆಯಲ್ಲೂ ಸಹ ಸಾಕಷ್ಟು ಗಿಡ-ಗಂಟಿಗಳು ಬೆಳೆದಿವೆ. ಎಂದು ತಿಳಿಸಿದ್ದಾರೆ.

ಮಹಾನಗರ ಪಾಲಿಕೆಯಾಗಲೀ, ಜಿಲ್ಲಾಡಳಿತವಾಗಲೀ ಕೆರೆಯನ್ನು ಶೀಘ್ರ ಸ್ವಚ್ಛಗೊಳಿಸಿ, ನಾಗರಿಕರಿಗೆ ಶುದ್ಧ ಕುಡಿ ಯುವ ನೀರನ್ನು ಒದಗಿಸುವುದರ ಜೊತೆಗೆ ಕೆರೆಯ ವಾಕಿಂ ಗ್‌ಪಾತ್‌ನ್ನು ಸ್ವಚ್ಛಗೊಳಿಸಬೇಕೆಂದು ಅವರು ಆಗ್ರಹಿಸಿದ್ದಾರೆ.

# 17ರಿಂದ ಕಾಲೇಜು ಆರಂಭಿಸಲು ದಾವಣಗೆರೆ ವಿವಿ ಸಜ್ಜು

## ಕಾಲೇಜುಗಳ ಪ್ರಾಚಾರ್ಯರು, ವಿಭಾಗದ ಮುಖ್ಯಸ್ಥರ ಸಭೆಯಲ್ಲಿ ಕುಲಪತಿ ಪ್ರೊ. ಹಲಸೆ

ದಾವಣಗೆರೆ, ನ.13- ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳನ್ನು ಇದೇ ದಿನಾಂಕ 17ರಂದು ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಕೋವಿಡ್-19ರ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದ ಜೊತೆಗೆ ಅವರ ಆರೋಗ್ಯ ರಕ್ಷಣೆಗೆ ಮೊದಲ ಆದ್ಯತೆ ನೀಡಲಾಗುತ್ತಿದೆ ಎಂದು ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ತಿಳಿಸಿದರು.

ಶುಕ್ರವಾರ ಆನ್‌ಲೈನ್‌ನಲ್ಲಿ ನಡೆದ ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸಂಲಗ್ನ ಕಾಲೇಜುಗಳ ಪ್ರಾಚಾರ್ಯರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕೋವಿಡ್-19ರ ಎಲ್ಲ ಮೂಲ ಮತ್ತು ಸಾಮಾನ್ಯ ಸುರಕ್ಷತಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವರ್ಷವನ್ನು 8 ತಿಂಗಳ ನಂತರ ಮತ್ತೆ ಆರಂಭಿಸಲಾಗುತ್ತಿದೆ ಎಂದು ಹೇಳಿದರು.

ಯುಜಿಸಿ ಮತ್ತು ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಸೂಚಿಸಿದ ಎಲ್ಲ ಸೂಚನೆ ಮತ್ತು ನಿಯಮಾವಳಿಗಳನ್ನು ಯಥಾವತ್ತಾಗಿ ಅನುಷ್ಠಾನಕ್ಕೆ ತರಲು ಎಲ್ಲ ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಕಟ್ಟುನಿಟ್ಟಿನ ಆದೇಶ ಮಾಡಲಾಗಿದೆ. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯ ಆರೋಗ್ಯದ ನಿರಂತರ ಮೇಲ್ವಿಚಾರಣೆಯ ಉದ್ದೇಶದಿಂದ ವಿಶ್ವವಿದ್ಯಾನಿಲಯ, ಸ್ನಾತಕೋತ್ತರ ಕೇಂದ್ರಗಳು ಮತ್ತು ಎಲ್ಲ ಕಾಲೇಜುಗಳಲ್ಲಿ ಕೋವಿಡ್ ನಿಯಂತ್ರಣ ಕೇಂದ್ರ ಸ್ಥಾಪಿಸಿ, ನೋಡಲ್ ಅಧಿಕಾರಿ ನೇಮಿಸಲಾಗುತ್ತಿದೆ. ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಮಾತ್ರ ತರಗತಿಗಳು ನಡೆಯಲಿವೆ. ಆನ್‌ಲೈನ್‌ನಲ್ಲೂ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗುವ ವ್ಯವಸ್ಥೆ ಮಾಡಿಕೊಳ್ಳಲು ಸೂಚಿಸಲಾಗಿದೆ ಎಂದರು.

ದೈಹಿಕವಾಗಿ ತರಗತಿಗೆ ಹಾಜರಾಗಲು ಇಚ್ಛಿಸುವ ವಿದ್ಯಾರ್ಥಿಗಳು ಕೋವಿಡ್-19 ಪರೀಕ್ಷೆಯ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯ. ಮಾಸ್ಕ್ ಧಾರಣೆ, ಸ್ಯಾನಿಟೈಸರ್ ಬಳಕೆ, ಸಾಮಾಜಿಕ ಅಂತರ ಕಾಪಾಡುವುದರ ಜೊತೆಗೆ ವೈಯಕ್ತಿಕ ಜವಾಬ್ದಾರಿಯ ಬಗ್ಗೆ ಪಾಲಕರಿಂದ ಅನುಮತಿ ಪತ್ರವನ್ನೂ ಸಲ್ಲಿಸಬೇಕು. ಜೊತೆಗೆ ಸರ್ಕಾರ ಮತ್ತು ವಿಶ್ವವಿದ್ಯಾನಿಲಯದ ನಿಯಮಗಳನ್ನು ಪಾಲಿಸುವುದಾಗಿ ವೈಯಕ್ತಿಕ ಮುಚ್ಚಳಿಕೆ ಪತ್ರವನ್ನು ಬರೆದುಕೊಡುವುದನ್ನೂ ಸಹ ಕಡ್ಡಾಯ ಮಾಡಲಾಗಿದೆ. ವಿದ್ಯಾರ್ಥಿಗಳು ದೈಹಿಕವಾಗಿ ಹಾಜರಾಗಲು ಸಾಧ್ಯವಾಗದಿದ್ದರೆ ಆನ್‌ಲೈನ್‌ನಲ್ಲೂ ಪಾಲ್ಗೊಳ್ಳಬಹುದು. ಹಾಜರಾತಿ ಕಡ್ಡಾಯಗೊಳಿಸಿಲ್ಲ. ಆರಂಭದಲ್ಲಿ ಬೋಧನೆಗೆ ಸೀಮಿತಗೊಳಿಸಿದ್ದು, ಹಂತ ಹಂತವಾಗಿ ಪ್ರಾಯೋಗಿಕ ತರಬೇತಿಗೆ ಆದ್ಯತೆ ನೀಡಲಾಗುವುದು ಎಂದು ವಿವರಿಸಿದರು.

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಎಲ್ಲ ಕಾಲೇಜುಗಳ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಕಾಲಕಾಲಕ್ಕೆ ಧ್ವನಿವರ್ಧಕ ಬಳಸಿ ಮಾಹಿತಿ ನೀಡಬೇಕು. ಕಾಲಕಾಲಕ್ಕೆ ಸಕಾಲಿಕ ಸರ್ಕಾರದ ಆದೇಶ, ಸೂಚನೆಗಳನ್ನು ನೀಡಬೇಕು. ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅಗತ್ಯವಿರುವ ಪೂರಕ ಮಾಹಿತಿಯನ್ನು ಒದಗಿಸಲು ಪ್ರಾಧ್ಯಾಪಕರು ಗಮನ ನೀಡಲು ತಿಳಿಸಲಾಗಿದೆ ಎಂದರು.

ಸಭೆಯಲ್ಲಿ ಕುಲಸಚಿವ ಪ್ರೊ. ಬಸವರಾಜ ಬಣಕಾರ, ವಿವಿ ಕೋವಿಡ್ ನೋಡಲ್ ಅಧಿಕಾರಿ ಡಾ. ಶರತ್, ವಿವಿಧ ಕಾಲೇಜುಗಳ ಪ್ರಾಚಾರ್ಯರು, ನೋಡಲ್ ಅಧಿಕಾರಿಗಳು ಭಾಗವಹಿಸಿದ್ದರು.

> ಕ್ಯಾಂಟೀನ್, ಹಾಸ್ಟೆಲ್, ಕಾಲೇಜು ಕೊಠಡಿಗಳಲ್ಲಿ ಪ್ರತಿದಿನವೂ ಸ್ಯಾನಿಟೈಸೇಷನ್ ಮಾಡುವುದು, ಕಿಡಕಿ, ಬಾಗಿಲುಗಳನ್ನು ಸ್ವಚ್ಛಗೊಳಿಸುವುದು, ಸ್ಪರ್ಶಿಸಲು ಅವಕಾಶವಿರದ ಕಸದ ತೊಟ್ಟಿಯ ವ್ಯವಸ್ಥೆ ಮಾಡಲಾಗುತ್ತಿದೆ. ಕುಡಿಯುವ ನೀರನ್ನು ವಿದ್ಯಾರ್ಥಿಗಳೇ ತರಬೇಕು. ಊಟ-ಉಪಹಾರದ ಸಂದರ್ಭದಲ್ಲೂ ಸರ್ಕಾರದ ನಿಮಯಗಳನ್ನು ಪಾಲಿಸಲೇಬೇಕು. ಇದರಲ್ಲಿ ಯಾವುದೇ ಲೋಪವಾದರೂ ಕಾಲೇಜಿನ ಪ್ರಾಚಾರ್ಯರು ಮತ್ತು ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥರನ್ನೇ ಹೊಣೆ ಮಾಡಲಾಗುವುದು.

# ಕರುಣಾದಿಂದ ತಳ್ಳುವ ಗಾಡಿ ವಿತರಣೆ



ದಾವಣಗೆರೆ, ನ. 13- ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟಿನ ವತಿಯಿಂದ ರಾಣೇಬೆನ್ನೂರಿನಲ್ಲಿ ತಲೆ ಮೇಲೆ ಬುಟ್ಟಿ ಹೊತ್ತು ಬಿಸಿಲಲ್ಲಿ ತರಕಾರಿ ಮಾರುವ ಜಯ್ಯಮ್ಮ, ಶಂಕರಮ್ಮ, ನಾಗರತ್ನ ಮತ್ತು ಹೊನ್ನಮ್ಮ ಎಂಬ ನಾಲ್ವರು ಬಡ ಹೆಣ್ಣು ಮಕ್ಕಳಿಗೆ ತಳ್ಳುವ ತರಕಾರಿ ಗಾಡಿಗಳನ್ನು ಕೊಟ್ಟು ಅವರ ತಲೆಯ ಮೇಲಿನ ಹೊರೆಯನ್ನು ಕಡಿಮೆ ಮಾಡಲಾಗಿದೆ. ಈ ಕೆಲಸಕ್ಕೆ ಧನ ಸಹಾಯವಿತ್ತು ಸಹಕರಿಸಿದ ಕೆ.ಎಫ್.ಪಾಟೀಲ್ ಫೌಂಡೇಶನ್ ರವರಿಗೆ ಕರುಣಾ ಟ್ರಸ್ಟ್ ಕೃತಜ್ಞತೆ ಸಲ್ಲಿಸಿದೆ. ಕಾರ್ಯಕ್ರಮದಲ್ಲಿ ಆರ್.ಜಿ. ಹುಲ್ಮನಿ, ಅಮರನಾಥ್ ಭೂತೆ, ಚೌಡೇಶ್ವರಿ ದೇವಸ್ಥಾನದ ಕಮಿಟಿ ಸದಸ್ಯರಾದ ನಾಗರಾಜ್ ಮತ್ತು ಸಿದ್ದಪ್ಪನವರು ಮತ್ತು ಕರುಣಾ ಕಾರ್ಯಕರ್ತೆ ಪ್ರಭಾವತಿ ತಿಳುವಳ್ಳಿ, ಆರ್.ಬಿ. ಪಾಟೀಲ್ ಮತ್ತು ಲಿಂಗರಾಜ್ ಭಾಗವಹಿಸಿದ್ದರು.

# ಮಲೇಬೆನ್ನೂರಿಗೆ ಗುರೂಜಿ ಭೇಟಿ



ಮಲೇಬೆನ್ನೂರು, ನ.13-ಪಟ್ಟಣದ ಗ್ರಾಮ ದೇವತೆ ಶ್ರೀ ಏಕನಾಥೇಶ್ವರಿ ದೇವಸ್ಥಾನಕ್ಕೆ ಶುಕ್ರವಾರ ಭೇಟಿ ನೀಡಿದ್ದ ಸಂಪೂರ್ಣ ವರಮಹಾಲಕ್ಷ್ಮಿ ಸಂಸ್ಥಾಪಕರಾದ ಬ್ರಹ್ಮಾಂಡ ಗುರೂಜಿ ಶ್ರೀ ನರೇಂದ್ರ ಬಾಬು ಶರ್ಮ ಅವರು ಹೆಮ್ಮಾರಿ ಕೊರೊನಾ ಸಂಪೂರ್ಣ ನಿಯಂತ್ರಣಕ್ಕಾಗಿ ಪ್ರಾರ್ಥಿಸಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಅವರು ದೇವಸ್ಥಾನದ ಅರ್ಚಕ ಪ್ರಕಾಶಾಚಾರ್ ಮನೆಗೆ ಭೇಟಿ ನೀಡಿದ್ದರು. ಪುರಸಭೆ ಮುಖ್ಯಾಧಿಕಾರಿ ಧರಣೇಂದ್ರಕುಮಾರ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್ ಮತ್ತಿತರರು ಈ ವೇಳೆ ಗುರೂಜಿ ಅವರನ್ನು ಭೇಟಿ ಮಾಡಿದ್ದರು.

# ಪತ್ರಕರ್ತ ರವಿ ಬೆಳಗೆರೆ ನಿಧನಕ್ಕೆ ಮುತ್ತಣ್ಣ, ಪ್ರಕಾಶ್ ಶೋಕ



ದಾವಣಗೆರೆ, ನ.13- ಹಿರಿಯ ಪತ್ರಿಕೋದ್ಯಮಿ ರವಿ ಬೆಳಗೆರೆ ಅವರ ನಿಧನಕ್ಕೆ ವೀರಶೈವ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಅಜ್ಜಂಪುರ ಶೆಟ್ರು ಮೃತ್ಯುಂಜಯ ಮತ್ತು ತ್ರಿಶೂಲ್ ಕಲಾಭವನದ ಕಂದನಕೋವಿ ಪ್ರಕಾಶ್ ಅವರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ. ಕಳೆದ 5-6 ವರ್ಷಗಳ ಹಿಂದೆ ತ್ರಿಶೂಲ್ ಕಲಾಭವನದಲ್ಲಿ ನಡೆದ 'ಎಂದೂ ಮರೆಯದ ಹಾಡು' ಕಾರ್ಯಕ್ರಮದ ಚಿತ್ರೀಕರಣದ ಸಂದರ್ಭದಲ್ಲಿ ರವಿ ಬೆಳಗೆರೆ ಅವರೊಂದಿಗೆ ತಾವು ವೇದಿಕೆ ಹಂಚಿಕೊಂಡಿದ್ದನ್ನು ಅವರು ಮೆಲಕು ಹಾಕಿದ್ದಾರೆ.

# ಆರೋಗ್ಯದಾತನನ್ನು ಸ್ಮರಿಸುವುದೇ ಧನ್ವಂತರಿ ಜಯಂತಿಯ ವಿಶೇಷತೆ : ರಾಘವೇಂದ್ರ ಗುರೂಜಿ

ದಾವಣಗೆರೆ, ನ.13- ಅಶ್ವಯುಜ ಕೃಷ್ಣ ತ್ರಯೋದಶಿ ಅಂದರೆ ಧನ ತ್ರಯೋದಶಿ, ಧನ್ವಂತರಿ ಜಯಂತಿಯನ್ನು ಭಾರತೀಯರು ಅನಾದಿ ಕಾಲದಿಂದಲೂ ಆಚರಿಸುತ್ತಾ ಬಂದಿರು ತ್ತಾರೆ. ಆರೋಗ್ಯದಾತನಾದ ಧನ್ವಂತರಿ ದೇವ ರನ್ನು ಸ್ಮರಿಸಿ ಶ್ರದ್ಧಾಭಕ್ತಿಯಿಂದ ಪೂಜಿಸುವುದೇ ಧನ್ವಂತರಿ ಜಯಂತಿಯ ವಿಶೇಷತೆ ಆಗಿದೆ ಎಂದು ನಗರದ ಆದರ್ಶಯೋಗ ಪ್ರತಿಷ್ಠಾನದ ಯೋಗ ಗುರು ಡಾ॥ ರಾಘವೇಂದ್ರ ಗುರೂಜಿ ಅಭಿಪ್ರಾಯಪಟ್ಟರು.

ನಗರದ ಆದರ್ಶ ಯೋಗ ಪ್ರತಿಷ್ಠಾನದ ಶ್ರೀ ಮಹಾಮಾಯಿ ವಿಶ್ವಯೋಗ ಮಂದಿರ ಹಾಗೂ ಯೋಗ ಚಿಕಿತ್ಸಾ ಕೇಂದ್ರದಲ್ಲಿ ಇಂದು ಏರ್ಪಡಿಸಿದ್ದ ಧನ್ವಂತರಿ ಜಯಂತಿಯ ಪೂಜಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಧನ್ವಂತರಿ ಎಲ್ಲಾ ವೈದ್ಯರ ಪಾಲಿಗೆ ದೇವರು. ಮಹಾ ವಿಷ್ಣುವಿನ 24 ಅವತಾರಗಳಲ್ಲಿ 12ನೇ ಅವತಾರವೇ ಧನ್ವಂತರಿ ದೇವರು ಶ್ರೀ ಸೂಕ್ತದಲ್ಲಿ ಭೂಮಿ, ಜಲ, ವಾಯು, ಅಗ್ನಿ, ಸೂರ್ಯ ಇವುಗಳನ್ನು 'ಧನ'ವೆಂದೇ ಕರೆಯಲಾಗಿದೆ. ಯಾವ



ಧನಕ್ಕೆ ನಿಜವಾದ ಅರ್ಥವಿದೆಯೋ ಅದುವೇ ನಿಜವಾದ ಲಕ್ಷ್ಮಿ.

ಆದ್ದರಿಂದ ಈ ದಿನ ಯಾರು ಧನ್ವಂತರಿಯನ್ನು ಆರಾಧಿಸುತ್ತಾರೋ ಅವರಿಗೆ ಸಕಲ ಐಶ್ವರ್ಯ, ಆರೋಗ್ಯವು ಸಮೃದ್ಧಿಯಾಗಿ ಲಭಿಸುತ್ತದೆ ಎಂದು ಗುರೂಜಿಯವರು ಧನ್ವಂತರಿ ಜಯಂತಿಯ ಮಹತ್ವವನ್ನು ವಿವರಿಸಿದರು. ಭಾರತೀಯರು ನಮಸ್ಕಾರ ಮಾಡುವ ಪದ್ಧತಿಯಲ್ಲಿರುವ ವೈಜ್ಞಾನಿಕ ಆರೋಗ್ಯ ಸಂಪತ್ತನ್ನು ಉದಾಹರಣೆ ಮೂಲಕ ತಿಳಿಸಿಕೊಟ್ಟರು.

ಧನ್ವಂತರಿ ಪೂಜಾ ವಿಧಿ ವಿಧಾನಗಳನ್ನು ವಿಧಿವತ್ತಾಗಿ ನೆರವೇರಿಸಿದ ಶ್ರೀ ಹನುಮಂತ ಶಾಸ್ತ್ರಿಗಳು ಮಾತನಾಡಿ, ಧನ್ವಂತರಿ ದೇವರ ಆರಾಧನೆಯಿಂದ ಆರೋಗ್ಯ, ನೆಮ್ಮದಿ, ಧನ ಪ್ರಾಪ್ತಿಯಾಗುತ್ತದೆ ಎಂದು ತಿಳಿಸಿದರು.

ಚಿನ್ನ-ಬೆಳ್ಳಿ ವರ್ತಕ ಮುರಳಿಧರ ಆಚಾರ್ಯ ಮಾತನಾಡಿದರು. ಎಸ್.ಬಿ.ಐ. ವಿಮಾ ಕಂಪನಿಯ ಗಿರೀಶ್, ಜಿಲ್ಲಾ ಪಂಚಾಯತ್ ಪಿಡಿಓ ಶ್ರೀಮತಿ ಸುರೇಖಾ ದಂಪತಿ ಶ್ರೀ ಧನ್ವಂತರಿ ಪೂಜಾ ಕೈಂಕರ್ಯವನ್ನು, ಹನುಮಂತ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ನೆರವೇರಿಸಿದರು.

ಪ್ರತಿಷ್ಠಾನದ ಹೆಚ್. ಮಂಜುನಾಥ್ ಹೂವಿನ ಅಲಂಕಾರ ಸೇವೆ, ಶ್ರೀಮತಿ ಮಂಗಳಗೌರಿ ರಂಗೋಲಿ ಸೇವೆ, ಶ್ರೀಮತಿ ಜ್ಯೋತಿ ಲಕ್ಷ್ಮಿ ವಾಸುದೇವ್ ಪ್ರಸಾದ ಸೇವೆಯನ್ನು ಅರ್ಪಿಸಿದರು. ಜೀವ ವಿಮಾ ನಿಗಮದ ಅಭಿವೃದ್ಧಿ ಅಧಿಕಾರಿ ಎ. ಆರ್. ಶೇಷಾದ್ರಿ, ಅಂಚೆ ಇಲಾಖೆಯ ವೇದಾವತಿ ಮತ್ತು ಸುನಿತಾ ರವೀಂದ್ರ, ಚಿ.ಲಿಖಿತ್, ಅಣ್ಣೇಶ್, ಶಿಕ್ಷಕಿ ರತ್ನಮ್ಮ ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಬಿಎಂಶ್ರೀ ಕವನಗಳು ಹೊಸಗನ್ನಡದ ಕವಿಗಳಿಗೆ ಸ್ಫೂರ್ತಿ

ದಾವಣಗೆರೆ, ನ.13- ಬಿ.ಎಂ. ಶ್ರೀಕಂಠಯ್ಯ ಅವರ ಕವನಗಳು ಜನರನ್ನು ಮೋಡಿ ಮಾಡಿ ಹಿಡಿದಿಟ್ಟಿದ್ದವು. ಮುಂದಿನ ಹೊಸಗನ್ನಡದ ಪೀಳಿಗೆಯ ಕವಿಗಳಿಗೆ ಹಾಗೂ ಅವರ ಕವಿತೆಗೆ ಸ್ಫೂರ್ತಿ ನೀಡಿದವು ಎಂದು ಹಿರಿಯ ಸಾಹಿತಿ ಪ್ರೊ. ಎಚ್.ಎಸ್. ಹರಿಶಂಕರ್ ನುಡಿದರು.

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಏರ್ಪಡಿಸಿದ್ದ ಅಂತರ್ಜಾಲ ಕನ್ನಡ ನುಡಿ ಹಬ್ಬ ಕಾರ್ಯಕ್ರಮದಲ್ಲಿ ಆಚಾರ್ಯ ಬಿಎಂಶ್ರೀ ಅವರ ಸಾಹಿತ್ಯ ವಿಷಯ ಕುರಿತಾಗಿ ಅವರು ಉಪನ್ಯಾಸ ನೀಡಿದರು.

ಆಧುನಿಕ ಕನ್ನಡದ ನವಯುಗದ ಪ್ರವರ್ತಕರಲ್ಲಿ ಅಗ್ರಗಣ್ಯರಾಗಿದ್ದ ಬಿಎಂಶ್ರೀ ಕನ್ನಡದ



ಕಣ್ವರು. ಹೊಸಗನ್ನಡ ಕಾವ್ಯ ಕುಲಪತಿಗಳು ಎಂದು ನಾಡೇ ಗೌರವಿಸಿದೆ. ಇವರು ನವೋದಯ ಕಾವ್ಯ ಸಾಹಿತ್ಯದ ಪ್ರವರ್ತಕ,ಪಿತಾಮಹಎಂದೇ ಕರೆಸಿಕೊಂಡಿದ್ದಾರೆ. ಜನರಿಗೆ ತಿಳಿಯದ ಭಾಷೆಯಲ್ಲಿ ಬರೆಯುವುದರಲ್ಲಿ ಯಾವ ಬುದ್ಧಿವಂತಿಕೆಯೂ ಇಲ್ಲ. ಹೊಸಗನ್ನಡವನ್ನೇ ಎಲ್ಲರೂ ಹಿಡಿಯಬೇಕು ಎಂದು ಕರೆಕೊಟ್ಟರು. ನವೋದಯ ಕನ್ನಡ ಸಾಹಿತ್ಯಕ್ಕೆ ಅವರು ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ತಾಲ್ಲೂಕು ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಬಿಎಂಶ್ರೀ ಆಧುನಿಕ ಸಾಹಿತ್ಯದ ಪ್ರವರ್ತಕ. ಕನ್ನಡ ಸಾಹಿತ್ಯ ಪರಿಷತ್‌ಗೆ ಮಹಾನ್ ಕಾಯಕಲ್ಪ ತಂದುಕೊಟ್ಟ ಮಹಾನ್ ಚೇತನ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನುಡಿ ಎಂಬ ಪತ್ರಿಕೆಯನ್ನು ಪ್ರಕಟಿಸಿದ ಪ್ರಥಮರು. ಕಸಾಪ ನಡೆಸುತ್ತಿರುವ ಪರೀಕ್ಷೆಗಳ ಆರಂಭಕ್ಕೂ ಕಾರಣೀಭೂತರಾದರು. ಪರಿಷತ್ತಿನ ಲೋಗೋ, 'ಸಿರಿಗನ್ನಡಂ ಗೆಲ್ಗೆ' ಎಂಬ ಘೋಷವಾಕ್ಯವನ್ನು ಅನುಷ್ಠಾನಗೊಳಿಸಿದರು ಎಂದು ಸ್ಮರಿಸಿದರು.

ವೀಣಾ ಕೃಷ್ಣಮೂರ್ತಿ ಸ್ವಾಗತಿಸಿದರು. ಜಾನಪದ ಕಲಾತಂಡದ ಸದಸ್ಯೆ ರುದ್ರಾಕ್ಷಿ ಬಾಯಿ ಮತ್ತು ಸಂಗಡಿಗರು ಸುಗಮ ಸಂಗೀತ ನಡೆಸಿಕೊಟ್ಟರು.

# ಹರಿಹರ ವ್ಯವಸಾಯೋತ್ಪನ್ನ ಸಂಘದ ಅಧ್ಯಕ್ಷರಾಗಿ ರಾಮನಗೌಡ ಬನ್ನಿಕೋಡು

**ಉಪಾಧ್ಯಕ್ಷರಾಗಿ ಸಣ್ಣಚಂದ್ರನಾಯ್ಕ ಕೊಕ್ಕನೂರು ಆಯ್ಕೆ**

ಹರಿಹರ, ನ.13- ಹರಿಹರ ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘದ ಆಡಳಿತ ಮಂಡಳಿ ಅಧ್ಯಕ್ಷರಾಗಿ ರಾಮನಗೌಡ ಬನ್ನಿಕೋಡು ಹಾಗೂ ಉಪಾಧ್ಯಕ್ಷರಾಗಿ ಸಣ್ಣಚಂದ್ರ ನಾಯ್ಕ ಕೊಕ್ಕನೂರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾ ಪ್ರಕ್ರಿಯೆಯಲ್ಲಿ ಕೆ.ಬಿ. ರಾಮಚಂದ್ರಪ್ಪ, ತಹಶೀಲ್ದಾರ್ ಎನ್.ಜಿ. ರುದ್ರಪ್ಪ, ಸಹಾಯಕ ರಿಟರ್ನಿಂಗ್ ಅಧಿಕಾರಿ ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ ಹರಿಹರ ಸಂಘದ ಕಾರ್ಯದರ್ಶಿ ಎಂ.ಎಸ್. ಗಣೇಶ್ ಹಾಗೂ ಲೆಕ್ಕಿಗ ಕೆ. ಮಂಜುನಾಥ್ ಉಪಸ್ಥಿತರಿದ್ದರು.

ನಿರ್ದೇಶಕರುಗಳಾದ ಕೆ.ಹೆಚ್. ಮಹೇಶ್ ಕೆಂಚನಹಳ್ಳಿ, ಎಂ. ನಿಂಗನಗೌಡ ಕೊಕ್ಕನೂರು, ಎನ್.ಜಿ. ಜಯಣ್ಣ ನಂದಿಗಾವಿ, ಹೆಚ್. ಆಂಜನೇಯ ಕುಂಬಳೂರು, ಸಿ.ಬಿ. ಅಬ್ದುಲ್ ಹಾದಿ ಮಲೇಬೆನ್ನೂರು, ಟಿ. ಬಸವರಾಜ್ ವಾಸನ, ಎ. ಗಂಗಾಧರಪ್ಪ ಕೆ. ಬೇವಿನಹಳ್ಳಿ, ಕೆ. ಅಬಜರ್ ಹರಿಹರ, ಎನ್. ರುದ್ರಪ್ಪ ಕಮಲಾಪುರ, ವನಜಾಕ್ಷಮ್ಮ ಸಂಕ್ಲೀಪುರ, ಅನುಪಮ ಭಾನುವಳ್ಳಿ, ಕಾಂತರಾಜ್ ಬನ್ನಿಕೋಡು, ಕೆಂಚವೀರಯ್ಯ ನಂದಿಗುಡಿ ಪಾಲ್ಗೊಂಡಿದ್ದರು.

# ಸಂಸದರು ಶ್ವೇತಪತ್ರ ಹೊರಡಿಸಲಿ: ಎಂ.ಎಸ್.ಕೆ. ಶಾಸ್ತ್ರಿ

ದಾವಣಗೆರೆ, ನ.13- ದಾವಣಗೆರೆಯಲ್ಲಿ ವಿಮಾನ ನಿಲ್ದಾಣ ನಿರ್ಮಿಸುವಂತೆ ಮನವಿ ಮಾಡಿದ್ದರೂ ಕೂಡ ಇದುವರೆಗೂ ಯಾವುದೇ ಹೆಜ್ಜೆ ಇಡದ ಸಂಸದ ಜಿ.ಎಂ. ಸಿದ್ದೇಶ್ವರ ಅವರು ರಾಜೀನಾಮೆ ನೀಡಲಿ.

ಜಿಲ್ಲೆಯಲ್ಲಿ ವಿಮಾನ ನಿಲ್ದಾಣ ಏಕೆ ಆಗಲಿಲ್ಲ ಎಂಬುದಕ್ಕೆ ಶ್ವೇತಪತ್ರ ಹೊರಡಿಸಬೇಕು ಎಂದು ದಾವಣಗೆರೆ ಎರಡನೇ ರಾಜಧಾನಿ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಆಗ್ರಹಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ 7 ವಿಮಾನ ನಿಲ್ದಾಣಗಳು ಕಾರ್ಯಾರಂಭಕ್ಕೆ ಅಣಿಯಾಗಿ ನಿಂತಿವೆ. ಆದರೆ, ಇದುವರೆಗೂ ದಾವಣಗೆರೆಯಲ್ಲಿ ವಿಮಾನ ನಿಲ್ದಾಣದ ಸೊಲ್ಲೇ ಇಲ್ಲ ಎಂದು ಅವರು ದೂರಿದ್ದಾರೆ.

ಈ ಸಂಬಂಧ ಮೋದಿಜಿ, ಜೆ.ಪಿ. ನಡ್ಡಾ ಹಾಗೂ ಗೃಹ ಸಚಿವರಿಗೆ ಮನವರಿಕೆ ಮಾಡಲಾಗಿದೆ ಎಂದು ಶಾಸ್ತ್ರಿ ತಿಳಿಸಿದ್ದಾರೆ.

# ಎಫ್.ಆರ್.ಪಿ. ದರ ಅನ್ಯಾಯ: ಕಬ್ಬು ಬೆಳೆಗಾರರ ಪ್ರತಿಭಟನೆ

ಬೆಂಗಳೂರು, ನ. 13- ರಾಜ್ಯ ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಆಯುಕ್ತರ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ್ದು, ಕಬ್ಬಿನ ಎಫ್.ಆರ್.ಪಿ. ದರ ರೈತರಿಗೆ ಅನ್ಯಾಯವಾಗಿದೆ ಎಂದು ದೂರಿದ್ದಾರೆ.

ಕಬ್ಬಿಗೆ ನ್ಯಾಯಯುತ ದರ ನಿಗದಿಪಡಿಸಬೇಕು, ಕಬ್ಬಿನಿಂದ ಬರುವ ಸಕ್ಕರೆ ಇಳುವರಿಯನ್ನು ಕಡಿಮೆ ತೋರುತ್ತಿರುವ ಸಕ್ಕರೆ ಕಾರ್ಖಾನೆಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು, ಕಬ್ಬಿನ ತೂಕದಲ್ಲಿ ತಪ್ಪಿಸಲು ಕಠಿಣ ಆದೇಶ ಹೊರಡಿಸಬೇಕು ಎಂದವರು ಆಗ್ರಹಿಸಿದ್ದಾರೆ.

ಕಬ್ಬು ಬೆಳೆಗಾರರು ಹಾಗೂ ಸಕ್ಕರೆ ಕಾರ್ಖಾನೆಗಳ ನಡುವೆ ದ್ವಿಪಕ್ಷೀಯ ಒಪ್ಪಂದ ಪತ್ರ ಕಡ್ಡಾಯವಾಗಿ ಜಾರಿಯಾಗಬೇಕು ಕಬ್ಬಿನ ಉಪ ಉತ್ಪನ್ನಗಳ ಲಾಭ ರೈತರಿಗೆ ಹಂಚಿಕೆಯಾಗಬೇಕು, ಕಬ್ಬಿನ ಹಣ ವಿಳಂಬವಾಗಿ ಪಾವತಿಸುವ ಕಾರ್ಖಾನೆಗಳಿಂದ ಶೇ. 15ರ ಬಡ್ಡಿ ಸೇರಿಸಿ ಹಣ ಕೊಡಿಸಬೇಕು ಎಂಬ ಒತ್ತಾಯಗಳ ಬಗ್ಗೆ ರಾಜ್ಯ ಕಬ್ಬು ಬೆಳೆಗಾರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು,

ನಂತರ ಸಕ್ಕರೆ ಸಚಿವ ಶಿವರಾಮ್ ಹೆಬ್ಬಾರ್ ಕಬ್ಬು ಅಭಿವೃದ್ಧಿ ಆಯುಕ್ತರು ಅಕ್ರಂಪಾಷ ಹಾಗೂ ವಾಣಿಜ್ಯ ಕೈಗಾರಿಕಾ ಇಲಾಖೆ ಕಾರ್ಯದರ್ಶಿ ಕುಮಾರ್ ನಾಯಕ್‌ರವರ ಭೇಟಿ ಮಾಡಿ ಚರ್ಚಿಸಿದರು. ಇದೇ ದಿನಾಂಕ 20ರೊಳಗಾಗಿ ಮುಖ್ಯಮಂತ್ರಿಗಳ ಜೊತೆ ಸಭೆ ನಡೆಸಿ ತೀರ್ಮಾನಿಸಲು, ಮುಖ್ಯಮಂತ್ರಿಗಳ ಸಮಯ ಕೇಳಲಾಗಿದೆ ಎಂದು ಸಚಿವರು ತಿಳಿಸಿದರು.

# ಬೆಳಗೆರೆ ನಿಧನಕ್ಕೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಂತಾಪ

ದಾವಣಗೆರೆ, ನ.13- ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಪತ್ರಿಕೋದ್ಯಮದಲ್ಲಿ ಛಾಪು ಮೂಡಿಸಿದ್ದ ಹಿರಿಯ ಪತ್ರಿಕೋದ್ಯಮಿ ಮತ್ತು ಸಾಹಿತಿ ರವಿ ಬೆಳಗೆರೆ ಅವರ ನಿಧನಕ್ಕೆ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಪತ್ರಿಕೋದ್ಯಮದ ಜೊತೆ - ಜೊತೆಗೆ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲೂ ಸೇವೆ ಸಲ್ಲಿಸುತ್ತಿದ್ದ ರವಿ ಬೆಳಗೆರೆ ಅವರ ನಿಧನದಿಂದಾಗಿ ಪತ್ರಿಕೋದ್ಯಮ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಸಂಘದ ಅಧ್ಯಕ್ಷ ವೀರಪ್ಪ ಎಂ. ಬಾವಿ, ಸಂಘದ ರಾಜ್ಯ ನಿರ್ದೇಶಕ ಕೆ. ಚಂದ್ರಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇ.ಎಂ. ಮಂಜುನಾಥ, ಖಜಾಂಚಿ ಮಾಗನೂರು ಮಂಜಪ್ಪ ಅವರುಗಳು ಹೇಳಿದ್ದಾರೆ.

# ಆವರಗೆರೆಯಲ್ಲಿ ಮಕ್ಕಳ ದಿನಾಚರಣೆ

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಜಿಲ್ಲಾ ಸಮಿತಿ ಮತ್ತು ಶ್ರೀ ಕಾಯಕ ಯೋಗಿ ಬಸವ ಪರಿಸರ ವೇದಿಕೆ ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 9 ಗಂಟೆಗೆ ಶ್ರೀ ಸಿದ್ದಲಿಂಗೇಶ್ವರ ವಿದ್ಯಾಸಂಸ್ಥೆಯಲ್ಲಿ ಮಕ್ಕಳ ದಿನಾಚರಣೆ ನಡೆಯಲಿದೆ.

ಕಾರ್ಯಕ್ರಮವನ್ನು ಅಂಗಡಿ ಸಂಗಪ್ಪ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಕು. ಬಿ. ತೇಜಸ್ವಿನಿ, ಕು. ಪೂಜಾ ವಿ.ಎಸ್., ಶ್ರೀಮತಿ ರೇವಮ್ಮ ಎಸ್., ಎನ್.ಟಿ. ರುದ್ರಪ್ಪ, ಎಂ. ಗುರುಸಿದ್ದಸ್ವಾಮಿ ಭಾಗವಹಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಸುಗ್ಲಾದೇವಿ ಎ.ಹೆಚ್. ವಹಿಸುವರು.

# ಭಾರತದ ವಿನಿಮಯ ಮೀಸಲು 568 ಶತಕೋಟಿ ಡಾಲರ್‌ಗೆ ಏರಿಕೆ

ಮುಂಬೈ, ನ. 13 – ಭಾರತದ ವಿದೇಶಿ ವಿನಿಮಯ ಮೀಸಲು ನವೆಂಬರ್ 6ರಂದು ಸಾರ್ವಕಾಲಿಕ ದಾಖಲೆಯಾದ 568.494 ಶತಕೋಟಿ ಡಾಲರ್‌ಗಳಿಗೆ ತಲುಪಿದೆ ಎಂದು ರಿಸರ್ವ್ ಬ್ಯಾಂಕ್ ಅಂಕಿ - ಅಂಶಗಳು ತಿಳಿಸಿವೆ. ನವೆಂಬರ್ 6ರಂದು ಬಂಗಾರದ ಮೀಸಲು ಸಹ 1.328 ಶತಕೋಟಿ ಡಾಲರ್ ಹೆಚ್ಚಾಗಿದ್ದು, 37.587 ಶತಕೋಟಿ ಡಾಲರ್‌ಗಳಿಗೆ ತಲುಪಿದೆ ಎಂದು ರಿಸರ್ವ್ ಬ್ಯಾಂಕ್ ತಿಳಿಸಿದೆ.

# ಟೈಲರ್ಸ್ ಕಲ್ಯಾಣ ಮಂಡಳಿ ಜಾರಿಗೆ ಆಗ್ರಹ



ದಾವಣಗೆರೆ,ನ.13- ಟೈಲರ್ಸ್ ವೃತ್ತಿ ಮಾಡುತ್ತಿರುವ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಟೈಲರ್ಸ್ ಕಲ್ಯಾಣ ಮಂಡಳಿ ಜಾರಿಗೆ ತರಬೇಕೆಂದು ಒತ್ತಾಯಿಸಿ, ಕರ್ನಾಟಕ ರಾಜ್ಯ ಟೈಲರ್ಸ್ ಮತ್ತು ಸಹಾಯಕರ ಫೆಡರೇಷನ್ ವತಿಯಿಂದ ನಿನ್ನೆ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.


ತಾಲ್ಲೂಕು ಕಚೇರಿ ಎದುರು ಫೆಡರೇಷನ್ ನೇತೃತ್ವದಲ್ಲಿ ಜಮಾಯಿಸಿದ್ದ ಟೈಲರ್‌ಗಳು ಮತ್ತು ಅವರ ಸಹಾಯಕರು, ಬೇಡಿಕೆ ಈಡೇರಿಸದ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ತಹಶೀಲ್ದಾರ್ ಮುಖಾಂತರ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಫೆಡರೇಷನ್‌ನ ರಾಜ್ಯ ಕಾರ್ಯದರ್ಶಿ ಆವರಗೆರೆ ಚಂದ್ರು, ಕರ್ನಾಟಕ ರಾಜ್ಯಾದ್ಯಂತ ಟೈಲರ್ ವೃತ್ತಿ ಮಾಡುವವರು ಅಸಂಘಟಿತ ವಲಯದ ವ್ಯಾಪ್ತಿಯಲ್ಲಿ ಬರಲಿದ್ದು, ಇವರು ಸರ್ಕಾರದಿಂದ ಯಾವುದೇ ಸೌಲಭ್ಯಗಳಿಲ್ಲದೇ ಬಳಲುತ್ತಿದ್ದಾರೆ ಎಂದು ಆರೋಪಿಸಿದರು.

ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಬಟ್ಟೆ ಹೊಲಿಯುವ ಟೈಲರ್‌ಗಳು ಮತ್ತು ಸಹಾಯಕರು, ಸಣ್ಣ ಗಾರ್ಮೆಂಟ್‌ಗಳಲ್ಲಿ ಟೈಲರಿಂಗ್ ವೃತ್ತಿ ಮಾಡುವವರ ಸಂಖ್ಯೆ ರಾಜ್ಯದಲ್ಲಿ 20 ಲಕ್ಷದಷ್ಟಿದೆ ಎಂಬುದಾಗಿ ಅಂದಾಜಿಸಲಾಗಿದೆ. ಇವರ ಪೈಕಿ ಬಹುತೇಕರು ಪ್ರೌಢ ಶಿಕ್ಷಣ, ಪಿಯುಸಿ, ಪದವಿ ಪಡೆದವರು ಇದ್ದು, ಇವರ್‍ಯಾರೂ ಸಹ ತಮಗೆ ಸರ್ಕಾರಿ ನೌಕರಿ ಸಿಗಲಿ ಎಂಬುದಾಗಿ ಕಾಯುತ್ತಾ ಕೂರದೇ ಟೈಲರ್ ವೃತ್ತಿ ಕೈಗೊಂಡು ಸ್ವಾವಲಂಬಿ ಗಳಾಗಿ ಬದುಕು ಸಾಗಿಸುತ್ತಿದ್ದಾರೆ. ಆದರೆ, ಇವರು ಕಾರ್ಮಿಕ ಕಾಯ್ದೆಗೆ ಒಳಪಡದೇ ಇರುವುದರಿಂದ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿ ಜೀವನ ನಡೆಸುವುದು ದುಸ್ತರವಾಗಿದೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಫೆಡರೇಷನ್ ರಾಜ್ಯ ಉಪಾಧ್ಯಕ್ಷ ಸಿ.ರಮೇಶ್, ರಾಜ್ಯ ಸಂಚಾಲಕ ಗದಿಗೇಶ ಪಾಳೇದ್, ಮುಖಂಡರಾದ ಪುಷ್ಪಾ, ಯಶೋಧ, ಸರೋಜಾ, ಶಾಂತಕುಮಾರ್, ಮಂಜುಳಾ ಸೇರಿದಂತೆ ಇತರರು ಭಾಗವಹಿಸಿದ್ದರು.

ಅಭಿನಂದನೆಗಳು



ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಳಿಗೆ ವೃತ್ತಿಪರ ನಿರ್ದೇಶಕರಾಗಿ ನೇಮಕಗೊಂಡಿರುವ ಹಿರಿಯ ವಕೀಲರೂ, ನಮ್ಮ ಮಾರ್ಗದರ್ಶಕರೂ ಆದ
ಶ್ರೀ ಮಲ್ಲಿಕಾರ್ಜುನ ಕಣವಿ
ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

- ದೇವರಮನೆ ಎನ್. ಬಸವರಾಜ್, ಬಿ.ಎಸ್ಸಿ. ಎಲ್‌ಎಲ್.ಬಿ. ವಕೀಲರು
- ಗೊಳಸಂಗಿ ಎಸ್. ಸಣ್ಣವೀರಪ್ಪ, ಬಿ.ಕಾಂ. ಎಲ್‌ಎಲ್.ಬಿ. ವಕೀಲರು
- ಡಿ.ಎಸ್. ರಾಜಶೇಖರ್, ಬಿ.ಎ. ಎಲ್‌ಎಲ್.ಬಿ. ವಕೀಲರು

ಹಾಗೂ ಸಮಸ್ತ ವಕೀಲ ಬಾಂಧವರಿಗೂ ಮತ್ತು ದಾವಣಗೆರೆ ಸಮಸ್ತ ನಾಗರಿಕರಿಗೂ ದೀಪಾವಳಿ ಹಬ್ಬದ ಶುಭಾಶಯಗಳು.

ದಾವಣಗೆರೆ ಮಹಾನಗರದ ಸಮಸ್ತ ಜನತೆಗೆ, ವಿಶೇಷವಾಗಿ 32ನೇ ವಾರ್ಡ್‌ನ ನಾಗರಿಕರಿಗೆ ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳು

ಸ್ವಾಭಿಮಾನಿ ಬಿಜೆಪಿ ಕಾರ್ಯಕರ್ತರ ಬೆಂಬಲದಿಂದ ಹಾಗೂ ಮೂವತ್ತೆರಡನೇ ವಾರ್ಡಿನ ಮತದಾರರ, ನಾಗರಿಕರ ಬೆಂಬಲದಿಂದ ಪಕ್ಷೇತರ ಅಭ್ಯರ್ಥಿಯಾಗಿ ಜಯಗಳಿಸಿ ಇಂದಿಗೆ 1 ವರ್ಷವಾಯಿತು.
ಇದು ನಿಜವಾಗಿಯೂ ಕಾರ್ಯಕರ್ತರ ಗೆಲುವು, ಮತದಾರರ ಗೆಲುವು, ಸ್ವಾಭಿಮಾನಿಗಳ ಗೆಲುವು !



ಶ್ರೀಮತಿ ಉಮಾ ಪ್ರಕಾಶ್
ಸದಸ್ಯರು,
ಮಹಾನಗರ ಪಾಲಿಕೆ
32ನೇ ವಾರ್ಡ್, ದಾವಣಗೆರೆ.

ಪ್ರಕಟಣೆ :
32ನೇ ವಾರ್ಡ್‌ನ ಬಿಜೆಪಿ ಸ್ವಾಭಿಮಾನಿ ಕಾರ್ಯಕರ್ತರು

ambika furniture

ದೀಪಾವಳಿ ಹಬ್ಬದ ಪ್ರಯುಕ್ತ ಭಾರಿ ರಿಯಾಯಿತಿ ಮಾರಾಟ

upto 45% off

0% EMI OFFER

ದಿನಾಂಕ 11-11-2020 ರಿಂದ 14-11-2020 ರ ವರೆಗೆ ಮಾತ್ರ

*T&C Apply

Heartwood

BCL

# 843, Mahaveer Tower Building, Near Shanthi Sagar Hotal, Ashok Road, Davangere-577 002.
+91 88844 88092 | 88844 88192
08192 230377 | 231311.

#789/6763, Basaveshwara Complex, 100 Feet main Road, Near Axis Bank, Rajendra Nagar, Simoga-577 204.
+91 88844 88198
08182 401412

ಗ್ರಾಹಕರ ಸೇವೆಯನ್ನೇ ಮುಖ್ಯ ಗುರಿಯನ್ನಾಗಿಸಿಕೊಂಡಿರುವ

ನಿಮ್ಮ 'ರವಿತೇಜ'

ಗ್ರಾಹಕರ ಅಪೇಕ್ಷೆಯ ಮೇರೆಗೆ

ಅನುಕೂಲವಾಗುವಂತೆ

ನಮ್ಮ ಹೊಸ ಶೋ ರೂಂಗಳನ್ನು

ವಿಜಯಲಕ್ಷ್ಮಿ ರಸ್ತೆಯಲ್ಲಿ

ಹಾಗೂ

ಚೇತನಾ ಹೋಟೆಲ್ ರಸ್ತೆಯಲ್ಲಿ

ನೂತನವಾಗಿ ಆರಂಭಿಸಲಾಗಿದೆ.

ದೀಪಾವಳಿಯನ್ನು ನಮ್ಮೆಲ್ಲಾ

ಅಂಗಡಿಗಳಲ್ಲಿ ಸಂಭ್ರಮಿಸಿ...

ಆನಂದಿಸಿ...



ನವನವೀನತೆಯ ಉಡುಪುಗಳಿಗಾಗಿ ಇಂದೇ ಭೇಟಿ ಕೊಡಿ

Raviteja Textiles

Silk Sarees | Mens Wear | Kids Wear
Chamarajpet Ph. : 82963 50074

Raviteja Garments, Chamarajpet Ph. : 98800 32999
Raviteja's, Vidyanagar Ph. : 98803 82611
Raviteja Fashion,
Chetana Hotel Road Road Ph. : 95916 33871
Raviteja Silks & Sarees,
Vijayalakshmi Road Ph. : 98444 66844, 97419 53993

ನಮ್ಮೆಲ್ಲಾ ಚಂದಾದಾರರಿಗೂ ಹಾಗೂ ಸರ್ವರಿಗೂ

ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳು

ದಾವಣಗೆರೆ ಜಿಲ್ಲಾ ಚಿಟ್‌ಸ್ಟರ್ಸ್ ಸಂಘ (ನೋಂ.,)

ಸಂಪರ್ಕ ವಿಳಾಸ: ಅಂದನೂರು ಚಿಟ್ಸ್ (ರಿ.) #571/10, ಮೊದಲನೇ ಮಹಡಿ, ಸಪ್ತಗಿರಿ ಬಿಲ್ಡಿಂಗ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.



ಅಧ್ಯಕ್ಷರು
ಎಂ. ರಂಗರಾವ್
ಭಾಗ್ಯರಂಗ ಚಿಟ್ಸ್ ಪ್ರೈ. ಲಿ.,
ಮೊ. : 99169 59799



ಉಪಾಧ್ಯಕ್ಷರು
ಸತ್ಯನಾರಾಯಣ ಮೂರ್ತಿ ಬಿ.
ನವೋದಯ ಚಿಟ್ ಫಂಡ್
ಮೊ. : 99451 59582



ಕಾರ್ಯದರ್ಶಿ
ಅಂದನೂರು ರಾಜೇಶ್
ಅಂದನೂರು ಚಿಟ್ಸ್
ಮೊ. : 98804 88688



ನಿರ್ದೇಶಕರು
ಷಣ್ಮುಖ ರಾಜು ಗುಜ್ಜರ್
ಮಾರುತಿ ಚಿಟ್ ಫಂಡ್ಸ್
ಮೊ. : 94483 39231



ಜಂಟಿ ಕಾರ್ಯದರ್ಶಿ
ರೆಡ್ಡಯ್ಯ, (ಚಿನ್ನು)
ಶ್ರೀ ವಾಸವಾಂಬ ಚಿಟ್ ಫಂಡ್ಸ್
ಮೊ. : 98862 52456




ನಿರ್ದೇಶಕರು
ಲೋಹಿತ್
ಸ್ಕಂದ ಚಿಟ್ಸ್
ಮೊ. : 80886 96717



ನಿರ್ದೇಶಕರು
ಎ. ಪದ್ಮರಾಜ್
ಗುರು ರಾಘವೇಂದ್ರ ಚಿಟ್ ಫಂಡ್ಸ್
ಮೊ. : 99866 52834



ನಿರ್ದೇಶಕರು
ಅಗಡಿ ಸತೀಶ್
ಶ್ರೀ ಶ್ರೀನಿವಾಸ ಚಿಟ್ ಫಂಡ್ಸ್
ಮೊ. : 94488 50414



ನಿರ್ದೇಶಕರು
ಎಲ್.ಎಂ. ಉಮಾಪತಿ
ಶಿವಲಿಂಗಸ್ವಾಮಿ ಚಿಟ್ಸ್ ಪ್ರೈ. ಲಿ.,
ಮೊ. : 94490 78077



ನಿರ್ದೇಶಕರು
ಪಿ. ರವಿ
ಕೆಪಿಆರ್ ಶ್ರೀ ರಕ್ಷಾ ಚಿಟ್ಸ್
ಮೊ. : 78997 74727



ನಿರ್ದೇಶಕರು
ಮಲ್ಲಿಕಾರ್ಜುನ ಸ್ವಾಮಿ
ಶ್ರೀ ಗುರು ಚಿಟ್ ಫಂಡ್
ಮೊ. : 97409 51275

ನಮ್ಮ ದಾವಣಗೆರೆ ಜಿಲ್ಲಾ ಚಿಟ್‌ಫ್ವರ್ಸ್ ಸಂಘದ ಸದಸ್ಯ ಸಂಸ್ಥೆಗಳಲ್ಲಿ ಸದಸ್ಯತ್ವ ಪಡೆಯಿರಿ.
ರೂ. 50 ಸಾವಿರಗಳಿಂದ ರೂ. 50 ಲಕ್ಷದವರೆಗೆ ಚೀಟಿಯ ಗುಂಪುಗಳಿವೆ. ನಿಮ್ಮ ಹೂಡಿಕೆಯು ಲಾಭ ಗಳಿಸುವುದು ಗ್ಯಾರಂಟಿ

ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಪಾಡಿ
ಕೊರೊನಾ ಸೋಂಕನ್ನು ತೊಲಗಿಸೋಣ.

ಆರ್‌ಬಿಐ ಹೇಳುತ್ತೆ!
ಜಾಣರಾಗಿರಿ, ಜಾಗರೂಕರಾಗಿರಿ

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte